ಮಂಜು ದಂಡಿನಶಿವರ ಸಂಪಾದಕತ್ವದಲ್ಲಿ...

ಕನ್ನಡ ಮಾಸಪತ್ರಿಕೆ

# ಸುದ್ದಿಸಂಗಾತಿ ಧ್ವನಿ

ಸುದ್ದಿ ಮಾತ್ರವಲ್ಲ, ನಿಮ್ಮ ಧ್ವನಿ

ಸಂಪುಟ: 01 ಸಂಚಿಕೆ: 02 ಮಾರ್ಚ್ – 2026 ಪುಟ: 24 ಬೆಲೆ:20 ರೂ.



## ಕರಗ ಮಹೋತ್ಸವಕ್ಕೆ ಬೆಂಗಳೂರು ಸಜ್ಜು

## ಸಮಾನತೆಯತ್ತ ಹೆಜ್ಜೆ :

ಮಹಿಳಾ ದಿನದ ಆಶಯ





## ಯುದ್ಧೋನ್ಮಾದ...?

ಯುಗಾದಿ ವಿಶೇಷ



## ಆಧುನಿಕ ಜೀವನದಲ್ಲಿ ಯುಗಾದಿಯ ಪ್ರಸ್ತುತತೆ

# ವಿನೂತನ ಗೃಹಪ್ರವೇಶ:

## ಆತಿಥ್ಯಕ್ಕೆ ಆರೋಗ್ಯ ಮತ್ತು ಆಧ್ಯಾತ್ಮದ ಸ್ಪರ್ಶ




ಬೆಂಗಳೂರಿನ ಕಾಮಾಕ್ಷಿಪಾಳ್ಯದಲ್ಲಿ ಕಳೆದ ಗುರುವಾರ ನಡೆದ "ಹನುಮಗಿರಿ" ಗೃಹಪ್ರವೇಶ ಸಮಾರಂಭವು ತನ್ನ ವಿನೂತನ ಆಲೋಚನೆಯಿಂದ ಎಲ್ಲರ ಗಮನ ಸೆಳೆಯಿತು.
ಸಾಮಾನ್ಯವಾಗಿ ಗೃಹಪ್ರವೇಶವೆಂದರೆ ಪೂಜೆ, ಹೋಮ, ಭೋಜನ– ಇವುಗಳೊಂದಿಗೆ ಮುಕ್ತಾಯವಾಗುವುದು ರೂಢಿ. ಆದರೆ ಈ ಗೃಹಪ್ರವೇಶದಲ್ಲಿ ಮನೆಯ ಮಾಲೀಕರು ಆತಿಥ್ಯಕ್ಕೆ ಹೊಸ ಅರ್ಥ ನೀಡಿದ್ದರು.



ವಿಧಿವಿಧಾನಗಳೊಂದಿಗೆ ಗೃಹಪ್ರವೇಶ ಪೂಜೆ ನೆರವೇರಿದ ನಂತರ ಸಂಜೆ ಆತಿಥಿಗಳಿಗೆ ಸತ್ಕಾರ ಭೋಜನವನ್ನು ಏರ್ಪಡಿಸಲಾಗಿತ್ತು.



ಭೋಜನದ ಅನಂತರ ಪ್ರತಿಯೊಬ್ಬ ಅತಿಥಿಗೂ "ಸುದ್ದಿಸಂಗಾತಿ ಧ್ವನಿ" ಮಾಸಪತ್ರಿಕೆಯ ಆರೋಗ್ಯ ಮತ್ತು ಆಧ್ಯಾತ್ಮ ವಿಶೇಷಾಂಕದ ಪ್ರತಿಯೊಂದಿಗೆ ಒಂದು ಸಸಿರಾಜ ತುಳಸಿಗಿಡವನ್ನು ಉಡುಗೊರೆಯಾಗಿ ನೀಡಲಾಯಿತು.
ಈ ವಿನೂತನ ಪ್ರಯತ್ನದ ಬಗ್ಗೆ ಮಾತನಾಡಿದ ಮನೆಯ ಮಾಲೀಕರಾದ ಹೆಚ್.ರಮೇಶ್ "ಮನೆ ಕಟ್ಟುವುದು ಕೇವಲ ಗೋಡೆ–ಮಂಟಪಗಳ ನಿರ್ಮಾಣವಲ್ಲ; ಅದರಲ್ಲಿ ಆರೋಗ್ಯ, ಸಂಸ್ಕೃತಿ ಮತ್ತು ಆಧ್ಯಾತ್ಮದ ಮೌಲ್ಯಗಳೂ ನೆಲೆಸಬೇಕು. ಅದಕ್ಕಾಗಿ ಅತಿಥಿಗಳಿಗೆ ನೆನಪಿನ ಕಾಣಿಕೆಯಾಗಿ ಪುಸ್ತಕ ಮತ್ತು ತುಳಸಿಯನ್ನು ನೀಡಿದ್ದೇವೆ," ಎಂದು ಹೇಳಿದರು.
ತುಳಸಿಗಿಡವು ಭಾರತೀಯ ಸಂಸ್ಕೃತಿಯಲ್ಲಿ ಪವಿತ್ರತೆಯ ಸಂಕೇತವಾಗಿದ್ದು, ಆರೋಗ್ಯದ ದೃಷ್ಟಿಯಿಂದಲೂ ಮಹತ್ವ ಹೊಂದಿದೆ. ಅದಕ್ಕೆ ಜೊತೆಯಾಗಿ ನೀಡಲಾದ ವಿಶೇಷಾಂಕದಲ್ಲಿ ಆರೋಗ್ಯಕರ ಜೀವನಶೈಲಿ, ಮನಶ್ಶಾಂತಿ, ಯೋಗ, ಧ್ಯಾನ ಹಾಗೂ ಸಂಸ್ಕಾರಗಳ ಕುರಿತು ಸಮಗ್ರ ಲೇಖನಗಳು ಸಂಗ್ರಹವಾಗಿವೆ. ಹೀಗಾಗಿ ಈ ಕಾಣಿಕೆ ಕೇವಲ ಉಡುಗೊರೆಯಲ್ಲ, ಜೀವನ ಮೌಲ್ಯಗಳ ಸಂದೇಶವಾಗಿತ್ತು.
ಸಮಾರಂಭಕ್ಕೆ ಆಗಮಿಸಿದ್ದ ಅತಿಥಿಗಳು ಈ ವಿಶಿಷ್ಟ ಆಲೋಚನೆಗೆ ಮೆಚ್ಚುಗೆ ವ್ಯಕ್ತಪಡಿಸಿದರು. "ಸಾಮಾನ್ಯವಾಗಿ ಸ್ಮರಣಿಕೆಗಳು ಅಲಮಾರಿನಲ್ಲಿ ಮರೆತುಹೋಗುತ್ತವೆ. ಆದರೆ ತುಳಸಿಗಿಡವನ್ನು ಮನೆಯಲ್ಲಿ ನೆಟ್ಟು ಬೆಳೆಸಬಹುದು; ಪುಸ್ತಕವನ್ನು ಓದಿ ಉಳಿಸಬಹುದು. ಇದು ನೆನಪಿನಲ್ಲಿ ಉಳಿಯುವ ಗೃಹಪ್ರವೇಶ," ಎಂದು ಹಲವರು ಅಭಿಪ್ರಾಯಪಟ್ಟರು.
ಒಟ್ಟಿನಲ್ಲಿ, ಈ ಗೃಹಪ್ರವೇಶವು ಸಂಪ್ರದಾಯಕ್ಕೆ ಹೊಸ ಅರ್ಥ ನೀಡಿ, ಆತಿಥ್ಯವನ್ನು ಮೌಲ್ಯಾಧಾರಿತ ಸಂದೇಶವಾಗಿ ರೂಪಿಸಿದ ವಿಶೇಷ ಕಾರ್ಯಕ್ರಮವಾಗಿ ಪರಿಣಮಿಸಿತು. ಆರೋಗ್ಯ–ಆಧ್ಯಾತ್ಮದ ಸಂಯೋಜನೆಯೊಂದಿಗೆ ನಡೆದ ಈ ವಿನೂತನ ಪ್ರಯತ್ನ ಇತರರಿಗೆ ಮಾದರಿಯಾಗುವಂತದ್ದು. ಇಂತಹ ಪ್ರಯತ್ನ ಮಾಡಲು 'ಸುದ್ದಿಸಂಗಾತಿ ಧ್ವನಿ' ಪತ್ರಿಕೆಗೆ ಅವಕಾಶ ಮಾಡಿಕೊಟ್ಟ ಹೆಚ್.ರಮೇಶ್ ಅವರಿಗೆ ನಮ್ಮ ಪತ್ರಿಕಾ ಬಳಗದಿಂದ ಅಭಿನಂದನೆಗಳನ್ನು ಕೋರುತ್ತೇವೆ.



**– ಮಂಜು ದಂಡಿನಶಿವರ**
**ಸಂಪಾದಕರು**



**ಸಂಪಾದಕೀಯ**


# ಸುದ್ದಿಸಂಗಾತಿ ಧ್ವನಿ

ಕನ್ನಡ ಮಾಸಪತ್ರಿಕೆ

ಸಂಪುಟ:01 ಸಂಚಿಕೆ:02 ಮಾರ್ಚ್ 2026

PRGI NO.KNKAN/26/A0501

ಸಂಪಾದಕರು
**ಡಿ.ಎನ್.ಮಂಜುನಾಥ್**
**(ಮಂಜು ದಂಡಿನಶಿವರ)**

suddisangathi@gmail.com

**ಗೌರವ ಸಲಹೆಗಾರರು**
ಎಸ್.ಆರ್.ಗೋವಿಂದರಾಜು
ಸಿದ್ದೇಶ್
ಹಡವನಹಳ್ಳಿ ವೀರಣ್ಣಗೌಡ

**ಕಾನೂನು ಸಲಹೆಗಾರರು**
ಡಿ.ಎನ್.ಲೋಕೇಶ್

**ಜಾಹೀರಾತು ವ್ಯವಸ್ಥಾಪಕರು**
ಮಲಿಯಪ್ಪ (ರಾಜು)

Printed,Edited,Published and Owned By D.N.MANJUNATH
#22,6th Main,
Kempegowda School Road,
Sannakkibayalu,
Kamakshipalya, Bengaluru-560079

Printed at: Manasa Graphics,no.43/3, Agrahara Dasarahalli,
Magadi Main Road, Bengaluru-560079


# ಆಧುನಿಕ ಜೀವನದಲ್ಲಿ ಯುಗಾದಿಯ ಪ್ರಸ್ತುತತೆ

ಯುಗಾದಿ ಎಂದರೆ ಕೇವಲ ಸಡಗರದ ಹಬ್ಬವಲ್ಲ. ಇದು ನಮ್ಮ ಜೀವನಕ್ಕೆ ಹೊಸ ದೃಷ್ಟಿಕೋನವನ್ನು ನೀಡುವ ಒಂದು ಅವಕಾಶ. ಕಳೆದ ವರ್ಷದ ಕಹಿ ಅನುಭವಗಳನ್ನು ಮರೆತು, ಹೊಸ ಭರವಸೆಗಳು ಮತ್ತು ಸಂಕಲ್ಪಗಳೊಂದಿಗೆ ಮುಂದಡಿ ಇಡಲು ಪ್ರೇರೇಪಿಸುವ ದಿನ. ವಸಂತ ಋತುವಿನ ಶುಭಾರಂಭದೊಂದಿಗೆ, ಪ್ರತಿಯೊಂದು ಜೀವಿಯೂ ಪುನರುಜ್ಜೀವನಗೊಳ್ಳುವಂತೆ, ನಮ್ಮೆಲ್ಲರ ಮನಸ್ಸುಗಳು ಕೂಡ ನವೀಕೃತವಾಗಬೇಕು ಎಂಬುದು ಇದರ ಆಶಯ.

ಯುಗಾದಿ ಆಚರಣೆಯ ಪ್ರತಿಯೊಂದು ಅಂಶವೂ ಒಂದು ಆಳವಾದ ಅರ್ಥವನ್ನು ಹೊಂದಿದೆ.

ಮನೆ ಶುದ್ಧೀಕರಣ ಮತ್ತು ಅಲಂಕಾರ: ಹಬ್ಬಕ್ಕೆ ಕೆಲವು ದಿನಗಳ ಮುನ್ನವೇ ಮನೆಗಳನ್ನು ಶುಚಿಗೊಳಿಸಿ, ರಂಗೋಲಿಗಳಿಂದ ಸಿಂಗರಿಸಲಾಗುತ್ತದೆ. ಬಾಗಿಲಿಗೆ ಮಾವಿನ ಎಲೆ ಮತ್ತು ಬೇವಿನ ತೋರಣಗಳನ್ನು ಕಟ್ಟುವುದು ಮಂಗಳಕರವೆಂದು ಪರಿಗಣಿಸಲಾಗುತ್ತದೆ. ಮಾವಿನ ಚಿಗುರು ಸಮೃದ್ಧಿ ಮತ್ತು ಫಲವತ್ತತೆಯ ಸಂಕೇತವಾದರೆ, ಬೇವು ರೋಗನಿವಾರಕ ಶಕ್ತಿ ಮತ್ತು ನಕಾರಾತ್ಮಕ ಶಕ್ತಿಗಳನ್ನು ದೂರವಿಡುವ ಪ್ರತೀಕವಾಗಿದೆ.

ಅಭ್ಯಂಜನ ಸ್ನಾನ: ಸೂರ್ಯೋದಯಕ್ಕೂ ಮುನ್ನ ಎಣ್ಣೆ ಹಚ್ಚಿ, ಬಿಸಿನೀರಿನಲ್ಲಿ ಸ್ನಾನ ಮಾಡುವುದು ದೈಹಿಕ ಮತ್ತು ಮಾನಸಿಕ ಶುದ್ಧಿಯನ್ನು ತರುತ್ತದೆ ಎಂಬ ನಂಬಿಕೆ ಇದೆ. ಇದು ದೇಹವನ್ನು ಹಗುರಗೊಳಿಸಿ, ಹೊಸ ದಿನವನ್ನು ಉತ್ಸಾಹದಿಂದ ಪ್ರಾರಂಭಿಸಲು ಸಿದ್ಧಗೊಳಿಸುತ್ತದೆ.

ಬೇವು-ಬೆಲ್ಲದ ಸವಿಯುವಿಕೆ: ಯುಗಾದಿಯ ಅತ್ಯಂತ ಮಹತ್ವದ ಆಚರಣೆ ಇದು. ಬೇವು (ಕಹಿ), ಬೆಲ್ಲ (ಸಿಹಿ), ಹುಣಸೆಹಣ್ಣು (ಹುಳಿ), ಮಾವಿನಕಾಯಿ (ಒಗರು), ಉಪ್ಪು, ಖಾರದ ಪುಡಿ (ಖಾರ) ಇವೆಲ್ಲವನ್ನೂ ಮಿಶ್ರಣ ಮಾಡಿ ತಯಾರಿಸಿದ 'ಬೇವು-ಬೆಲ್ಲ'ವನ್ನು ಎಲ್ಲರೂ ಸೇವಿಸುತ್ತಾರೆ. ಇದು ಜೀವನದ ವಿವಿಧ ಭಾವನೆಗಳು ಮತ್ತು ಅನುಭವಗಳ ಪ್ರತೀಕವಾಗಿದೆ. "ಜೀವನದಲ್ಲಿ ಸುಖ-ದುಃಖ, ಕಹಿ-ಸಿಹಿ, ನೋವು-ನಲಿವು ಎಲ್ಲವೂ ಇರುತ್ತವೆ, ಎಲ್ಲವನ್ನೂ ಸಮಾನವಾಗಿ ಸ್ವೀಕರಿಸಿ ಮುನ್ನಡೆಯಬೇಕು" ಎಂಬ ಸಂದೇಶವನ್ನು ಇದು ಸಾರಿ ಹೇಳುತ್ತದೆ. ಈ ತಾತ್ವಿಕ ಸಾರವನ್ನು ಅಳವಡಿಸಿಕೊಂಡರೆ ಯಾವುದೇ ಪರಿಸ್ಥಿತಿಯನ್ನು ಸಮಚಿತ್ತದಿಂದ ಎದುರಿಸಲು ಸಾಧ್ಯವಾಗುತ್ತದೆ.

ಹೊಸ ಉಡುಪು ಮತ್ತು ಭಕ್ಷ್ಯ ಭೋಜನ: ಹಬ್ಬದ ಸಂಭ್ರಮಕ್ಕೆ ಹೊಸ ಬಟ್ಟೆಗಳು ಮತ್ತಷ್ಟು ಮೆರುಗು ನೀಡುತ್ತವೆ. ಇದರ ಜೊತೆಗೆ, ಯುಗಾದಿ ಹಬ್ಬದ ವಿಶೇಷತೆ ಎಂದರೆ ಬಗೆಬಗೆಯ ಖಾದ್ಯಗಳು. ಹೋಳಿಗೆ (ಒಬ್ಬಟ್ಟು), ಮಾವಿನಕಾಯಿ ಚಿತ್ರಾನ್ನ, ಪಾಯಸ, ಕೋಸಂಬರಿ ಮುಂತಾದ ರುಚಿಕರ ಅಡುಗೆಗಳನ್ನು ತಯಾರಿಸಿ ಕುಟುಂಬದ ಸದಸ್ಯರು ಒಟ್ಟಾಗಿ ಸವಿಯುತ್ತಾರೆ.

ಪಂಚಾಂಗ ಶ್ರವಣ: ಯುಗಾದಿಯ ಸಂಜೆ ದೇವಸ್ಥಾನಗಳಲ್ಲಿ ಅಥವಾ ಮನೆಗಳಲ್ಲಿ ಪಂಚಾಂಗ ಶ್ರವಣ ಮಾಡಲಾಗುತ್ತದೆ. ಹೊಸ ವರ್ಷದ ಮಳೆ-ಬೆಳೆ, ಆರ್ಥಿಕ ಸ್ಥಿತಿ, ಗ್ರಹಗತಿಗಳ ಬದಲಾವಣೆ ಮತ್ತು ರಾಶಿ ಭವಿಷ್ಯದ ಬಗ್ಗೆ ಪುರೋಹಿತರು ವಿವರಿಸುತ್ತಾರೆ. ಇದು ಮುಂಬರುವ ವರ್ಷದ ಬಗ್ಗೆ ಅರಿವು ಮೂಡಿಸಿ, ಭವಿಷ್ಯದ ಯೋಜನೆಗಳನ್ನು ರೂಪಿಸಿಕೊಳ್ಳಲು ಸಹಾಯ ಮಾಡುತ್ತದೆ.

ವೇಗದ ಬದುಕಿನಲ್ಲಿ ನಾವೆಲ್ಲಾ ನಮ್ಮ ಸಂಸ್ಕೃತಿಯನ್ನು ಮರೆಯುತ್ತಿದ್ದೇವೆ ಎಂಬ ಆತಂಕ ಸದಾ ಕಾಡುತ್ತದೆ. ಆದರೆ ಯುಗಾದಿಯಂತಹ ಹಬ್ಬಗಳು ನಮ್ಮನ್ನು ನಮ್ಮ ಬೇರುಗಳಿಗೆ ಗಟ್ಟಿಯಾಗಿ ಅಂಟಿಕೊಳ್ಳುವಂತೆ ಮಾಡುತ್ತವೆ. ಈ ಹಬ್ಬವು ಕುಟುಂಬ ಸದಸ್ಯರನ್ನು ಒಗ್ಗೂಡಿಸಿ, ಸಂಬಂಧಗಳನ್ನು ಗಟ್ಟಿಗೊಳಿಸುತ್ತದೆ. ಬೇವು-ಬೆಲ್ಲದ ತಾತ್ವಿಕ ಸಾರವು ಆಧುನಿಕ ಜೀವನದ ಒತ್ತಡಗಳನ್ನು ನಿಭಾಯಿಸಲು ಅತ್ಯುತ್ತಮ ಮಾರ್ಗದರ್ಶನ ನೀಡುತ್ತದೆ. ಬದಲಾಗುತ್ತಿರುವ ಕಾಲದಲ್ಲಿ, ಯುಗಾದಿಯನ್ನು ಕೇವಲ ಆಚರಣೆಯಾಗಿ ನೋಡದೆ, ಅದರ ಹಿಂದಿರುವ ಮೌಲ್ಯಗಳನ್ನು ಅರ್ಥಮಾಡಿಕೊಂಡು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವುದು ಅತ್ಯಗತ್ಯ.

ಸವಾಲುಗಳ ನಡುವೆ ಭರವಸೆಯ ಕಿರಣ: ಇಂದಿನ ಜಗತ್ತು ಅನೇಕ ಸವಾಲುಗಳನ್ನು ಎದುರಿಸುತ್ತಿದೆ – ಆರೋಗ್ಯ ಬಿಕ್ಕಟ್ಟುಗಳು, ಆರ್ಥಿಕ ಅಸ್ಥಿರತೆ, ಸಾಮಾಜಿಕ ಅಸಮಾನತೆಗಳು. ಇಂತಹ ಸಮಯದಲ್ಲಿ ಯುಗಾದಿಯ 'ಹೊಸ ಆರಂಭ'ದ ಸಂದೇಶವು ಮತ್ತಷ್ಟು ಪ್ರಸ್ತುತವಾಗುತ್ತದೆ. ಕಷ್ಟಗಳ ಕಹಿ ಅನುಭವಗಳನ್ನು ಮೆಲುಕು ಹಾಕುತ್ತಾ ಕೂರುವ ಬದಲು, ಅವುಗಳಿಂದ ಪಾಠ ಕಲಿತು ಹೊಸ ಭರವಸೆಯೊಂದಿಗೆ ಮುನ್ನಡೆಯಬೇಕು ಎಂಬುದನ್ನು ಯುಗಾದಿ ಹೇಳುತ್ತದೆ.

ಯುಗಾದಿ ಎಂದರೆ ಕೇವಲ ಪೂಜೆ, ಹಬ್ಬದೂಟವಲ್ಲ. ಅದು ಪ್ರಕೃತಿಯೊಂದಿಗೆ ಸಾಮರಸ್ಯದಿಂದ ಬದುಕುವ, ಜೀವನದ ಸವಾಲುಗಳನ್ನು ಸಮಚಿತ್ತದಿಂದ ಸ್ವೀಕರಿಸುವ, ಹಳೆಯದನ್ನು ಮರೆತು ಹೊಸ ಚೈತನ್ಯದಿಂದ ಮುನ್ನಡೆಯುವ ಸಂಕಲ್ಪ. ಈ ಯುಗಾದಿ ಹಬ್ಬವು ನಮ್ಮೆಲ್ಲರ ಬಾಳಿನಲ್ಲಿ ಹೊಸ ಬೆಳಕು, ಶಾಂತಿ, ನೆಮ್ಮದಿ ಮತ್ತು ಸಮೃದ್ಧಿಯನ್ನು ತರಲಿ ಎಂದು ಆಶಿಸುತ್ತೇವೆ. ಹೊಸ ವರ್ಷ ನಮ್ಮೆಲ್ಲರ ಸಂಕಲ್ಪಗಳು ಯಶಸ್ವಿಯಾಗಿ, ಜೀವನ ಸುಖಮಯವಾಗಲಿ. ಸರ್ವರಿಗೂ ಯುಗಾದಿಯ ಹಾರ್ದಿಕ ಶುಭಾಶಯಗಳು.

। **ಸಂಪಾದಕ**

# ಕರಗ ಮಹೋತ್ಸವಕ್ಕೆ ಬೆಂಗಳೂರು ಸಜ್ಜು


**ಬೆಂಗಳೂರಿನ ಐತಿಹಾಸಿಕ ಕರಗಕ್ಕೆ ದಿನಾಂಕ ನಿಗದಿಯಾಗಿದೆ. ಮಾರ್ಚ್ 24 ರಿಂದ ಕರಗ ಆರಂಭವಾಗಲಿದೆ. ಒಟ್ಟು 11 ದಿನ ಕರಗ ಮಹೋತ್ಸವ ನಡೆಯಲಿದೆ. ಮಾರ್ಚ್ 24 ರಂದು ಮಧ್ಯರಾತ್ರಿ ಧ್ವಜಾರೋಹಣ ನಡೆಯಲಿದೆ. ಅಲ್ಲಿಂದ ಕರಗ ಆರಂಭವಾಗುತ್ತೆ. ಮಾರ್ಚ್ 31 ಹಸಿ ಕರಗ ಏಪ್ರಿಲ್ 2 ರಂದು "ಹೂವಿನ" ಬೆಂಗಳೂರು ಕರಗ ಆರಂಭವಾಗಲಿದೆ. ಕರಗದಲ್ಲಿ ಈ ಬಾರಿ ಸಿಎಂ, ಡಿಸಿಎಂ, ಸೇರಿದಂತೆ ಹಲವು ಸಚಿವರು ಅಧಿಕಾರಿಗಳು ಭಾಗಿಯಾಗಲಿದ್ದಾರೆ.**

**ನೂತನ ಸಮಿತಿಗೆ ಕರಗದ ಉಸ್ತುವಾರಿ ಈ ಭಾರಿ ನೂತನವಾಗಿ ಸಮಿತಿ ರಚಿಸಲಾಗಿದ್ದು ಅಧ್ಯಕ್ಷರಾಗಿ ಚಲ್ಲಿಕರೆ ನಾರಾಯಣಸ್ವಾಮಿ ಸೇರಿದಂತೆ ಒಟ್ಟು ಎಂಟು ಜನ ಸದಸ್ಯರು ಒಳಗೊಂಡಿದೆ. ದೇವಾಲಯದ ಹೊರ ಆವರಣದ ವ್ಯವಸ್ಥೆಯನ್ನ ಜಿ.ಬಿ.ಎ ವಹಿಸಲಾಗಿದೆ. ದೇವಸ್ಥಾನದ ಒಳಗಿನ ವ್ಯವಸ್ಥೆಯನ್ನು ಮುಜರಾಯಿ ಇಲಾಖೆ ಅಧಿಕಾರಿಗಳು ನೋಡಿಕೊಳ್ಳತಾರೆ. ಒಟ್ಟಾರೆ ಕರಗದ ಉತ್ಸವಕ್ಕೆ ಒಂದೂವರೆ ಕೋಟಿ ಅನುದಾನ ನಿಗದಿಮಡಲಾಗಿದೆ.**

**ಈ ಬಾರಿಯ ಕರಗಕ್ಕಾಗಿ ಮೈಸೂರು ದಸರಾದಂತೆ ದೀಪಲಂಕಾರ ಮಾಡಲು ನಿರ್ಧರಿಸಲಾಗಿದೆ. ಐತಿಹಾಸಿಕ ಕರಗ ಜಗತ್ ಪ್ರಸಿದ್ಧ ಕರಗ ಬೇರೆ ಬೇರೆ ರಾಜ್ಯಗಳಿಂದ ದೇಶಗಳಿಂದ ಈ ಒಂದು ಕರಗ ನೋಡಲು ಬರ್ತಾರೆ ಒಂದು ಕಡೆ ದ್ರೌಪದಿ ಅಮ್ಮನ ಆಶೀರ್ವಾದ ಪಡೆದುಕೊಳ್ಳಲು ಸಾಕಷ್ಟು ಜನ ಬರ್ತಾರೆ ಹೀಗಾಗಿ ಬೆಂಗಳೂರು ಕರಗ ಅದ್ದೂರಿಯಾಗಿ ನಡೆಯಲಿದೆ. ಸಾಂಸ್ಕೃತಿಕ ಕಾರ್ಯಕ್ರಮ ಸೇರಿದಂತೆ ಮೈಸೂರು ದಸರದಂತೆ ಲೈಟಿಂಗ್ ವ್ಯವಸ್ಥೆ ಮಾಡಲಾಗುತ್ತದೆ. ನಾಡ ಹಬ್ಬ ಯಾವ ರೀತಿ ಇರುತ್ತೆ ಅದೇ ಕರಗ ಬೆಂಗಳೂರು ಕರಗದ ಹಬ್ಬವನ್ನ ಅದೇ ರೀತಿಯಾಗಿ ಆಯೋಜಿಸಲು ನಿರ್ಧರವಾಗಿದೆ. ಹೀಗಾಗಿ ಎಲ್ಲಾ ರೀತಿಯ ಸಿದ್ಧತೆ ಮಾಡಿಕೊಂಡಿದ್ದಾರೆ. ಬೆಂಗಳೂರು ಕರಗ ಅಂದ್ರೆ 800 ವರ್ಷಗಳ ಕಾಲ ಇತಿಹಾಸವಿದೆ ವಿಶ್ವ ವಿಖ್ಯಾತಿ ಪಡೆದಿದೆ.**



ಶಕ್ತಿದೇವತೆ ಉಪಾಸನೆಯ ಕರಗಕ್ಕೂ ಯೌವನದ ಕಾವಿಗೂ ಇನ್ನಿಲ್ಲದ ನಂಟು. ಬೆಳದಿಂಗಳಲ್ಲಿ ಮಿಂದ ಇರುಳಿನಲ್ಲಿ ನಡೆಯುವ ಕರಗದ



ಆರಾಧನೆ ಮತ್ತು ಮೆರವಣಿಗೆಯಲ್ಲಿ ಮಲ್ಲಿಗೆ ಹೂಗಳು ಚೆಲ್ಲಾಡುತ್ತವೆ. ಹೂವಿನ ಕರಗ ಹೊತ್ತು ನಡೆಯುವ ಪೂಜಾರಿ ಹಾಗೂ ವೀರಕುಮಾರರ ಪಡೆ ಯೌವನದ ಉತ್ಸಾಹ ಹಾಗೂ ಜೀವನ ಪ್ರೀತಿಯನ್ನು ಊರೆಲ್ಲ ಪಸರಿಸುವಂತೆ ಕಾಣುತ್ತದೆ. ಕರಗ ಉತ್ಸವದ ಈ ಕಥನ, ಬದಲಾದ ಸಂದರ್ಭದಲ್ಲಿ ಬದಲಗದ ಕರಗದೊಂದಿಗಿನ ಹೊಸ ತಲೆಮಾರಿನ ನಂಟನ್ನು ಕುರಿತು ಹೇಳುತ್ತಿದೆ.

ವಸಂತನ ಆಗಮದೊಂದಿಗೆ ಮರ ಗಿಡಗಳಲ್ಲಿ ಹೊಸ ಚಿಗುರು ಕಾಣುತ್ತಿದೆ. ಚೈತ್ರದ ಚಂದಿರ ಪೂರ್ಣವಾಗಿ ಕಾಣಲು ಇನ್ನು ಕೆಲವೇ ದಿನಗಳು ಉಳಿದಿವೆ. ಏಪ್ರಿಲ್ 2 ರ ಈ ಹುಣ್ಣಿಮೆ ವಿಶೇಷ ಸಂಭ್ರಮದೊಂದಿಗೆ ತಳಕು ಹಾಕಿಕೊಂಡಿದೆ. ಅದು 'ಕರಗ'ದ ಸಂಭ್ರಮ! ಸುವಾಸನೆ ಸೂಸುವ ಮಲ್ಲಿಗೆ ಹೂಗಳ ಉತ್ಸವ.

'ಬೆಂಗಳೂರು ಕರಗ ಬಹು ಪ್ರಸಿದ್ಧ. ಕೋಲಾರ, ರಾಮನಗರ, ತುಮಕೂರು ಜಿಲ್ಲೆಗಳಲ್ಲಿ 'ಕರಗ' ಉತ್ಸವಗಳು ನಡೆಯುತ್ತವೆ. ಅನೇಕಲ್, ಹೊಸಕೋಟೆ, ಮಾಲೂರು, ಚಿಕ್ಕಬಳ್ಳಾಪುರ, ಕೈವಾರ, ವೇಮಗಲ್, ನರಸಾಪುರ–ಹೀಗೆ ಹಳ್ಳಿ ಪಟ್ಟಣಗಳಲ್ಲಿ 'ಕರಗ' ಹಬ್ಬ ಪ್ರತಿ ವರ್ಷದ ರೂಢಿ. ಸಾಮರಸ್ಯದ ಹಬ್ಬವೆಂದೇ ಹೆಸರಾದ ಕರಗ 'ಶಕ್ತ್ಯುತ್ಸವ'ವೂ ಹೌದು. ಈ ಉತ್ಸವದಲ್ಲಿ ವಹ್ನಿಕುಲಸ್ಥರ (ತಿಗಳರು) ಮುಂದಾಳತ್ವ ಇದ್ದರೂ ಎಲ್ಲಾ ಧರ್ಮಿಯರೂ ಸಕ್ರಿಯವಾಗಿ ಭಾಗವಹಿಸುತ್ತಾರೆ. ಕರಗದ ಸಡಗರಕ್ಕೆ ಎಲ್ಲಾ ಊರುಗಳಲ್ಲಿ ಸಾಮಾನ್ಯನೆಲೆ ಶ್ರೀಧರ್ಮರಾಯ ಸ್ವಾಮಿ ದೇವಾಲಯ. ದ್ರೌಪದಿ ಕರಗ'ವೆಂದು ಕರೆದರೂ ಹಲವೆಡೆ ಗ್ರಾಮದೇವತೆಗಳೂ 'ಕರಗ'ಕ್ಕೆ ನೆಲೆ ನೀಡಿರುವುದಿದೆ. ತಿಗಳರು ವಾಸಿಸುವ ಬಹುತೇಕ ಎಲ್ಲಾ ಊರು–ಕೇರಿಗಳಲ್ಲೂ 'ಕರಗ'ದ ಉತ್ಸವ ಇದ್ದೇ ಇರುತ್ತದೆ.

**ಕರಗ: ಮಲ್ಲಿಗೆ ಕಂಪು, ಬೆಳದಿಂಗಳ ಒನಪು!**

ಈ ಭಾವೈಕ್ಯತೆಯ ಹಬ್ಬಕ್ಕೆ ಮೈಸೂರಿನ ಯದುವಂಶದ ಅರಸರು ಪ್ರೋತ್ಸಾಹ ಕೊಟ್ಟರು. ಧರ್ಮರಾಯ ಗುಡಿ ಕಟ್ಟಲು, 'ಕರಗ' ಹಬ್ಬಕ್ಕೂ ಅವರೇ ನೆರವು ನೀಡಿದರು.. ಬಹಳಷ್ಟು ಊರುಗಳಲ್ಲಿ ಕರಗಕ್ಕೆ ಆಹ್ವಾನ ಪತ್ರಿಕೆ ಅಚ್ಚಾಗುವುದು ಮೈಸೂರು ಅರಸರ ಹೆಸರಿನಲ್ಲಿ. ಇದು ಇಂದೂ ನಿಂತಿಲ್ಲ. ಪಾಂಡವರ ಕುಲಕ್ಕೆ ಸೇರಿದ ವಹ್ನಿ ಕುಲಸ್ಥರು ಆರಾಧಿಸುವ ಧರ್ಮರಾಯನ ದೇವಾಲಯಗಳಲ್ಲಿ ದ್ರೌಪದಿಗೆ ಹೆಚ್ಚಿನ ಪ್ರಾಧಾನ್ಯ. ಕರಗ ಶಕ್ತಿಯ ಮೂಲಸೆಲೆಯೇ ದ್ರೌಪದಿ ಎಂಬುದು ಇದಕ್ಕೆ ಕಾರಣ.

ಕೆಲವು ವಿಧಿವಿಧಾನಗಳನ್ನು ಹೊರತುಪಡಿಸಿದರೆ ಕರಗ

ಕಾರ್ಯಕ್ರಮಗಳು ನಡೆಯುವುದೆಲ್ಲ ಸೂರ್ಯ ಮುಳುಗಿದ ಮೇಲೆ– ಚಂದಿರನ ಬೆಳಕಿನಲ್ಲಿ. ದೇವಾಲಯದ ಮುಂದೆ ಧ್ವಜಾರೋಹಣದಿಂದ ಕರಗೋತ್ಸವಕ್ಕೆ ಚಾಲನೆ. ಮೊದಲ ದಿನ–ಖಡ್ಗ, ವೀರ ಚಾವುಟಿ ಮತ್ತಿತರ ಪೂಜಾಪರಿಕರಗಳೊಂದಿಗೆ ಮೆರವಣಿಗೆ ನಡೆಯುತ್ತದೆ. ಆಯುಧಗಳ ಶುಚೀಕರಣವೂ ನಡೆಯುತ್ತದೆ. ಎರಡನೇ ದಿನ ಹಸಿ ಅಥವಾ ಹಸಕರಗ. ಬೆಂಗಳೂರಿನಲ್ಲಿ ಪೂಜಾರಿ ಹಸಿಕರಗವನ್ನು ಸೊಂಟದ ಮೇಲಿಟ್ಟುಕೊಂಡು ಸಾಗಿದರೆ, ಉಳಿದೆಡೆ ಪುಟ್ಟ ಹಲಗೆ ಅಥವಾ ತಟ್ಟೆಯಲ್ಲಿಟ್ಟುಕೊಂಡು ಕುಣಿಸುತ್ತ ಸಾಗುವುದಿದೆ. ಕೊಳಗದಲ್ಲಿ ಹಸಿಗಡಿಗೆಯೊಂದನ್ನು ಅಡಗಿಸಿಟ್ಟು, ಅದನ್ನು ಪೂಜಾರಿ ಹೊರತೆಗೆದು ತಾತ್ಕಾಲಿಕವಾಗಿ ಬಿಳಿ ಬಟ್ಟೆಗಳಿಂದ ಕಟ್ಟಿದ ಕುಟೀರಕ್ಕೆ ಹೊತ್ತೊಯ್ಯುತ್ತಾನೆ. ಅದನ್ನು ಮಲ್ಲಿಗೆ ಪುಷ್ಪಗಳಿಂದ ಅಲಂಕರಿಸಿ ವಾದ್ಯ–ಗಂಟೆನಾದದೊಂದಿಗೆ ಕುಣಿಸುತ್ತ ನಾಲ್ಕೈದು ಪೂಜಾಸ್ಥಾನಗಳಿಗೆ ಹೋಗಿ ಧರ್ಮರಾಯಸ್ವಾಮಿ ದೇವಾಲಯಕ್ಕೆ ತಲುಪುವುದು ಸಂಪ್ರದಾಯ.

ವೀರ ಕುಮಾರರು ಕರಗ ಶಕ್ತ್ಯುತ್ಸವಕ್ಕೆ ಕಳೆ ಕಟ್ಟಿಸುತ್ತಾರೆ. ಧ್ವಜಾರೋಹಣದಿಂದ ಮೊದಲ್ಗೊಂಡು ವಸಂತೋತ್ಸವ ಮುಗಿಯುವರೆಗೆ ಕಂಕಣ ಕಟ್ಟಿಕೊಂಡು ಗುಡಿಗಳಲ್ಲಿ ವಾಸ್ತವ್ಯ ಹೂಡುತ್ತಾರೆ. ಕಚ್ಚೆಪಂಚೆ, ಪೇಟಾ, ರುಮಾಲು, ಬನಿಯನ್– ಇವೆಲ್ಲ ವೀರಕುಮಾರರ ಪೋಷಾಕು.




ಇವುಗಳಲ್ಲಿ ಪ್ರಮುಖವಾದ ಬಣ್ಣ ಹಳದಿ.'ಗೋವಿಂದ–ಗೋವಿಂದ' ನಾಮಸ್ಮರಣೆಯೊಂದಿಗೆ ವೀರಕುಮಾರರು ಮೈತುಂಬಿಕೊಂಡು ಅಲಗುಸೇವೆ ಮಾಡುತ್ತಾರೆ. ಮೈಮೇಲೆ ಶಕ್ತಿ ಬಂದಾಗ ಖಡ್ಗಗಳಿಂದ ಎದೆಭಾಗಗಳಿಗೆ ಬಡಿದುಕೊಳ್ಳುವ ಸೇವೆಯಂತೂ ರೋಮಾಂಚಕಾರಿ.

ಹಸಿಕರಗದ ಮರುದಿನ ಪೊಂಗಲ್ ಉತ್ಸವ ಮತ್ತು ದೀಪೋತ್ಸವ. ವಹ್ನುಕುಲದ ಒಕ್ಕಲುಗಳಿಗೆ ಸೇರಿದ ಹೆಂಗಳೆಯರು ಹಸಿ ಹಿಟ್ಟಿನಿಂದ ಮಾಡಿದ ದೀಪಗಳನ್ನು ತಲೆಮೇಲೆ ಹೊತ್ತು ಗುಂಪುಗುಂಪಾಗಿ ಸಕಲ ವಾದ್ಯಗಳೊಡನೆ ಆಗಮಿಸಿ ಪೂಜೆ ಮಾಡಿಸುತ್ತಾರೆ. ದೀಪಾರಾಧನೆಯ ಮಾರನೆಯ ದಿನ ದ್ರೌಪದಿ–ಧರ್ಮರಾಯರ ಲಗ್ನ. ಎಲ್ಲ ಜಾತಿ ಧರ್ಮದವರೂ ಪಾಲ್ಗೊಳ್ಳುವ ಈ ವಿವಾಹದಲ್ಲಿ ವಿವಿಧ ವಸ್ತು ವಿಶೇಷಗಳು ಹೊಣೆಯನ್ನು ವಹ್ನುಕುಲಸ್ಥರೊಂದಿಗೆ ಬೇರೆ ಮತ ಧರ್ಮೀಯರೂ ಹೊತ್ತುಕೊಳ್ಳುವುದು ವೈಶಿಷ್ಟ್ಯಪೂರ್ಣ.

ಹೂವಿನ ಕರಗವನ್ನು ತಲೆ ಮೇಲೆ ಧರಿಸಿದ ಪೂಜಾರಿ ಗುಡಿ ಒಳಗಿನಿಂದ ಬರುವುದು ಎಲ್ಲರಿಗೂ ಕಾತುರದ ಕ್ಷಣ. ಭಾವುಕರ ನಿರೀಕ್ಷೆಯ ಕ್ಷಣಗಳ ನಡುವೆ ರಪ್ಪೆಂದು ರಾಚುವ ಮಲ್ಲಿಗೆಯ ವಾಸನೆಯೊಂದಿಗೆ ದೇವಾಲಯದ ಗರ್ಭಗುಡಿಯಿಂದ ಹೊರಕ್ಕೆ ಹೂವಿನ ಕರಗ ಬರುತ್ತದೆ. ಸಂಪೂರ್ಣ ಮಲ್ಲಿಗೆ ದಂಡೆ, ಅಲ್ಲಲ್ಲಿ ಕನಕಾಂಬರದ ಅಲಂಕಾರಿಕ ಎಸಳುಗಳು, ಚುನ್ನರಿಯ ನಕ್ಷತ್ರಗಳು, ಪುಟ್ಟ ಬಣ್ಣದ ಪತಾಕೆಗಳು. ಶಿಖರದಲ್ಲಿ ಪುಟ್ಟ ಬ್ಯಾಟರಿ ಆಧಾರಿತ ಒಂಟಿದೀಪ. ದಂಡೆಯಲ್ಲಿ ಕಿರುನಗೆ ಸೂಸುವ ಗುಲಾಬಿದಳಗಳು. ಇವೆಲ್ಲ ವಿಶೇಷಗಳೊಂದಿಗೆ 'ಕರಗ' ದೇವಾಲಯದ ಆವರಣದಲ್ಲಿ ಪ್ರದಕ್ಷಿಣೆ ಹಾಕುತ್ತ ಹೊರಹೋಗುತ್ತದೆ. ಇದರ ಜೊತೆಗೆ, ವೀರಕುಮಾರರ ಅಲಗು ಸೇವೆ, ಶಂಖನಾದ, ಗಂಡೆಗಳ ಶಬ್ದ, ಗೋವಿಂದ ನಾಮಸ್ಮರಣೆ ಸಡಗರಕ್ಕೆ ಇಂಬು ನೀಡುತ್ತವೆ.

**ಬೆಂಗಳೂರು ಕರಗಕ್ಕೂ ಉಳಿದೆಡೆ ನಡೆಯುವ ಹೂವಿನ ಕರಗಕ್ಕೂ ಆಚರಣೆಯಲ್ಲಿ ಕೊಂಚ ವ್ಯತ್ಯಾಸಗಳಿವೆ. ಬೆಂಗಳೂರಿನಲ್ಲಿ ಗೋವಿಂದ ನಾಮಸ್ಮರಣೆ, ಶಂಖ ಧ್ವನಿಯ ನಡುವೆ ಕರಗ ಮುಂದೆ ಸಾಗುತ್ತದೆ. ಬೇರೆ ಕೆಲವೆಡೆ ಗಂಟಾನಾದ, ತಮಟೆ ಸದ್ದು 'ಕರಗ'ದ ಜೊತೆಗಿರುತ್ತದೆ. ಮಧ್ಯರಾತ್ರಿ ನಂತರ ಎತ್ತುವ ಕರಗ ಸೂರ್ಯೋದಯಕ್ಕೆ ಮೊದಲೇ ಗುಡಿ ಸೇರುವುದು ಬೆಂಗಳೂರಿನ ಸಂಪ್ರದಾಯ. ಬೇರೆ ಊರುಗಳಲ್ಲಿ 'ಕರಗ' ಮುಖ್ಯ ಭಾಗಗಳಿಗೆ ಭೇಟಿ ನೀಡುವುದೇ ಅಲ್ಲದೆ, ಮರುದಿನ ಸಂಜೆಯವರೆಗೆ ಸುತ್ತಾಡುವುದೂ ಇದೆ. ಕರಗ ಗರ್ಭಗುಡಿಗೆ ಸೇರುವ ಮೊದಲು ಅಗ್ನಿಕುಂಡ ಪ್ರವೇಶ ಕೂಡ ಕಾಯಂ ಆಚರಣೆ.**

**'ಓಕುಳಿಯಾಟ'**

ಹೂವಿನ ಕರಗ ಮುಗಿದ ಎರಡು ದಿನಗಳ ಬಳಿಕ ಮಹಾಭಾರತ ಪಠಣ ಕಾರ್ಯಕ್ರಮ ನಡೆಯುತ್ತದೆ. ರಾತ್ರಿ ಪಠಣದ ಸಂದರ್ಭದಲ್ಲಿ ಪೋತುಲರಾಜು ಮೈ ಮೇಲೆ ಬಂದು. ಆತ ಜೀವಂತ ಮೇಕೆಯ ಕೊರಳನ್ನು ಹಲ್ಲಿನಿಂದ ಸೀಳೀ ರಕ್ತ ಹೀರುವ ಆಚರಣೆ ಇರುತ್ತದೆ. ಇದಾದ ಮರುದಿನ ಸಂಜೆ ವಸಂತೋತ್ಸವ. ಇದೊಂದು ರೀತಿ ಓಕುಳಿಯಾಟ, ವಹ್ನಿಕುಲದ ಮಹಿಳೆಯರು ತಮ್ಮ ಮನೆಗಳಲ್ಲಿ ಸಿದ್ಧಪಡಿಸಿದ ಅರಿಶಿಣ ಕಲಿಸಿದ ನೀರನ್ನು ಬಿಂದಿಗೆಗಳಲ್ಲಿ ತುಂಬಿಸಿ, ಮೆರವಣಿಗೆಯಲ್ಲಿ ಧರ್ಮರಾಯಸ್ವಾಮಿ ದೇಗುಲಕ್ಕೆ ನೀರಿನ ಬಿಂದಿಗೆಗಳನ್ನು ತಂದು ವೃತ್ತಾಕಾರವಾಗಿ ಅಥವಾ ಸಾಲಾಗಿ ಇಡುತ್ತಾರೆ.

ಕರಗದ ಪೂಜಾರಿ ಒನಕೆ ಮೇಲೆ ಅರಿಶಿಣ ನೀರು ತುಂಬಿದ ತೆರೆದ ಪಾತ್ರೆ ಇಟ್ಟುಕೊಂಡು ತಲೆ ಮೇಲೆ ಹೊತ್ತುಕೊಂಡು ಕುಣಿಯುತ್ತಾರೆ. ಇದಾದ ಮೇಲೆ ವೀರಕುಮಾರರ 'ಓಕುಳಿಯಾಟ'. ಹೆಂಗಳೆಯರು ತಂದ ನೀರನ್ನು ಸಣ್ಣ ಪಾತ್ರೆಗಳಲ್ಲಿ ತುಂಬಿಕೊಂಡು ಪರಸ್ಪರ ಎರಚಾಡುತ್ತಾರೆ. ಇದೊಂದು ಮೋಜಿನ ಸನ್ನಿವೇಶವೂ ಹೌದು. ಓಕುಳಿಯಾಡಿದ ನಂತರ ಖಾಲಿಕೊಡಗಳು, ಉತ್ಸವ ಮೂರ್ತಿಗಳು, ವೀರಕುಮಾರರ ಅಲಗುಗಳು, ಪೂಜಾರಿಪರಿಕರಗಳನ್ನು ಮೆರವಣಿಗೆಯಲ್ಲಿ ಹತ್ತಿರದ ಕೊಳ–ಕಲ್ಯಾಣಿಗೆ ಒಯ್ದು ಶುಚಿಗೊಳಿಸಿ ಧರ್ಮರಾಯನ ಗುಡಿಗೆ ವಾಪಾಸ್ಸಾದರೆ, ಆ ವರ್ಷದ 'ಕರಗ' ಉತ್ಸವ ವಿಧಿ ಕೊನೆಯಾದಂತೆ.

**ಡಾ. ಗುರುರಾಜ ಪೋಶೆಟ್ಟಿಹಳ್ಳಿ**
**(ಪ್ರಣವ)**

# ಯುದ್ಧೋನ್ಮಾದ ಮತ್ತು ಮಾನವ ಜಗತ್ತು

ಅಮೆರಿಕ ಮತ್ತು ಇಸ್ರೇಲ್ ಇರಾನ್ ಮೇಲೆ ದಾಳಿ ಮಾಡಿ, 30 ನಗರಗಳನ್ನು ಗುರಿಯಾಗಿಸಿಕೊಂಡು, ಸುಪ್ರೀಂ ನಾಯಕ ಖಮೇನಿಯನ್ನು ಹತ್ಯೆ ಮಾಡಿದೆ. ಇದು ದೀರ್ಘಕಾಲದ ಸಂಘರ್ಷದ ಸಾಧ್ಯತೆಯನ್ನು ಹೆಚ್ಚಿಸುತ್ತದೆ. ಅಲ್ಲದೇ ಟ್ರಂಪ್ ಇನ್ನು ಎಷ್ಟು ದಿನ ಯುದ್ಧ ಮುಂದುವರೆಯುತ್ತದೆ ಎಂಬುದರ ಬಗ್ಗೆಯೂ ಸುಳಿವು ನುಡಿದಿದ್ದಾರೆ. ಹಾಗಾಗಿ ಯುದ್ಧ ಸದ್ಯಕ್ಕೆ ನಿಲ್ಲುವ ಸೂಚನೆಯಿಲ್ಲ.

ಜಗತ್ತಿನಾದ್ಯಂತ ಪದೇ ಪದೇ ಒಂದಲ್ಲ ಒಂದು ದೇಶಗಳ ನಡುವೆ ಯುದ್ಧ ನಡೆಯುತ್ತಿರುವುದನ್ನು ನಾವೆಲ್ಲಾ ನೋಡುತ್ತಿದ್ದೇವೆ. ಇಂದಿನ ಜನರಿಗೆ ನಿಜಕ್ಕೂ ಇಂತಹ ಯುದ್ಧಗಳ ಅಗತ್ಯವಾದರೂ ಏನಿದೆ..? ಇದರಿಂದ ಜನರಿಗೆ ಮತ್ತು ದೇಶಗಳಿಗೆ ಬಹಳ ನಷ್ಟವೇ ಹೊರತು, ಯಾವುದೇ ಪ್ರಯೋಜನವಿಲ್ಲ. ಈ ಯುದ್ಧ ಕಾಲದಲ್ಲಿ ನಮ್ಮ ಪತ್ರಿಕೆಯ ಅಂಕಣಕಾರರಾದ **'ಹಡವನಹಳ್ಳಿ ವೀರಣ್ಣಗೌಡ'**ರು ಯುದ್ಧಗಳ ಪರಿಣಾಮಗಳ ಬಗ್ಗೆ ಒಂದು ಬೆಳಕು ಚೆಲ್ಲುವ ಲೇಖನವನ್ನು ಬರೆದಿದ್ದಾರೆ.

**- ಸಂಪಾದಕರು**



ಯುದ್ಧವೆಂದರೆ ಪ್ರಭುತ್ವದ ಅಹಂನ ಕ್ರೌರ್ಯದ ಪ್ರದರ್ಶನ. ಇದು ಕೇವಲ ಯಾವುದೊ ಒಂದು ಪ್ರದೇಶಕ್ಕೆ, ಒಂದು ಭಾಗಕ್ಕೆ, ಒಂದು ಗುಂಪಿಗೆ, ಒಂದು ದೇಶಕ್ಕೆ ಅಥವಾ ಒಂದು ಕಾಲಕ್ಕೆ ಸೀಮಿತವಲ್ಲ. ಇತಿಹಾಸದುದ್ದಕ್ಕೂ ಪ್ರಪಂಚದ ಮೂಲೆಮೂಲೆಯಲ್ಲಿ ಘಟಿಸಿದ ಎಲ್ಲಾ ರೀತಿಯ ಯುದ್ಧಗಳಿಗೂ ಅನ್ವಯವಾಗುತ್ತದೆ.

ಸಿದ್ಧಾಂತ, ಧರ್ಮ, ಗಡಿ, ರಕ್ಷಣೆ, ಸಂಪತ್ತು, ಗದ್ದುಗೆ, ಹೆಣ್ಣು, ಭೂಮಿಗಾಗಿ ದಂಗೆ, ಘರ್ಷಣೆ, ಸಾಮೂಹಿಕ ಹತ್ಯೆ, ಯುದ್ಧಗಳು ನಡೆದಿವೆ ಹಾಗೂ ನಡೆಯುತ್ತಿವೆ. ರಾಜ–ಮಹರಾಜರ ಕಾಲದಲ್ಲಿ ನಡೆದ ಹೆಚ್ಚಿನ ಕದನಗಳು ಸಾಮ್ರಾಜ್ಯ ವಿಸ್ತರಣೆಮಾಡಿ ಸಾಮ್ರಾಟನಾಗಿ ಮೆರೆಯುವ ಭ್ರಮಾಸನ್ನಿಯಿಂದ ಆದಂತಹವು.

ಯುದ್ದಗಳಿಂದಾಗುತ್ತಿರುವ ಅನಾಹುತಗಳು ಮಾತ್ರ ಆಗಲೂ ಈಗಲೂ ಒಂದೆ ರೀತಿಯಾಗಿದ್ದು, ಇವುಗಳಿಂದಾಗುವ ದುಷ್ಪರಿಣಾಮಗಳು ಭಿನ್ನವಾಗೇನು ಇಲ್ಲ.

ಮಿಲಿಯಾಂತರ ಜನರ ಜೀವಹಾನಿಗೆ ಕಾರಣವಾಗುವ ಯುದ್ಧ ಒಂದು ಸಾಮಾಜಿಕ ವಿಪತ್ತು ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ಮಾನವ ಸಮಾಜಕ್ಕೆ ಮಾರಕವಾಗಿರುವ ಈ ಯುದ್ಧವೆಂಬ ಘೋರ ಕೃತ್ಯ ಜೀವವಿರೋಧಿ ಕೂಡ. ಅಮಾಯಕರನ್ನು ಕೊಲ್ಲುವ ಮತ್ತು ಕೊಲ್ಲಿಸುವ ಈ ಕ್ರಿಯೆ ಮನುಷ್ಯನ ಮನೋವಿಕಾರವೂ ಹೌದು.

ಮನುಷ್ಯನು ಕೂಡ ಒಂದು ಪ್ರಾಣಿ ಇದು ತಿಳಿದಿರುವ ವಿಚಾರವೆ. ಆದರೆ ಮೂಲತಃ ಕ್ರೂರಪ್ರಾಣಿ ಎನ್ನುವುದು ಕೂಡ ನಿಜವೇ ಇರಬಹುದು. ಏಕೆಂದರೆ ಎಲ್ಲತರಹದ ಹಿಂಸೆಯನ್ನು ವಿನೋದವಾಗಿ ನೋಡುತ್ತಾನೆ. ನನ್ನ ಈ ಅಭಿಪ್ರಾಯಕ್ಕೆ ಹಲವರ ಸಹಮತ ಇಲ್ಲದಿರಬಹುದು. ಆದರೆ ಕೊಲೆ, ಸುಲಿಗೆ, ದರೋಡೆ, ಸಾಮೂಹಿಕ ಹತ್ಯಾಕಾಂಡ, ಮಹಿಳೆಯರ ಮಾನಭಂಗ, ಮಕ್ಕಳು, ವೃದ್ಧರು ಹಾಗೂ ಅಸಹಾಯಕರ ಮೇಲೆ ದೌರ್ಜನ್ಯ ಇದನ್ನೆಲ್ಲ ಮಾಡುವವರಾದರು ಯಾರು.....!?. ಹಿಂದೆ ಈ ಎಲ್ಲಾತರಹದ ದುಷ್ಕೃತ್ಯಗಳು ಯುದ್ಧದ ಒಂದು ಭಾಗವಾಗಿಯೇ ಇದ್ದವು. ಸೋತವರ ಮೇಲೆ ಗೆದ್ದ ಸೈನ್ಯವು ಇಂತಹ ಅಮಾನುಷ ಕೃತ್ಯಗಳನ್ನು ನಡಸುತ್ತಿದ್ದವು. ಈಗದರ ರೂಪಗಳು ಬದಲಾಗಿದ್ದು ಪರಿಣಾಮಗಳೇನು ಬೇರೆಯಾಗಿಲ್ಲ.

ಲಾರೆನ್ಸ್ ಹೆಚ್.ಕೀಲಿ ಎನ್ನುವ ಇಲಿನಾಯ್ಸ್ ವಿ.ವಿ.ಪ್ರಾಧ್ಯಾಪಕ ಹಾಗೂ ಸಂಶೋಧಕ ತನ್ನ 'ನಾಗರಿಕತೆಗೂ ಮುನ್ನ ಯುದ್ಧ'ಎನ್ನುವ ಕೃತಿಯಲ್ಲಿ ಇತಿಹಾಸದುದ್ದಕ್ಕೂ ಶೇ90 ರಿಂದ 95 ರಷ್ಟು ಸಮಾಜದಲ್ಲಿ ದಂಗೆಗಳು, ದಾಳಿಗಳು, ಹತ್ಯಾಕಾಂಡಗಳಂತಹ ಹಲವಾರು ಶೈಲಿಯ ಯುದ್ಧಗಳು ನಡೆಯುತ್ತಿದ್ದವೆಂದು ವಿವರಿಸಿದ್ದಾನೆ. ಹಾಗಾಗಿ ಎಲ್ಲಾ ಕಾಲಕ್ಕೂ ಯುದ್ಧಗಳು ಒಂದಲ್ಲ ಒಂದು ರೀತಿಯಲ್ಲಿ, ಒಂದಲ್ಲ ಒಂದು ಕಾರಣಕ್ಕೆ ನಡೆಯುತ್ತಲೇ ಬಂದಿರುವುದನ್ನು ಕಾಣಬಹುದು.

ಯುದ್ಧಗಳಿಂದ ರಾಜ್ಯಗಳ ಉದಯ, ರಾಜ್ಯಗಳ ರಕ್ಷಣೆಗಾಗಿ, ವಿಸ್ತರಣೆಗಾಗಿ ಮತ್ತೆ ಸರಣಿ ಯುದ್ಧಗಳು. ಹೀಗೆ ನಾಗರಿಕತೆಯ ಹುಟ್ಟಿನಿಂದಲೂ ಯುದ್ಧಭೂಮಿ ಹಾಗೂ ಅದರೊಳಗಿನ ಸಾವು ನೋವಿನ ರಕ್ತದ ಕಲೆಗಳು ಇಂದಿಗೂ ಕಾಣಸಿಗುತ್ತವೆ.

ಆಯುಧಗಳ ಆವಿಷ್ಕಾರದಿಂದ ಆರಂಭಗೊಂಡ ಎದುರಾಳಿಯೊಂದಿಗಿನ ಸೆಣೆಸಾಟ ಲೋಹಗಳ ಬಳಕೆಯಿಂದ ಮೊದಲ್ಗೊಂಡು ಗನ್ ಪೌಡರ್ ಉಪಯೋಗವನ್ನರಿತಂದಿನಿಂದ ಮಾನವನ ತೋಳ್ಬಲದ ಸಿಟ್ಟು ಜೀವಹಾನಿಕರ ಯುದ್ಧವಾಗಿ ಮಾರ್ಪಟ್ಟಿದ್ದು ಇತಿಹಾಸದ ಪುಟಗಳಲ್ಲಿ ದಾಖಲಾಗಿ ಉಳಿದಿದೆ.

ವಿಜ್ಞಾನ ಮತ್ತು ತಂತ್ರಜ್ಞಾನ ಬೆಳೆದಂತೆ ಯುದ್ಧದ ಮಾದರಿಗಳು



ಬದಲಾಗುತ್ತಿವೆ. ಪ್ರಾಚೀನ ಇತಿಹಾಸ ಕಾಲಕ್ಕೆ ನೆಡೆದಿರುವ ಸಾಂಪ್ರದಾಯಿಕ ಯುದ್ಧಗಳನ್ನು ಧರ್ಮ ಯುದ್ಧವೆನ್ನುತ್ತಿದ್ದರು. ಅದರಲ್ಲಿ ಅನೇಕ ನಿಯಮಗಳನ್ನು ಅಳವಡಿಸಿಕೊಂಡು ಅವುಗಳಿಗೆ ನೈತಿಕ ರೂಪದ ಲೇಪನ ಹಚ್ಚಿದ್ದರು. ಇದರಿಂದ ಸಾಮಾನ್ಯ ನಾಗರಿಕ ಸಮಾಜಕ್ಕೆ ಹೆಚ್ಚಿನ ರಕ್ಷಣೆ ಸಿಗುತಿತ್ತು ಆದರೀಗ ಹಲವು ದೇಶಗಳು ಪರಮಾಣು ಯುದ್ಧ, ಜೈವಿಕ ಯುದ್ಧ, ರಾಸಾಯನಿಕ ಯುದ್ಧದಂತಹ ಜಗತ್ತನ್ನೆ ವಿಧ್ವಂಸ ಮಾಡುವ ಅಪಾಯಕಾರಿ ಯುದ್ಧಮಾರ್ಗಗಳತ್ತ ವಾಲುತ್ತಿರುವುದು ಅತ್ಯಂತ ಹೀನ ನೆಡೆಯಾಗಿದ್ದು, ಇಲ್ಲಿ ಯಾವುದೇ ನೈತಿಕ ನಿಯಮಗಳಿಗೂ ಅವಕಾಶವಿಲ್ಲ. ಹಾಗಾಗಿ ಇದು ಜಗತ್ತಿನ ವಿನಾಶದ ಮುನ್ಸೂಚನೆಯಂತೆ ಗೋಚರವಾಗುತ್ತಿದೆ.

ಅನಿರೀಕ್ಷಿತ ಆಕ್ರಮಣ, ಧರ್ಮದ ಹೆಸರಿನಲ್ಲಿ ಹತ್ಯೆಮಾಡುವುದು, ಉಗ್ರಗಾಮಿಗಳ ಅಟ್ಟಹಾಸ, ಅಪ್ರಚೋದಿತ ದಾಳಿಗಳು, ಜನರು ಸೇರುವ ಜಾಗಗಳಲ್ಲಿ ಬಾಂಬ್ ಇಟ್ಟು ಸ್ಫೋಟಿಸುವುದು ಮೊದಲಾದ ಅತಿ ಹೀನ ಮಾರ್ಗಗಳ ಮೂಲಕ ಸಾಮಾನ್ಯರ, ವೃದ್ಧರ, ಮಕ್ಕಳ, ಮಹಿಳೆಯರ ಹತ್ಯೆಗಳಾಗುತ್ತಿವೆ. ಇತ್ತೀಚಿನ ದಿನಗಳಲ್ಲಂತು ಅಮಾಯಕ ನಾಗರಿಕ ಹತ್ಯೆಗಳು ಮಾಮೂಲಿಯಾಗುತ್ತಿರುವುದು ಕಳವಳಕಾರಿಯಾಗಿದೆ.




ಅಪಮಾರ್ಗಗಳಲ್ಲಿ ನೆಡೆಯುತ್ತಿರುವ ಈ ದಾಳಿಗಳು ಮನುಷ್ಯನ ಕ್ರೌರ್ಯದ ಮತ್ತಷ್ಟು ಮಾದರಿಗಳೆನ್ನಬಹುದು.

ಯುದ್ದ ಕೇವಲ ಮನುಷ್ಯನ ಬದುಕನ್ನಷ್ಟೆಯಲ್ಲ ಪ್ರಾಣಿ, ಪಕ್ಷಿ, ಕ್ರಿಮಿ, ಕೀಟ, ನೆಲ, ಜಲ, ಗಿಡ, ಮರ ಹೀಗೆ ಜೀವ ವೈವಿಧ್ಯತೆಯ ಗತಿಯನ್ನೇ ಬದಲಿಸುತ್ತದೆ. ಇದರಿಂದಾಗುವ ಪ್ರತ್ಯಕ್ಷ ಹಾಗೂ ಪರೋಕ್ಷ ಪರಿಣಾಮಗಳು ವರ್ಷಾನುಗಟ್ಟಲೆ ಮಾನವ ಜಗತ್ತನ್ನು ಕಾಡುತ್ತಲೇ ಇರುತ್ತವೆ. ಆದರೂ ಮನುಷ್ಯನೊಳಗಿನ ಯುದ್ಧದಾಹ ಕಡಿಮೆಯಾಗುತ್ತಿಲ್ಲ.

ನಾಗರಿಕತೆಯ ಉತ್ತುಂಗದಲ್ಲಿರುವ ನಾವು ಆಧುನಿಕತೆಯ ಬೆನ್ನೇರಿ ಬೆಳಕಿನ ವೇಗದಲ್ಲಿ ಬದಲಾಗುತ್ತಿದ್ದೇವೆ. ಆದರೆ ನಮ್ಮೊಳಗಿನ ಆಕ್ರಮಣಶೀಲ ಮನೋಭಾವವನ್ನು ಮಾತ್ರ ಬದಲಾಯಿಸಿಕೊಳ್ಳಲಾಗುತ್ತಿಲ್ಲ. ಎಲ್ಲಾ ರಾಷ್ಟ್ರಗಳು ತಮ್ಮ ರಕ್ಷಣೆಗಾಗಿ ಯುದ್ಧ ಸಾಮಗ್ರಿಗಳನ್ನು ಕೊಳ್ಳುವ, ತಯಾರಿಸುವ,ಶೇಖರಿಸಿಡುವ ದಾವಂತದಲ್ಲಿವೆ. ಈ ತವಕದಲ್ಲಿ ಮಾನವನ ಅಭಿವೃದ್ಧಿಗೆ ಅಗತ್ಯವಿರುವ ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರಗಳನ್ನು ಗಂಭೀರವಾಗಿ ಪರಿಗಣಿಸುತ್ತಿಲ್ಲ ಎನ್ನುವುದು ಗಮನಾರ್ಹ. ಇಲ್ಲಿ ಮನುಷ್ಯನ ಕಲ್ಯಾಣಕ್ಕಿಂತ ಯುದ್ಧ ಸನ್ನದ್ಧವೆ ಜಗತ್ತಿನ ಎಲ್ಲಾ ರಾಷ್ಟ್ರಗಳಿಗೂ ಬಹಳ ಮುಖ್ಯವಾಗಿದೆ.

ಜಾಗತಿಕ ಮಟ್ಟದಲ್ಲೀಗ ಮಾನವ ಸಮಾಜದ ಉಳಿವಿಗಿಂತ ಯುದ್ಧೋನ್ಮಾದವೇ ಅಧಿಕವಾಗುತ್ತಿದೆ. ಯುದ್ಧದಿಂದಾಗುವ ಜೀವ ಹಾನಿ, ಪರಿಸರ ನಾಶ, ಆರ್ಥಿಕತೆಯ ಅಧಃಪತನ, ಮೂಲ ಸೌಕರ್ಯಗಳ ನಾಶ, ಜಲಮೂಲ, ಸಸ್ಯಸಂಪತ್ತು, ಮಣ್ಣು, ಕೃಷಿ, ಅಪರೂಪದ ಪ್ರಾಕೃತಿಕ ಸಂಪನ್ಮೂಲಗಳ ನಾಶ, ಉತ್ಪಾದನೆಗಳ ಕುಂಟಿತ, ನಿರುದ್ಯೋಗ ಸೃಷ್ಟಿ, ನಾಗರಿಕ ಸೇವೆಗಳ ವ್ಯತ್ಯಯ, ಜನರ ಭೌತಿಕ ಹಾಗೂ ಬೌದ್ಧಿಕ ಆರೋಗ್ಯದ ಮೇಲೆ ದುಷ್ಪರಿಣಾಮ ಮೊದಲಾದ ಮನುಷ್ಯ ಬದುಕಿನ ಅಗತ್ಯ ವಿಚಾರಗಳು ಮುಖ್ಯವೇ ಆಗುತ್ತಿಲ್ಲ. ಇಂತಹ ವಿಷಯಗಳ ಬಗ್ಗೆ ಶಾಂತಿ ಬಯಸುವ ರಾಷ್ಟ್ರಗಳು ಸೇರಿದಂತೆ ವಿಶ್ವಸಂಸ್ಥೆಯು ಗಂಭೀರವಾಗಿ ಚರ್ಚಿಸಿ, ದಿಟ್ಟ ನೆಡೆ ಮತ್ತು ನಿಲುವನ್ನು ತಾಳಬೇಕಾದುದ್ದು ಪ್ರಸ್ತುತ ಕಾಲಘಟ್ಟದಲ್ಲಿ ಅತಿ ಮುಖ್ಯವಾಗುತ್ತದೆ.

ಒಂದೇ ನೆಲದ ತುಂಡನ್ನು ಹಂಚಿಕೊಂಡು ಆರೋಗ್ಯಕರವಾದ ಸ್ಪರ್ಧೆಗಳಿಂದ ಅಣ್ಣತಮ್ಮರಂತೆ ಬಾಳಬೇಕಾದವರು ಕೂಡ ತಮ್ಮ ಆಕ್ರಮಣ ಮನೋಭಾವ ದಿಂದ ಅಗತ್ಯವಿಲ್ಲದಿದ್ದರೂ ನೆರೆಹೊರೆಯನ್ನು ಕೆಣಕುವುದು, ಕೆಣಕಿಸಿಕೊಂಡವರು ಪ್ರತೀಕಾರಕ್ಕಿಳಿಯುವುದು. ಇದು ಯುದ್ಧಭೂತವಾಗಿ ಮಾರ್ಪಡುವುದು ಸಾಮಾನ್ಯ ಕೃತ್ಯವೆಂಬಂತಾಗಿದೆ. ಇಲ್ಲಿ ಕ್ರಿಯೆ ಮತ್ತು ಪ್ರತಿಕ್ರಿಯೆ ಎರಡು ಅಮಾನವೀಯವೆ. ಕೊನೆಯಲ್ಲಿ ಇದನ್ನೆಲ್ಲ ಅನುಭವಿಸಬೇಕಾದವರು ಮಾತ್ರ ಇದ್ಯಾವುದಕ್ಕೂ ಕಾರಣರಲ್ಲದ ಪ್ರಜೆಗಳು ಎನ್ನುವುದು ವಾಸ್ತವವಲ್ಲವೇ?.

ಆಳುವ ದೊರೆ ಹಾಗೂ ಮಂತ್ರಿಗಳ ಸಮೂಹ ಏನೇ ಹೇಳಿಕೊಳ್ಳಲಿ ದೇಶವೇ ತಾನಾಗಿ, ಎಲ್ಲಾ ತ್ಯಾಗಕ್ಕೂ ಸಿದ್ಧನಾಗಿ ನಿಲ್ಲುವ ಯೋಧನೇ ನಿಜವಾದ ರಾಷ್ಟ್ರಪ್ರೇಮಿ. ಇದು ಜಗತ್ತಿನ ಎಲ್ಲಾ ಯೋಧರಿಗೂ ಅನ್ವಯಿಸುತ್ತದೆ. ಯುದ್ಧದಿಂದಾಗುವ ತೀಕ್ಷ್ಣ ಪರಿಣಾಮಗಳನ್ನು ಯೋಧ ಮತ್ತು ಅವನ ಅಪ್ಪ,ಅಮ್ಮ,ಹೆಂಡತಿ,ಮಕ್ಕಳು ಅನುಭವಿಸುತ್ತಾರೆಯೇ ಹೊರತು ಯುದ್ಧಕಾಲದಲ್ಲಿ ಬೀದಿಗೆ ಬಂದು ಜೈಕಾರ ಕೂಗುವ ಯುದ್ಧೋನ್ಮಾದಿಗಳಲ್ಲ ಎನ್ನುವುದು ಕಟುಸತ್ಯ.

ಜಗತ್ತಿನಾದ್ಯಂತ ನೆಡೆದ ನೂರಾರು ಯುದ್ದಗಳ ಕುರಿತು ಅಧ್ಯಯನ ಮಾಡಿದಾಗ ಇದುವರೆಗೂ ನೆಡೆದಿರುವ ಹೆಚ್ಚಿನ ಯುದ್ಧಗಳು ಆಳುವವರ ಪ್ರತಿಷ್ಠೆಗಾಗಿ, ಅವರ ಶಕ್ತಿಪ್ರದರ್ಶನಕ್ಕಾಗಿ, ಅಧಿಕಾರದ ಅಮಲಿಗಾಗಿ, ಅವರ ತಿಕ್ಕಲುತನದಿಂದಾಗಿಯೆ ಹೊರತು ಜನಸಾಮಾನ್ಯರ ಹಿತಕ್ಕಾಗಿ ಅಲ್ಲ ಎನ್ನುವುದು ಅರ್ಥವಾಗುತ್ತದೆ.

ಮಾನವ ಜಗತ್ತಿಗೆ ಮಾರಕವಾಗಿರುವ, ಜೀವಜಗತ್ತಿಗೆ ಒಳಿತನ್ನು ಮಾಡದ ಯುದ್ದ, ಸಂಘರ್ಷ, ಆಕ್ರಮಣ, ಘರ್ಷಣೆ, ದಂಗೆಯಂತಹ ಹಿಂಸಾಕೃತ್ಯಗಳು ಮತ್ತೆಮತ್ತೆ ಮರುಕಳಿಸುತ್ತಲೇ ಇರುವುದು ಸರಿಯೇ?. ಸಹಿಸುವಿಕೆಯ ಎಲ್ಲೆ ಮೀರಿದಾಗ ಅಥವಾ ಸಾಧ್ಯವೇ ಇಲ್ಲ ಎನ್ನುವ ಹಂತ ತಲುಪಿದಾಗ ಯುದ್ಧ ಅನಿವಾರ್ಯವಾಗಬಹುದು. ಅದು ಅಲ್ಲಿಗಷ್ಟೆ ಸೀಮಿತವಾಗುವುದು ಜೀವಜಗತ್ತಿನ ಉಳಿಯುವಿಕೆಯಿಂದ ಒಳಿತಲ್ಲವೇ?.

ಯುದ್ಧಗಳ ಕಾರಣದಿಂದ ಈ ನೆಲದಲ್ಲಿ ಮಳೆನೀರಿಗಿಂತಲೂ ಮನುಷ್ಯರ ರಕ್ತ ಹೆಚ್ಚು ಹರಿದಿದೆ. ಕ್ರಿಸ್ತಪೂರ್ವದಿಂದ ಇಂದಿನವರೆಗೂ ನೆಡೆದಿರುವ ಎಲ್ಲಾ ಯುದ್ಧಗಳು ವಿಕಾರ ಮತ್ತು ವಿಕೃತಿಯ ಗುರುತುಗಳನ್ನೆ ಬಿಟ್ಟಹೋಗಿವೆ. ಪ್ರತಿಯುದ್ಧವು ಕಳೆದು ಹೋದವರ, ಕಳೆದುಕೊಂಡವರ, ಉಳಿದು ನರಳುವವರ ನೋವಿನ ಕತೆಗಳನ್ನೇ ಹೇಳುತ್ತವೆ. ಹೀಗಿರುವಾಗ

ಇಡೀ ಮನುಕುಲಕ್ಕೆ ಒಳಿತಾಗದ, ಜೀವಸಂಕುಲವನ್ನೇ ಹಾನಿ ಮಾಡುವ ಮಾರಕವಾದ ಈ ಅಮಾನವೀಯ ಯುದ್ದಗಳು ಸರಿಯೇ?.

ಪ್ರಭುಗಳ ಮತ್ತು ಪ್ರಭುತ್ವದ ಪ್ರತಿಷ್ಠೆಗಾಗಿ ಸಾವಿರಾರು ಜನರ ಬಲಿ, ಲಕ್ಷಾಂತರ ಜನರ ಬದುಕಿನ ನಾಶ ಮಾಡುವುದರಲ್ಲಿ ಯಾವ ಪುರುಷಾರ್ಥ ಅಡಗಿದೆ? ಎನ್ನುವ ಜಿಜ್ಞಾಸೆ ನನ್ನದು. ■

# ಪ್ರಕೃತಿಯೂ ಆಚರಿಸುವ ಹಬ್ಬ

# ಯುಗಾದಿ

ಡಾ. ಗುರುರಾಜ ಪೋಶೆಟ್ಟಿಹಳ್ಳಿ
(ಪ್ರಣವ)



**ಮುಗುಳ್ನಗೆ ಚಿಗುರಲಿ, ನಗೆ ಹೂ ಅರಳಲಿ.**
**ಕಾಲಚಕ್ರ ಉರುಳುತಿದೆ, ಗಾಳಿ ಮೊರೆದು ಹೊರಳುತಿದೆ**
**ಗೆಜ್ಜೆ ಸದ್ದು ಹೆಜ್ಜೆ ನೆರಳು ದಾರಿಯುದ್ದಕ್ಕೂ**
**ಅರ್ಧ ಸುಖ, ಅರ್ಧ ದುಃಖ ಬಾನ ಕಡೆಗೆ ತೆರೆದ ಮುಖ**
**ತಾಯ ಸೆರಗ ಹಿಡಿದ ಕಂದ ದಾರಿಯುದ್ದಕ್ಕೂ...**

ಹಾಗಂತ ಬರೆದವರು ಕವಿ ಕೆ.ಎಸ್. ನರಸಿಂಹಸ್ವಾಮಿ. ನಾವೆಲ್ಲರೂ ತಾಯ ಸೆರಗು ಹಿಡಿದ ಕಂದಮ್ಮರೇ. ಇಲ್ಲಿ ತಾಯಿಯೆಂದರೆ ಪ್ರಕೃತಿ. ಬೆಂಕಿ ಸುರಿಸಿ, ಮಳೆ ಇಳಿಸಿ, ಚಳಿಯಾಗಿ ಅಪ್ಪುವವಳು. ಚಿಗುರಾಗಿ ಅರಳಿ, ಹೂವಾಗಿ ಮರಳಿ ನಮ್ಮನ್ನು ಪೊರೆಯುವವಳು. ಯುಗಾದಿಯೆಂದರೆ ಅದೇ ಕಾರಣಕ್ಕೆ ಆರಂಭ. ಚೈತ್ರಮಾಸ ಶುಕ್ಲ ಪಕ್ಷ ವಸಂತ ಋತು.



ನಮ್ಮ ಹಿರಿಯರು ಪ್ರಕೃತಿಯನ್ನು ನೋಡಿಕೊಂಡೇ ಹಬ್ಬಗಳನ್ನು ನಿಗದಿಪಡಿಸಿದ್ದಾರೆ ಅನ್ನುವುದಕ್ಕೆ ಯುಗಾದಿಯೇ ಸಾಕ್ಷಿ. ಚೈತ್ರ ಮಾಸ ಶುರುವಾಗುತ್ತಿದೆ. ಮಾವಿನ ಮರಗಳ ತುಂಬ ಚಿಗುರು, ಹೂವು ಯಾವುದಾದರೂ ಬೆಟ್ಟದ ಕಿಬ್ಬದಿಗೆ ನಿಂತು ನೋಡುತ್ತಿದ್ದರೆ ಇಡೀ ಕಾಡೇ ಥಳಥಳ ಹೊಳೆಯುವಂತೆ ಕಾಣುತ್ತದೆ. ಬೇಸಿಗೆಯ ಬೇಗೆ, ಹೊಟ್ಟೆತುಂಬ ಹಸಿವು, ನೀರಿಗೂ ಅಮೃತದ ರುಚಿ, ಸಣ್ಣ ನಿದ್ದೆಗೆಳೆಯುವ ಮಧ್ಯಾಹ್ನದ ತಂಗಾಳಿ, ರಾತ್ರಿ ಮೋಡಗಳೇ ಇಲ್ಲದ ಆಕಾಶ. ಶುಕ್ಲಪಕ್ಷದ ಚಂದ್ರನಿಗೆ ಹನಿಮೂನು. ಪುಳಕ ಬೇಸಿಗೆಯೆಂದರೆ ಹಿಂಸೆ ಅನ್ನುವವರಿದ್ದಾರೆ. ಆದರೆ ನಮ್ಮನ್ನು ಅರಳಿಸುವುದು ಬೇಸಿಗೆಯೇ. ಚಳಿಗಾಲ ಮುದುರಿಸುತ್ತದೆ. ಬೇಸಿಗೆ ಕಾಯಿಸುತ್ತದೆ. ಕಾದು ಕಾದು ಗಾರಾದ ಮಣ್ಣಿಗೆ ನೀರು ಬಿದ್ದಾಗಲೇ ಅಲ್ಲಿ ಸೃಷ್ಟಿ ಚೈತನ್ಯ, ಚಳಿಗಾಲದಲ್ಲಿ ಎಲೆ ಉದುರಿಕೊಂಡು ಮತ್ತೆ ಬೇಸಿಗೆಯಲ್ಲಿ ಚಿಗುರಿ ನಿಂತರೇ ಅಲ್ಲಿ ಹೂವು, ಕಾಯಿ, ಹಣ್ಣು ಭತ್ತದ ತೆನೆ ಬಂಗಾರ ಕಲಶ.



ಇವತ್ತೇನಾಗುತ್ತಿದೆ ಎಂಬುದು ಅಚ್ಚರಿ ಮತ್ತು ವಿಷಾದ. ಬಜೆಟ್ಟಿನ ಹೊರೆಯಿಂದ ಮುಕ್ತರಾಗುವುದಕ್ಕೆ ರಾಜಕೀಯ ಪಕ್ಷಗಳು ಹೆಣಗುತ್ತಿವೆ. ಸಾಲದ ಹೊರೆ ಹೊತ್ತುಕೊಂಡು ನಮ್ಮ ರೈತರನ್ನು ಓಲೈಸುವುದಕ್ಕೆ ಹೊರಟಿವೆ. ರೈತ ದೇಶದ ಬೆನ್ನೆಲುಬು ಎಂಬ ಕ್ಲೀಷೆ ಮಾತುಗಳು ಕೇಳಿಬರುತ್ತಿವೆ. ಅವರನ್ನು ದುಡಿಯುವುದಕ್ಕೆ ಹಚ್ಚುವ, ಅವರ ದುಡಿಮೆಗೆ ತಕ್ಕ ಬೆಲೆ ನೀಡುವ ಯೋಜನೆಗಳ ಬದಲು ಅವರಿಗೆ ಕಡಿಮೆ ಬಡ್ಡಿಗೆ ಸಾಲ ಕೊಡುತ್ತಾ, ಕೃಷಿಕರನ್ನು ಸಾಲಗಾರರನ್ನಾಗಿ ಮಾಡುವ ಹುನ್ನಾರವಷ್ಟೇ ಗೋಚರಿಸುತ್ತಿದೆ. ನಗರ ಮತ್ತು ಹಳ್ಳಿಗಳ ನಡುವಿನ ವ್ಯತ್ಯಾಸ ಗಮನಿಸಿ, ಇಲ್ಲಿ ಪುಟ್ಟ ಮಕ್ಕಳು ಕೂಡ ತಿನ್ನುವ ತಿನ್ನಬಯಸುವ ಒಂದು ಬರ್ಗರ್‌ಗೆ ಎಂಟು ಕೆ.ಜಿ. ಅಕ್ಕಿ ಸಿಗುತ್ತದೆ. ಕೃಷಿ ಕಾರ್ಮಿಕರು ತಿಂಗಳಿಗೆ ಎಂಟು ಕೆ.ಜಿ. ಅಕ್ಕಿ ಹುಟ್ಟಿಸಿಕೊಳ್ಳುವುದಕ್ಕೆ ಒದ್ದಾಡುತ್ತಾರೆ. ನಮ್ಮದಲ್ಲದ ನಮ್ಮ ಪರಿಸರದಲ್ಲಿ ಇಲ್ಲದ ಸಂಗತಿಗಳಿಗೆ ಮನಸ್ಸು ಹಾತೊರೆಯುತ್ತದೆ. ಚೀನಿಯರು ಮೆಚ್ಚಿ ತಿನ್ನುತ್ತಿದ್ದ ಮಂಚೂರಿ ನಮಗೆ ಅತ್ಯಂತ ಪ್ರಿಯ. ಪಂಜಾಬಿನ ರೋಟಿ ನಮಗೆ ಬೇಕು. ಹೋಟೆಲಿಗೆ ಹೋದರೆ ಮಲ್ಟಿ ಕಾಂಟಿನೆಂಟಲ್ ಅನ್ನುತ್ತಾರೆ. ಅನ್ಯ ಪರಿಸರದ ಪ್ರಭಾವದ ನಡುವೆಯೇ ನಾವು ಯುಗಾದಿ ಎನ್ನುತ್ತೇವೆ. ಯಾವ ಯುಗ ನಮ್ಮೆದುರು ತೆರೆದುಕೊಳ್ಳುತ್ತಿದೆ ಎಂದು ನೋಡುತ್ತಾ ಹೋದರೆ ಕೊನೆಯಿಲ್ಲದ ಕತ್ತಲ ಸುರಂಗಕ್ಕೆ ಕಾಲಿಟ್ಟಂತೆ ಕಾಣುತ್ತದೆ.

’ಈ ದೇಶದಲ್ಲಿ ಹಬ್ಬಗಳು ಯಾವತ್ತೋ ಅರ್ಥ ಕಳಕೊಂಡಿವೆ. ನಾವು ಮೆಸೇಜು, ಗ್ರೀಟಿಂಗ್ಸ್ ಕಳಿಸಿಕೊಂಡು ಹಬ್ಬ ಹಬ್ಬ ಅಂತ ಕಿರುಚಾಡ್ತೀವಲ್ಲ, ಅದಕ್ಕೆಲ್ಲ ಏನರ್ಥ? ಹಬ್ಬ ನಡಿಯೋದು ಹೊರಗೆ, ಅದರ ಪ್ರಭಾವ ಆಗೋದು ಒಳಗೆ. ಹೊರಗೆ ದೀಪ ಹಚ್ಚಿದರೆ ಒಳಗೆ ಬೆಳಕು ಮೂಡಬೇಕು.

ಮೀನುಗಳು ನಿಟ್ಟುಸಿರಿಟ್ಟ ಕತೆಯನ್ನು ಗಾಳ ಕೇಳಿಸಿಕೊಳ್ಳುತ್ತಿದೆ. ಬಿದಿಗೆ ಚಂದ್ರನ ಪ್ರತಿಬಿಂಬವನ್ನೂ ಸಣ್ಣ ಮೀನುಗಳು ಗಾಳವೆಂದು ಭಾವಿಸಿ ಕಂಗಾಲಾಗಿವೆ. ಸರಭರ ಭರಭರನೆ ಸಾಗಿಹೋಗುವ ಅತಿವೇಗದ ಬಸ್ಸುಗಳೂ ಕಾರುಗಳೂ ಹಳ್ಳಿಗಳ ಕಡೆಗೆ ತಿರುಗಿಯೂ ನೋಡುವುದಿಲ್ಲ. ಶುಭ್ರಜ್ಯೋತ್ಸ್ನಾ ಪುಲಕಿತ ಯಾಮಿನಿ ಎಂಬ ಸಾಲನ್ನು ಕರೆಂಟು ದೀಪಗಳು ಸುಳ್ಳು ಮಾಡಿವೆ. ಸಸ್ಯ ಶ್ಯಾಮಲೆ ಮಲೆನಾಡಿನ ಅಂತರಾಳದಲ್ಲಿ ದಂಗೆಯ ದನಿ ಕೇಳಿಸುತ್ತಿದೆ. ದುಡಿದು ಪಡೆಯಲಾರದ್ದನ್ನು ಬೇಡಿ, ಬೇಡಿ ಪಡೆಯಲಾರದ್ದನ್ನು ಕಾಡಿ,

ಕಾಡಿಯೂ ಪಡೆಯಲಾರದ್ದನ್ನು ಹೋರಾಡಿ ಪಡೆಯುವ ಪಡೆಯೊಂದು ದಿಡ್ಡಿ ಬಾಗಿಲಲ್ಲಿ ಕಾಯುತ್ತಿದೆ. ಆ ಹುಡುಗರಿಗೆ ಬಂದ ದಾರಿಯ ಗುರುತು ಮರೆತುಹೋಗಿದೆ. ಹೊರದಾರಿಗಳು ಗೋಚರಿಸುತ್ತಿಲ್ಲ. ಆತ ಬಾವಿಯ ಅಂಚಿಗೆ ಜೋತುಬಿದ್ದಿದ್ದಾನೆ. ಬಾವಿಯೊಳಗೆ ತಿಂಗಳ ಹಿಂದೆ ಬಿದ್ದ ಹಸಿದ ಹುಲಿ ಅವನಿಗಾಗಿ ಕಾಯುತ್ತಿದೆ.

ಇಲಿಯೊಂದು ಅವನು ಹಿಡಿದು ಜೋತಾಡುತ್ತಿರುವ ಬೇರನ್ನು ಕಡಿಯುತ್ತಿದೆ. ಯಾವ ಕ್ಷಣದಲ್ಲಿ ಬೇಕಾದರೂ ಬೇರು ತುಂಡಾಗಬಹುದು. ಅದೇ ಹೊತ್ತಿಗೆ ಪಕ್ಕದಲ್ಲೇ ಚಾಚಿಕೊಂಡ ಬಳ್ಳಿಯಲ್ಲಿರುವ ಕಳಿತ ದ್ರಾಕ್ಷಿ ಹಣ್ಣು ಕಾಣಿಸುತ್ತಿದೆ. ಆತ ಒಂದೇ ಕೈಯಲ್ಲಿ ಬೇರು ಹಿಡಿದು ಜೋತಾಡುತ್ತಾ, ದ್ರಾಕ್ಷಿ ಹಣ್ಣಿಗೆ ಕೈ ಚಾಚುತ್ತಾನೆ. ಅಲ್ಲಿಗೆ ಆ ಚಿತ್ರ ಸ್ತಬ್ಧವಾಗಿದೆ. ಯುಗಾದಿ ಅಂದಾಗೆಲ್ಲ ಈ ಸ್ತಬ್ಧವಾದ ಚಿತ್ರವಷ್ಟೇ ಕಣ್ಣಿಗೆ ಕಟ್ಟುತ್ತದೆ. ಹಬ್ಬಕ್ಕೆಂದು ತಂದ ಹರಕೆಯ ಕುರಿ ತೋರಣದ ತಳಿರ ಮೇಯುತ್ತಿತ್ತಾ ಎಂಬ ವಚನ ಕ್ರಮೇಣ ಅರ್ಥವಿಸ್ತಾರ ಮಾಡಿಕೊಂಡು ವ್ಯಾಪಕವಾಗುತ್ತಿದೆ.

ನಾವು ತೆರೆದ ಬಾಗಿಲಲ್ಲಿ ನಿಂತು ಕಾಯುತ್ತಿದ್ದೇವೆ. ಈ ಯುಗಾದಿ ಎಲ್ಲರಿಗೂ ಬೊಗಸೆ ತುಂಬ ನೆಮ್ಮದಿ ಕೊಡಲಿ. ನಗು ಕೊಡಲಿ. ಸಿಟ್ಟಿನ ಕೊಡಲಿ ಕಡಲಿನ ಆಳ ಸೇರಿ ಪರಶುರಾಮ ಸೃಷ್ಟಿ ನಳನಳಿಸಲಿ.

ಕಾಲ ಆದಿ, ಅಂತ್ಯ ರಹಿತವಾದುದು. ಈ ಸುದೀರ್ಘವಾದ ಕಾಲವನ್ನು ಮನುಷ್ಯ ತನ್ನ ಕೈಗೆಟುಕುವಷ್ಟು ಅಗತ್ಯವಿರುವಷ್ಟು, ಸಂದರ್ಭಕ್ಕೆ ತಕ್ಕಂತೆ ವಿಭಾಗ ಮಾಡಿಕೊಂಡಿದ್ದಾನೆ. ಇದನ್ನು ಘಳಿಗೆ, ವಿಘಳಿಗೆ, ಯಾಮ, ತಿಥಿ, ವಾರ, ಮಾಸ, ಋತು, ವರ್ಷ, ಮನ್ವಂತರ.... ಹೀಗೆ ವಿಭಾಗಿಸಿ ಅದಕ್ಕೊಂದಿಷ್ಟು ಹೆಸರು ಕೊಟ್ಟುಕೊಂಡಿದ್ದಾನೆ.

ಒಂದು ದೃಷ್ಟಿಯಲ್ಲಿ ಕಾಲವು ಬ್ರಹ್ಮಾಂಡದ ಮೂಲ ಸ್ವತ್ತಾಗಿದ್ದು, ಅದರ ಆಯಾಮದಲ್ಲಿ ಎಲ್ಲಾ ಘಟನೆಗಳೂ ಸಂಭವಿಸುತ್ತವೆ. ಇನ್ನೊಂದು ದೃಷ್ಟಿಯಲ್ಲಿ ಕಾಲವು ಮಾನವ ಬ್ರಹ್ಮಾಂಡವನ್ನು ಅರ್ಥ ಮಾಡಿಕೊಳ್ಳಲು ಘಟನೆಗಳ ಮಧ್ಯವನ್ನು ಅಳೆಯಲು ಸೃಷ್ಟಿಸಿರುವ ಒಂದು ಕಲ್ಪನೆಯಾಗಿದೆ.
ಒಮ್ಮೆ ಹರಿದುಹೋದ ನೀರು ಮತ್ತೆ ಮರಳಲಾರದು ಹಾಗೆಯೇ ಕಾಲವೂ. ಆದರೆ ಮಾನವನ ಭ್ರಾಂತಿಯಿಂದಾಗಿ ಮತ್ತೆ ಅದೇ ಸಮಯ ಬಂತು ಎಂದು ಹೇಳುವುದುಂಟು. ಮನಸ್ಸಿನ ಚೈತನ್ಯಕ್ಕೆ, ಹೊಸ ಕೆಲಸಗಳ ಪ್ರೋತ್ಸಾಹಕ್ಕೆ ಇಂತಹ ಭ್ರಾಂತಿ ಅಗತ್ಯವೂ ಕೂಡಾ. ಹೋಗಿದ್ದು ಮತ್ತೆ ಮರಳಲಾರದು. ಅದರಂತೆ ಆ ಕಾಲವೂ ಪುನಃ ಬಾರದು.

ಸುತ್ತುತ್ತಿರುವ ಭೂಮಿಯಿಂದಾಗಿ ಸೂರ್ಯೋದಯ, ಸೂರ್ಯಾಸ್ತವಾದಂತೆ ಕಂಡು ಬರುವುದರಿಂದ 24 ಗಂಟೆಯ ಅವಧಿಯನ್ನು ದಿನವೆಂದು ನಾವು ತೀರ್ಮಾನಿಸಿದ್ದೇವೆ. ಇಂತಹ 365 ದಿನಗಳಲ್ಲಿ ಉಂಟಾಗುವ ಪ್ರಕೃತಿಯಲ್ಲಿನ ಬದಲಾವಣೆ ಋತು, ಮಾಸ, ವರ್ಷಗಳನ್ನು ಸೃಷ್ಟಿಸಿದ್ದು, ಇದು ಮನಸ್ಸಿನ ಮೇಲೂ ಹೆಚ್ಚು ಪ್ರಭಾವ ಬೀರುತ್ತದೆ.
ಇದೀಗ ಅಂತಹ ಅದೆಷ್ಟೋ 365 ದಿನ, 6 ಋತು, 12 ಮಾಸಗಳು ಮುಗಿದು ವರ್ಷವೆನಿಸಿದ ಅಳತೆಗೋಲು ಕಳೆದು ಹೋಗಿ ಮತ್ತೆ ಅಂತಹುದೇ ಇನ್ನೊಂದು ವರ್ಷದ ಮೊದಲು ಆರಂಭವಾಗಿದೆ. ಯುಗಾದಿಯ ಸಂಭ್ರಮ ಎಲ್ಲೆಲ್ಲೂ ಕಂಡುಬಂದಿದೆ. ವಸಂತ ಋತು, ಚೈತ್ರಮಾಸ, ಶುಕ್ಲಪಕ್ಷದ ಮೊದಲ ದಿನವಾದ ಇಂದಿನಿಂದ ಬೆಚ್ಚಗಿನ ಪ್ರಕೃತಿಯಲ್ಲಿ ಹೊಚ್ಚ ಹೊಸ ಬೆಳವಣಿಗೆಗಳು ಕಂಡುಬರುತ್ತವೆ. ಹಲವು ವೃಕ್ಷಗಳು ತಮ್ಮ ಹಳೆ ಬೇರಿನಿಂದಲೇ ಹೊಸ ಚಿಗುರನ್ನು ಚಿಗುರಿಸಿಕೊಳ್ಳುತ್ತವೆ. ಕೋಗಿಲೆಯಂತಹ ಪಕ್ಷಿಗಳು ತಮ್ಮ ಕಂಠದಿಂದ ಮಧುರವಾದ ಗೀತೆಯನ್ನು ಹೊಮ್ಮಿಸುತ್ತವೆ. ಖಗ, ಮೃಗಗಳು ಸೂರ್ಯೋದಯದ ಕೆಂಪಿಗೆ, ಘಮಘಮಿಸುವ ಪುಷ್ಪಗಳ ಕಂಪಿಗೆ ತಮ್ಮಲ್ಲಿನ ಒನಪು ಹುರುಪುಗಳನ್ನು ಇಮ್ಮಡಿಗೊಳಿಸಿಕೊಳ್ಳುತ್ತವೆ.

ಇಂತಹ ಬದಲಾವಣೆ ಕೇವಲ ಪ್ರಕೃತಿಯ ಪಶು, ಪಕ್ಷಿಗಳಿಗೆ ಮಾತ್ರವಲ್ಲದೆ ಅಲ್ಪಜ್ಞನಾದ ಮಾನವನಲ್ಲಿಯೂ ಉಂಟಾಗುತ್ತದೆ. ಹಲವು ಒತ್ತಡದ ಕೆಲಸದಿಂದ ಜರ್ಝರಿತವಾದ ದೇಹಕ್ಕೆ, ಮನಸ್ಸಿಗೆ ಯುಗದ ಆದಿ ಎಂಬ ಕಾಲಘಟ್ಟ ಹೊಸ, ಹೊಸ ಆಲೋಚನೆಗಳಿಗೆ, ಚಿಂತನೆಗೆ ವೇದಿಕೆಯನ್ನೊದಗಿಸುತ್ತದೆ. ಅದನ್ನು ಮಾನವ ತನ್ನ ಬುದ್ಧಿ ಶಕ್ತಿಯಿಂದಾಗಿ ಸಮರ್ಪಕವಾಗಿ ಬಳಸಿಕೊಳ್ಳಬೇಕಷ್ಟೆ.
ವರ್ಷವಿಡೀ ಕಾಮ, ಕ್ರೋಧ, ಲೋಭ, ಮೋಹ, ಮದ ಮಾತ್ಸರ್ಯಗಳಿಂದ ತನ್ನ ಕಾರ್ಯಗಳನ್ನು ಮಾಡಿಕೊಂಡು ದುಃಖಿತನಾದವನಿಗೆ, ಪ್ರಾಮಾಣಿಕತೆಯ ಕೆಲಸ ಮಾಡುವಂತೆ ಪ್ರೇರೇಪಿಸುವುದು ಈ ಯುಗಾದಿ.

ಚಳಿಗಾಲ ಮುಗಿದು ಬೇಸಿಗೆಗೆ ಕಾಲಿಟ್ಟಿರುವ ಈ ಮುಹೂರ್ತದಲ್ಲಿ ದೇಹದ ಆಲಸ್ಯವನ್ನು ಓಡಿಸಿ ಮನಸ್ಸನ್ನು ಉಲ್ಲಾಸಗೊಳಿಸುವುದು ಯುಗಾದಿ. ಇದು ಮನಸ್ಸಿನಲ್ಲಿ ಸ್ವಾರ್ಥವನ್ನು ಬದಿಗೊತ್ತಿ ಹೊಸದಾದ ಉದಾತ್ತ ಆಲೋಚನೆಗಳು ಚಿಗುರೊಡೆಯಲು ಮೂಲ ಸೌಕರ್ಯ ಒದಗಿಸುತ್ತದೆ.
ಈ ಶುಭ ಯುಗಾದಿಯ ಹೊತ್ತಲ್ಲಿ ಪ್ರಕೃತಿಯೊಂದಿಗೆ ಸ್ಪಂದಿಸಿ ನೂತನ ಬಾಳಿಗೆ ಹೆಜ್ಜೆ ಇಡೋಣ...

*******



ನಮ್ಮ ಪತ್ರಿಕೆಯ ಯೂಟ್ಯೂಬ್
ಚಾನಲ್ ವೀಕ್ಷಿಸಲು
ಈ ಕ್ಯೂಆರ್ ಕೋಡ್ ಬಳಸಿ.

# ಚಂದವನ್ನು ಕಾಣುವ ಮನಸ್ಸಿರಬೇಕು

**ಅಕ್ಕಡಿ ಸಾಲು**
ಹಡವನಹಳ್ಳಿ ವೀರಣ್ಣಗೌಡ



ಅಣತ್ಯವಿದ್ದಷ್ಟನ್ನು ಗಳಿಸಿ ಬದುಕಬೇಕಾದ ಮನುಷ್ಯ ಸ್ವಾರ್ಥಿಯಾಗುತ್ತಿದ್ದಾನೆ. ತನಗಷ್ಟೆ ಅಲ್ಲ, ತನ್ನ ಮಕ್ಕಳಿಗಷ್ಟೆ ಅಲ್ಲ, ಮಮ್ಮೊಕ್ಕಳಿಗೂ, ಮರಿಮಕ್ಕಳಿಗೂ, ಸಾಧ್ಯವಾದರೆ ಅವರ ಮುಂದಿನ ತಲೆಮಾರುಗಳಿಗೂ ಕೂಡಿಡುವ ದುರಾಸೆಯ ಬೆನ್ನತ್ತಿ ದಿನದಿನಕ್ಕೂ ತನ್ನ ಖುಷಿಯ ಜೀವನವನ್ನು ನಾಶ ಮಾಡಿಕೊಳ್ಳುತ್ತಿದ್ದಾನೆ. ಎಲ್ಲದೂ ತನಗೆ ಬೇಕೆಂದು ಬಾಚಿ ಗುಡ್ಡೆಯಾಕಿಕೊಳ್ಳುವ ಮಟ್ಟಕ್ಕೆ ಆತುವರಿಯುವ ಮನಾಸಿಕತೆಗೆ ತಲುಪಿದ್ದಾನೆ. ಹಂಚಿತಿನ್ನುವ ಆನಂದ ಅವನಿಗೆ ಬೇಕಾಗಿಲ್ಲ. ಜೊತೆಗಿದ್ದವರನ್ನು ವಂಚಿಸಿ ಸಿಕ್ಕಿದ್ದನ್ನೆಲ್ಲ ಮುಕ್ಕಿ ತಾನಷ್ಟೆ ಅನುಭವಿಸುವ ಹಂತಕ್ಕೆ ಬಂದು ನಿಂತಿದ್ದಾನೆ. ಈಗವನು ಒಳ್ಳೆಯದು, ಕೆಟ್ಟದ್ದರ ಬಗ್ಗೆ ಯೋಚನೆಯನ್ನೂ ಮಾಡಲಾರ, ಅವನಿಗೆ ತಾನು ಮಾಡುವ ಹಾಗೂ ಮಡಿರುವ ಅನಾಚಾರಗಳ ಬಗ್ಗೆ ಪಾಪಪ್ರಜ್ಞೆಯೂ ಇಲ್ಲ, ಪಶ್ಚತಾಪವೂ ಇಲ್ಲ. ಏನೇ ತಪ್ಪುಗಳನ್ನು ಮಾಡಿದರು ಅದಕ್ಕೊಂದು ಸಮರ್ಥನೆ ಕೊಡುವ, ಆ ಮೂಲಕ ತನ್ನದೇನು ಇದರಲ್ಲಿ ಪಾತ್ರವಿಲ್ಲವೆಂದು ತಾನೆ ತನ್ನ ಬೆನ್ನುತಟ್ಟಿಕೊಳ್ಳುತ್ತ ಅದೇ ದಾರಿಯಲ್ಲಿ ನುಗ್ಗುವ ಪ್ರವೃತ್ತಿ ಬೆಳಸಿಕೊಂಡಿದ್ದಾನೆ.

ಸ್ಥಿತಿವಂತನಾಗಬೇಕೆಂಬ ಅಭಿಲಾಷೆ ತಪ್ಪಲ್ಲ. ಅದಕ್ಕಾಗಿ ಅಪಮಾರ್ಗದ ಯತ್ನಗಳು ಸಾದುವಲ್ಲ. ಆದರೆ ಅತಿ ಹೆಚ್ಚಿನವರು ಸಂಪತ್ತುಗಳಿಸಲು ಅಡ್ಡದಾರಿಗಳನ್ನೆ ತುಳಿದಿರುವುದು ವಿಪರ್ಯಾಸ. ಇವರ ಅನೈತಿಕ ನಡವಳಿಕೆಗಳು ಇದ್ದುದ್ದರಲ್ಲಿಯೇ ನೆಮ್ಮದಿಯಿಂದ ಜೀವನ ಸಾಗಿಸುತ್ತಿರುವ ಸಲ್ಪಸಂಖ್ಯಾತ ನಿಸ್ಪಹರಿಗೆ ಸಂಕಟಗಳನ್ನು ತಂದೊಡ್ಡುತ್ತಿವೆ.



ಸ್ವಹಿತಾಸಕ್ತಿಯ, ಸಮಯ ಸಾಧಕರ ನಡುವೆ ಸಜ್ಜನರ ಬದುಕು ಕಷ್ಟವಾಗುತ್ತಿದೆ. 'ಯಾರಂತೆ ಅಂದರೆ ಲೋಕಂತೆ'ಎನ್ನುವ ಕಾಲಘಟ್ಟಕ್ಕೆ ಬಂದು ನಿಂತಿರುವಾಗ ಯಾರು...ಯಾರಿಗೆ...ಏನನ್ನು ಹೇಳಲು ಸಾಧ್ಯ!?. ತಮ್ಮ ಕಣ್ಣಮುಂದೆಯೇ ಅನ್ಯಾಯ ನೆಡೆಯುತ್ತಿದ್ದರೂ ಕೇಳುವ ಬಾಯಿಗಳು ಮೌನವ್ರತ ಮಾಡುತ್ತಿವೆ. ಯಾರನ್ನಾದರು ಎದುರು ಹಾಕಿಕೊಂಡು ಬದುಕುತ್ತೇವೆಂಬ ಎದೆಗಾರಿಕೆ ನಿಶ್ಯಕ್ತವಾಗಿದೆ. ಪ್ರಶ್ನೆ ಮಾಡಿ ನೆಮ್ಮದಿಯಾಗಿ ಬದುಕುವ ವಾತಾವರಣ ಪ್ರಸ್ತುತ ದಿನಗಳಲ್ಲಿ ಇಲ್ಲವಾಗಿದೆ. ಸಮಾಜ ಸಂಕೀರ್ಣಮಯವಾದ ಪರಿಸ್ಥಿತಿಗೆ ಬಂದು ನಿಂತಿದೆ.

ಹೆಚ್ಚಿನವರು ಸ್ಪರ್ಧೆಗಿಳಿದವರಂತೆ ಗಳಿಸುವ, ಗಳಿಸಿದ್ದನ್ನು ದಕ್ಕಿಸಿಕೊಳ್ಳುವ ದಾಹದಲ್ಲಿದ್ದಾರೆ. ಸ್ವಾರ್ಥಸಾಧನೆಗಾಗಿ ನೂರು ವೇಷಗಳನ್ನಾಕಿ ನಟಿಸುತ್ತಿದ್ದಾರೆ. ಅರಿವಿಲ್ಲದೆ, ಗುರಿಯಿಲ್ಲದೆ ಸಿಕ್ಕಿದ್ದನ್ನೆಲ್ಲ ದೋಚಿಕೊಳ್ಳುವ ಹವಣಿಕೆಯಲ್ಲಿದ್ದಾರೆ. ಮೋಸಮಾಡಿ ಸಂಪಾದಿಸಿಕೊಳ್ಳುವ ಹಪಾಹಪಿತನ ಮಾನವೀಯ ಸಂಬಂಧಗಳಿಗೆ ಮಾರಕವಾಗುತ್ತಿದೆ. ಇಂತಹ ಲೋಭಿಗಳ ಪಡೆ ಸಮಾಜದ ಉದ್ದಗಲಕ್ಕೂ ಅಶಾಂತಿಯನ್ನು ಹರಡುತ್ತಿದೆ.

ಕಪಟತನದ ಮನಸ್ಸಿನವನು ಯಾರನ್ನು ಹೇಗೆ ಮೋಸದ ಬಲೆಯೊಳಗೆ ಹಾಕಿಕೊಳ್ಳ ಬೇಕು, ಯಾರ ಜೊತೆಗಿದ್ದರೆ ಏನು ಲಾಭವಾಗುತ್ತದೆ, ಯಾರನ್ನು ನಂಬಿಸಿದರೆ ಅವರಿಂದ ಏನನ್ನು ಲಪಟಾಯಿಸಬಹುದು ಇಂತಹ ಮನೆಯಾಳು ಯೋಚನೆಗಳಲ್ಲಿಯೇ ಸದಾ ಮುಳುಗೇಳುತ್ತಿರುತ್ತಾನೆ. ನಂಬಿಕೆ ದ್ರೋಹ ಮಾಡುವುದು ಇಂತಹವರಿಗೆ ಲೀಲಾಜಾಲ. ಇಂತಹ ಕುಕೃತ್ಯಗಳನ್ನು ಮಾಡುತ್ತ ಬದುಕುವ ನಯವಂಚಕರು ನಮ್ಮ ಸುತ್ತಲಿದ್ದರು ಅರಿವಿಗೆ ಬರುವುದರೊಳಗೆ ನಾವೂ ಮೋಸಹೋಗಿರುತ್ತೇವೆ.

ಶ್ರಮವಿಲ್ಲದೆ ಪಾಪದವರ ಮೇಲೆ ಕೈಯಿಟ್ಟು ಚಾಣಕ್ಷತನದಿಂದ ಶ್ರೀಮಂತನಾಗುವ ಅಲ್ಪಮತಿ ಮನುಷ್ಯ ಸಮಾಜದಲ್ಲಿ ಸಣ್ಣದೊಂದು ಸ್ಥಾನಮಾನ ಸಿಕ್ಕರೂ, ತನ್ನ ಅಹಂನ ಪ್ರದರ್ಶನಕ್ಕಿಳಿಯುತ್ತಾನೆ. ತಾನು ಯಾವುದೋ ಮಹಾನ್ ಸಾಧನೆ ಮಾಡಿದವನಂತೆ ಎದುರಿನವರನ್ನು ಕ್ಷುಲ್ಲಕವಾಗಿ ನೋಡುತ್ತ ಗಹಗಹಿಸಿ ನಗುತ್ತಾನೆ. ಮೆರೆಯುವ ಯಾವ ಅವಕಾಶವನ್ನು ಆತ ಬಿಡಲಾರ. ಹೀಗಿರುವಾಗ ದುರಹಂಕಾರದ ಮದ ತಲೆಗೇರಿಸಿಕೊಂಡ ಮನುಷ್ಯ ಹೇಗೆ ನೆಮ್ಮದಿಯಿಂದ ಬದುಕಿಯಾನು...?.

ಮಾನವ ಸಮಾಜವು ಅಷ್ಟೆ, ದುರುಳರು ನೆಡೆದು ಬರುತ್ತಿರುವ ವಾಮಮಾರ್ಗಗಳ ಬಗ್ಗೆ ತಲೆಕೆಡಿಸಿಕೊಳ್ಳುವುದಿಲ್ಲ. ಅವರು ಹೇಗಾದರು ಬಂದಿರಲಿ ತಲುಪಿರುವ ಸ್ಥಾನಮಾನಗಳ ಬಗ್ಗೆ ಹೆಮ್ಮೆಪಡುತ್ತದೆ.

ನಮ್ಮೊಳಗೆ ಮತ್ತೊಂದು ವರ್ಗವಿದೆ. ಊಟ, ಬಟ್ಟೆ, ಸೂರು, ಆರೋಗ್ಯ ಎಲ್ಲ ಉತ್ತಮವಾಗಿದ್ದರು ಏನು ಇಲ್ಲ ಎಂದು ಕೊರಗುವವರದು. ಇದು ಒಂದೆಒಂದು ಕ್ಷಣವೂ ಸಂತೋಷದಿಂದ ಇರಲಾರದು. ಬೇರೆಯವರ ಏಳಿಗೆ ನೋಡುತ್ತ ಕರುಬುವುದೆ ಈ ವರ್ಗದ ಚಾಳಿ. ಇರುವ ನೆಮ್ಮದಿಯನ್ನು ಕಳೆದುಕೊಂಡು ಸದಾ ಚಡಪಡಿಸುತ್ತ ತಾನು ಸುಖಿಯಾಗಿರದು ಸುತ್ತಲಿನವರನ್ನು ಇರಬಿಡದು.

ವೇಗವಾಗಿ ಓಡುತ್ತಿರುವ ಈ ತಂತ್ರಾಧಾರಿತ ಬದುಕಿನಲ್ಲಿ ಒಂದಲ್ಲ ಒಂದು ವಿಚಾರಕ್ಕೆ ಚಡಪಡಿಕೆ ಇರುವುದು ಸಾಮಾನ್ಯವೆ. ಆದರೆ ಅತಿಹೆಚ್ಚಿನವರು ಜೀವನಾವಶ್ಯಕಗಳ ಕೊರತೆ ಇಲ್ಲದಿದ್ದರೂ ಸದಾ ಅಸಮಾಧಾನಿಗಳೆ. ಇವರದಂತೂ ಯಾವತ್ತಿಗೂ ಬಗೆಯರಿಯಲಾರದ ವ್ಯರ್ಥ ಪ್ರಲಾಪ. ಈ ವರ್ಗದವರಲ್ಲಿ ಒಬ್ಬೊಬ್ಬರದು ಒಂದೊಂದು ಕಥೆ, ವ್ಯಥೆ. ಇವರೆಲ್ಲರೂ ಏಕಮುಖವಲ್ಲದ ವಿಭಿನ್ನ ವಿಷಯಗಳಿಗಾಗಿ ಕೊರಗುತ್ತಿದ್ದರೂ ಇವರ ಸಾಮಾನ್ಯ ಗುರಿ ಮಾತ್ರ ಒಂದೆಯಾಗಿರುತ್ತದೆ. ಅದೆ ಹೇಗಾದರು ಆಗಲಿ ಶ್ರೀಮಂತನಾಗಬೇಕು. ಶ್ರೀಮಂತ ಎನ್ನುವ ಪದ ನಿಮ್ಮ ಉಚ್ಚಾರಣೆಗೆ ಸ್ವಲ್ಪ ಕಿರಿಕಿರಿಯಾದೀತು ಆದರೂ ಇಲ್ಲಿ ಯಥಾವತ್ತು ಆ ಪದವನ್ನೆ ಬಳಸುವುದು ಅನಿವಾರ್ಯವಾಗಿದೆ. ಏಕೆಂದರೆ ಈಗಾಗಲೆ ಸ್ಥಿತಿವಂತರಾಗಿರುವ ಇವರ ಕಡುಬಯಕೆಗೆ ಮತ್ತೆ ಅದೆ ಪದ ಬಳಸಿದರೆ ಅಷ್ಟೊಂದು ಪರಿಣಾಮ ಕಾಣುವುದಿಲ್ಲ. ಹಾಗಾಗಿ ನೆಮ್ಮದಿಯನ್ನು ಬಲಿಕೊಟ್ಟು ಅಡ್ಡದಾರಿಯಿಡಿದು ಒಡನಾಡಿಗಳನ್ನೆ ಯಾಮಾರಿಸಿ, ಕಸಿದುಕೊಳ್ಳುವ ಹುಚ್ಚಿಡಿಸಿಕೊಂಡು ಓಡುತ್ತಿರವ ಸಮುದಾಯಕ್ಕೆ ಶ್ರೀಮಂತ ಪದವೇ ಸೂಕ್ತ. ಏಕೆಂದರೆ ಈ ದುಷ್ಟ ವರ್ಗಕ್ಕೆ ಶ್ರೀಮಂತಿಕೆಯ ವ್ಯಾಖ್ಯಾನ ತಿಳಿದಿಲ್ಲ.

ಪ್ರಕೃತಿಯ ನಡುವೆ ಮುಕ್ತವಾಗಿ ಹಾಗೂ ಸಹಜವಾಗಿ ಬದುಕುವುದೆ

ಶ್ರೀಮಂತಿಕೆ. ಗಿರಿ, ಕಂದರ, ಪೊದೆ,ಮರಗಳ ಅಡ್ಡಗಲಕ್ಕೂ ನಡೆದಾಡುತ್ತ, ಹಳ್ಳ, ಕೊಳ್ಳ, ನದಿಗಳ ನೀರುಂಡು ನಿರುಮ್ಮಳವಾಗಿ ಬದುಕುವ ಪ್ರಾಣಿ, ಪಕ್ಷಿಗಳ ಮುಂದೆ ಮನುಷ್ಯ ಸ್ವಾರ್ಥಿ. ಕೊಟ್ಯಂತರ ಪ್ರಬೇಧಗಳ ಜೀವರಾಶಿಗಳ ನಡುವೆ ಇವನು ಮಾತ್ರ ದುರಾಸೆಯ ದಾಸ. ಇವನು ಯಾವುದರಲ್ಲಿಯೂ ತೃಪ್ತಿಕಾಣದ ಕ್ಷುಲ್ಲಕ ಜೀವಿ.

ಪ್ರಸ್ತುತ ಈ ಕಾಲಘಟ್ಟದಲ್ಲಿ ವಾಸ್ತವಿಕವಾಗಿ ಮನುಷ್ಯ ತಾಂತ್ರಿಕ ಅಪ್ಪುಗೆಯೊಳಗೆ ಯಾಂತ್ರಿಕ ಬದುಕನ್ನು ಸಾಗಿಸುತ್ತಿದ್ದಾನೆ. ಕಂಡದ್ದೆಲ್ಲ ನನ್ನದಾಗಬೇಕೆಂಬ ದುರ್ಬುದ್ಧಿಯಿಂದ ಜೀವನ ಎಂಬುದನ್ನು ಅವನೇ ಕೆರೆದು ಗಾಯ ಮಾಡಿಕೊಂಡಿದ್ದಾನೆ. ಅವು ಕೀವು,ರಕ್ತಗಳನ್ನು ಸುರಿಸಿ ನೋಯುತ್ತಿರುವಾಗ ಕೊರಗಿ ಕಣ್ಣೀರಾಗುತ್ತಿದ್ದಾನೆ. ಅಡ್ಡದಾರಿಯಿಡಿದು ದಾರಿತಪ್ಪಿ ಕೊನೆಯಲ್ಲಿ ಪರರನ್ನು ದೂಷಿಸುತ್ತ ತಾನೆ ಮಾಡಿಕೊಂಡ ಸ್ವಯಂಕೃತ ಎಡವಟ್ಟುಗಳನ್ನು ಸಮರ್ಥಿಸಿಕೊಳ್ಳುವ ಜಾಣತನ ಅವನದು. ಸಂಬಂಧಗಳನ್ನು ದೂರವಿಡುತ್ತಿದ್ದಾನೆ ಅಥವಾ ಅವುಗಳನ್ನು ಲಾಭಕ್ಕಾಗಿ ಬಳಸಿಕೊಳ್ಳುತ್ತಿದ್ದಾನೆ. ಹಣವಂತನಾಗುವ, ಆಸ್ತಿವಂತನಾಗುವ ಹಂಬಲದಲ್ಲಿ ಹೆತ್ತವರನ್ನು ದೂರ ತಳ್ಳುತ್ತಿದ್ದಾನೆ. ಜೊತೆಗುಟ್ಟಿದವರ ಸಂಬಂಧಗಳಂತು ಕೊಡುಕೊಳ್ಳುವ ವ್ಯವಹಾರಕ್ಕೆ ಸೀಮಿತಗೊಳಿಸಿಕೊಳ್ಳುತ್ತಿದ್ದಾನೆ. ಇದೆಲ್ಲದರ ಪರಿಣಾಮ ವೈವಿಧ್ಯಮಯ ಜೀವಪರಿಸರದಲ್ಲಿ ಪ್ರಬುದ್ಧ ಜೀವಿಯಾದ ಮನುಷ್ಯನಿಗೆ ಈಗ ಬದುಕಿದೆ ಆದರೆ ಭಾವನೆಗಳ ಬಂಧವಿಲ್ಲ, ಜೀವನವಿದೆ ಆದರೆ ಜೀವಂತಿಕೆ ಇಲ್ಲ.

ಪ್ರೀತಿ, ಸಹಬಾಳ್ವೆ, ಅನ್ಯೋನ್ಯತೆ, ಭ್ರಾತೃತ್ವ, ಸಹಿಷ್ಣುತೆ ಈ ಭಾವನೆಗಳೆಲ್ಲ ಶ್ರೀಮಂತರಾಗಬೇಕೆಂಬ ಹುಚ್ಚಿನಲ್ಲಿ ಕೊಚ್ಚಿಹೋಗಿವೆ. ಅಪರೂಪದ ಜೀವಿಯಾಗಿ ಸಜ್ಜನಿಕೆಯಿಂದ ಸಾರ್ಥಕ ಬದುಕನ್ನು ಅನುಭವಿಸಬೇಕಾದ ಮನುಷ್ಯ ನೆಮ್ಮದಿಯ ಬದುಕಿಗೆ ಅಗತ್ಯವಲ್ಲದ ನಡವಳಿಕೆಗಳ ಹುಚ್ಚು ಬರಿಸಿಕೊಂಡಿದ್ದಾನೆ. ಈ ಹುಚ್ಚು 'ಹುಚ್ಚು ಬಿಡುವವರೆಗೂ ಮದುವೆಯಾಗಲ್ಲ, ಮದುವೆಯಾಗೊವರೆಗೂ ಹುಚ್ಚು ಹೋಗಲ್ಲ' ಎನ್ನುವಂತಾಗಿದೆ.

**ಬದುಕು ಜಟಕಾ ಬಂಡಿ ವಿಧಿ ಅದರ ಸಾಹೇಬ**
**ಕುದುರೆ ನೀನ್ ಅವನು ಪೇಳ್ದಂತೆ ಪಯಣಿಗರು**
**ಮದುವೆಗೊ ಮಸಣಕೊ ಹೋಗೆಂದಕಡೆಗೋಡು**
**ಪದ ಕುಸಿಯೆ ನೆಲವಿಹುದು ಮಂಕುತಿಮ್ಮ.**

ಡಿ.ವಿ.ಜಿ.ಯವರ ಈ ಕಗ್ಗದ ಸಾಲು ಎಷ್ಟೊಂದು ಪ್ರಸ್ತುತವಲ್ಲವೇ?. ಹಾಗೆಂದು ನಾನು ಆಧ್ಯಾತ್ಮದ ಮಾತುಗಳನ್ನಾಡುತ್ತಿಲ್ಲ. ಗಳಿಸುವ ಆತುರದಲ್ಲಿ ಬದುಕನ್ನೇ ಯಾತನೆಗೊಡ್ಡುತ್ತಿರುವವರು ಇಂತಹ ಅನುಭವದ ಮಾತಿನಿಂದಾದರೂ ಎಚ್ಚರವಾಗಬೇಕೆಂಬ ಆಶಯದಿಂದಷ್ಟೆ.ಜೀವನಾನಂದ ಅನುಭವಿಸುವುದಕ್ಕಾಗಿ, ಖುಷಿಯಿಂದ ಬದುಕುವುದಕ್ಕಾಗಿ ಮನುಷ್ಯ ತನ್ನ ಮಿತಿಯನ್ನು ಅರಿಯಬೇಕೆಂಬ ಹಂಬಲ ಕಗ್ಗದ ಸಾಲುಗಳಲ್ಲಿದೆ. ಅದನ್ನು ಅರ್ಥೈಸಿಕೊಳ್ಳಬೇಕಷ್ಟೆ.

ಸದಾ ಸಂಕಟ ತೋಡಿಕೊಳ್ಳುವ ಮತ್ತೊಂದು ವರ್ಗದ ಜನರಿದ್ದಾರೆ. ಇವರದು ಮತ್ತೊಂದು ರೀತಿಯ ನರಳಿಕೆ. ಒಳ್ಳೆಯವರಿಗಿದು ಕಾಲವಲ್ಲ ಎಂದು ಎದುರಿಗೆಸಿಕ್ಕವರಿಗೆಲ್ಲ ತಮ್ಮ ಕಷ್ಟಗಳನ್ನು ಹೇಳಿಕೊಳ್ಳುತ್ತ ಹಲುಬುತ್ತಿರುತ್ತಾರೆ. ಇದರಲ್ಲಿ ಕಳ್ಳರು, ಸುಳ್ಳರು, ಮೋಸಗಾರರು, ಕಪಟಿಗಳು ಹೀಗೆ ಎಲ್ಲಾ ನಮೂನೆಯವರು ಸೇರಿದ್ದಾರೆ. ಹಾಗಾದರೆ ಕೆಟ್ಟವರು ಯಾರು...........!?. ಹುಡುಕುವುದೀಗ ಬಲು ಕಷ್ಟ, ಸಮಯವೂ ನಷ್ಟ.ನಾವಷ್ಟೆ ಒಳ್ಳೆಯವರು ಎಂದು ಹೇಳಿಕೊಳ್ಳುವವರು ಕೂಡ ಶಾಂತವಾಗಿ, ತಿಳಿಯಾಗಿರುವ ನೀರಿಗೆ ಕಲ್ಲು ಹಾಕಿರುವುದನ್ನು ಮುಚ್ಚಿಡುತ್ತಾರೆ. ಹಾಗೆಂದು ಇವರೆಲ್ಲರೂ ಸುಳ್ಳನ್ನೆ ಹೇಳುತ್ತಿದ್ದಾರೆ ಎನ್ನುವುದು ನನ್ನ ಅಭಿಮತವಲ್ಲ ಇದರಲ್ಲಿ ನಿಜ ಹೇಳುವವರ ಪ್ರಮಾಣ ತೀರಾ ಕಡಿಮೆ.

ಇರುವುದನ್ನ ಇದ್ದಂತೆ ನೋಡುವ, ಅನುಭವಿಸುವ, ಅದರಷ್ಟಕ್ಕದನ್ನು ಬಿಡುವ ಮನಸ್ಥಿತಿ ಅತಿ ಹೆಚ್ಚಿನ ಜನರಿಗಿಲ್ಲ. ಮಣ್ಣಾಗಲಿ, ಕಲ್ಲಾಗಲಿ, ಮರಗಿಡಗಳಾಗಲಿ, ನೀರಾಗಲಿ, ನೆಲವಾಗಲಿ, ಸ್ವಂತದ್ದಾಗಲಿ, ಪರರದ್ದಾಗಲಿ ಒಟ್ಟಾರೆ ಅದರಲ್ಲಿ ಮೂಗುತೂರಿಸಬೇಕು. ಲಾಭಪಡೆಯಬೇಕು ಅಥವಾ ವಿಚಲಿತಗೊಳಿಸಿದ್ದಕ್ಕಾದರೂ ಖುಷಿಪಡಬೇಕು. ಇದು ಸತ್ಯವಾದರೂ ಪ್ರತಿಯೊಬ್ಬರದು ಒಂದೇ ಧ್ವನಿ. 'ನಮ್ಮದು ಸಭ್ಯ ಮನೆತನ, ನಾವು ಅಂತವರಲ್ಲ' ಹಾಗಿದ್ದರೆ ಎಲ್ಲಾ ಒಳ್ಳೆಯವರೆ ಆಗಿರುವಾಗ ಈ ರೀತಿ ವಿಕೃತ ಆನಂದ ಪಡುವವರು ಯಾರು?. ಇದು ಮನೆಮನೆಯ, ವ್ಯಕ್ತಿವ್ಯಕ್ತಿಯ ಕತೆ. ಹೀಗಿದ್ದರೆ ಕೆಟ್ಟವರು ಎಲ್ಲಿದ್ದಾರು....?.

ನನ್ನೊಬ್ಬನನ್ನು ಬಿಟ್ಟು ಉಳಿದವರೆಲ್ಲ ಕೆಟ್ಟವರೆಂದೆ ಭಾವಿಸುತ್ತೇವೆ, ಭ್ರಮಿಸುತ್ತೇವೆ. ವಾಸ್ತವದಲ್ಲಿ ತನ್ನಂತೆ ಪರರ ಬಗೆಯುವುದಿಲ್ಲ. ನಮ್ಮ ದೃಷ್ಟಿಕೋನಕ್ಕೆ ತಕ್ಕಂತೆ ಪ್ರತಿಯೊಂದು ಗೋಚರಿಸುತ್ತದೆ ಎನ್ನುವ ಅರಿವು ನಮ್ಮೊಳಗೆ ಬತ್ತಿಹೋಗಿದೆ. ಕಣ್ಣತುಂಬ ಹಳದಿಯೇ ತುಂಬಿರುವಾಗ ಲೋಕವು ಹಾಗೆಯೇ ಕಾಣುವುದು ಸಹಜವಲ್ಲವೆ. ಒಮ್ಮೆ ಇದಕ್ಕೆ ತದ್ವಿರುದ್ಧವಾಗಿ ಯೋಚಿಸಿ ನೋಡಿ ಎಲ್ಲವೂ,ಎಲ್ಲರೂ ಚಂದಚಂದ. ಈ ಚಂದವನ್ನು ಕಾಣುವ ಕಣ್ಣಿರಬೇಕು,ಎಲ್ಲಕ್ಕಿಂತ ಮುಖ್ಯವಾಗಿ ಮನಸ್ಸಿರಬೇಕಷ್ಟೆ. ■

## ಲೇಖನಗಳಿಗೆ ಆಹ್ವಾನ

**ನಮ್ಮ ಸುದ್ದಿಸಂಗಾತಿ ಧ್ವನಿ ಪತ್ರಿಕೆಯಲ್ಲಿ ಪ್ರಕಟಿಸಲು ಓದುಗರು ಮತ್ತು ಲೇಖಕರಿಂದ ಬರಹಗಳನ್ನು ಆಹ್ವಾನಿಸುತ್ತಿದ್ದೇವೆ.**

* ಅಪ್ರಕಟಿತ ಬರಹಗಳನ್ನು ಕಳುಹಿಸಬೇಕು.
* ಲೇಖನಗಳು ಕನ್ನಡ ನುಡಿ ಅಥವಾ ಯೂನಿಕೋಡ್‌ನಲ್ಲಿರಲಿ.
* ಪ್ರಚಲಿತ ವಿದ್ಯಾಮಾನಗಳು, ಸಣ್ಣಕಥೆ,ಕವನ, ಹಾಸ್ಯಲೇಖನ, ಪ್ರವಾಸಿತಾಣಗಳು ಮುಂತಾದವುಗಳ ಬಗ್ಗೆ ಲೇಖನಗಳು ಇರಲಿ.
* ಲೇಖನಗಳು 500 ರಿಂದ 600 ಶಬ್ದಗಳ ಮಿತಿಯಲ್ಲಿರಲಿ.
* ಲೇಖಕರ ಫೋಟೋ ಮತ್ತು ಮೊಬೈಲ್ ನಂಬರ್ ಕಡ್ಡಾಯ.
* ಬರಹಗಳಿಗೆ ಸೂಕ್ತವಾದ ಚಿತ್ರಗಳಿದ್ದರೆ ಒಳ್ಳೆಯದು.
* ಬರಹಗಳು ಸ್ವೀಕೃತಿಯಾದ ಬಗ್ಗೆ ಮಾಹಿತಿ ನೀಡಲಾಗುವುದು.
* ನಿಮ್ಮ ಬರಹಗಳನ್ನು ನಮ್ಮ ಇಮೇಲ್ ವಿಳಾಸಕ್ಕೆ ಕಳುಹಿಸಿ.
* ಲೇಖನಗಳ ಬಗ್ಗೆ ಸಂಪಾದಕರ ತೀರ್ಮಾನವೇ ಅಂತಿಮವಾಗಿರುತ್ತದೆ.

**suddisangathi@gmail.com**




# ಹೆಣ್ಣಿಗೂ ಗೌರವ ಇರಲಿ...?



**ಮಾನಸ ಕೆ.ಕೆ.**
**ಕವಯತ್ರಿ, ಲೇಖಕಿ**

ಹೆಣ್ಣು ಮನೆಗೆ ಕಣ್ಣು ,ಮನೆಯ ಮಹಾಲಕ್ಷ್ಮೀ, ಎಂದೆಲ್ಲಾ ಹೇಳುವರು, ಹೆಣ್ಣಿನ ಜೀವನದ ಸಮಸ್ಯೆಯ ನಡುವೆ ಹರಿದಾಡುತ್ತಿರುವುದು ಹೆಣ್ಣಿನ ಜೀವದ, ಜೀವನದ ನರಳಾಟದ ಬದುಕು. ಹೊಸ ಜೀವನ ಕಾಣುವ ಮನಸ್ಸಿಗೆ ಕನುಸುಗಳ ತೋರಣ ಕಟ್ಟಿಕೊಂಡು ಬಾಳ್ವೆಯ ಸಂತಸಕೆ ಹಬ್ಬದ ಸಂಭ್ರಮ ಎಲ್ಲೂ ಕೆಲವರಿಗೆ ಮಾತ್ರ.. ಹಾಗಂದ ಮಾತ್ರಕ್ಕೆ ಹೆಣ್ಣು ಕುಲದ ರಕ್ಷಣೆ ಆಗಿಲ್ಲ ಅಂತಾನೂ ಅಲ್ಲ ಇತ್ತೀಚೆಗೆ ಬಹಳ ಸುಧಾರಣೆ ಖಂಡಿತ ಆಗಿದೆ.. ಆದರೆ, ಹೆಣ್ಣಿನ ಶೋಷಣೆ ಮಾತ್ರ ಅಂದಿಗೂ ಇಂದಿಗೂ ಇನ್ನು ನಿಲ್ಲದ ಹಾದಿಯಲ್ಲಿದೆ.

ಅನಾದಿ ಕಾಲದಲ್ಲಿ ಹೆಣ್ಣನ್ನು ಬಂಧನದೊಳಗಿರಿಸಿದ್ದರು ಹೆಣ್ಣು ಹೊರ ಜಗತ್ತಿಗೆ ಬಂದರೆ ಅವಳಿಗೆ ಅಪವಾದಗಳು ಕಟ್ಟಿಟ್ಟ ಬುತ್ತಿ ಎಂಬ ಮೂಢನಂಬಿಕೆಇತ್ತು ಕಾಲನಂತರ ಮಾಗಿದ ಮನಸ್ಸುಗಳಾಗಿ ಪರಿವರ್ತನೆಯಾಗಿ ಸಮಾಜದಲ್ಲಿ ದುಡಿಯುವ ವರ್ಗಕ್ಕೂ ಸೇರ್ಪಡೆ ಹೊಂದಿ ಬದುಕನ್ನೇ ಸುಧಾರಿಸುವಲ್ಲಿ ಹೆಣ್ಣಿನ ಪಾತ್ರ ಮಹತ್ತರವಾದದ್ದು. ಹಿಂದೆ ಮಡಿ,ಮೈಲಿಗೆ ಸಂಪ್ರದಾಯದ. ಅಡಿಯಲ್ಲೇ ಬೆಳೆದರೆ ಅವಳಿಗೆ ಗೌರವ ಅನ್ನುತ್ತಿದ್ದರು ಆದರೆ, ಈಗ ಹಾಗಿಲ್ಲ ಎಲ್ಲಾ ಕ್ಷೇತ್ರದಲ್ಲಿ ಮಹಿಳೆಯರು ದುಡಿಯುತ್ತಿದ್ದಾರೆ ಇದ್ಯಾವಂತರಾಗಿ ಸಂಸಾರದ ಭಾರ ಹೊರತ್ತಿದ್ದಾರೆ . ಜವಾಬ್ದಾರಿಯುತವಾಗಿ ಬಾಳುತ್ತಿದ್ದಾರೆ .

ಕಾಲ ಸರಿದಂತೆ ಹೆಣ್ಣು ಮಕ್ಕಳು ಜವಾಬ್ದಾರಿಯನ್ನು ಹೊರಲು ಆರಂಭಿಸಿದ್ದಾರೆ ಗಂಡಿಗೆ ಸರಿ ಸಮನಾಗಿ ದುಡಿಯುವ ಚೈತನ್ಯ ,ಆತ್ಮಸ್ಥೈರ್ಯದಿಂದ ಇಡೀ ಕುಟುಂಬವನ್ನು ನಿಯಂತ್ರಿಸುವ ಶಕ್ತಿ ಅವಳಿಗೆ ವೃದ್ಧಿಸಿದೆ ಅವಳು ಅಸಾಮಾನ್ಯಳಲ್ಲ ಎಂದು ಸಾಭೀತು ಪಡಿಸಲು ನಾವು ಇತಿಹಾಸ ಪುಟಗಳಲ್ಲಿ ಬರುವಂತಹ ಸಾಕಷ್ಟು ಹೆಣ್ಣು ಮಕ್ಕಳ ಸಾಧನೆಯೇ ಸಾಕ್ಷಿಯಾಗಿದೆ.ಒಬ್ಬಳು ಹೆಣ್ಣು ಮಗಳು ಮನಸ್ಸು ಮಾಡಿದರೆ ಸಮಾಜವಾಗಲಿ,ಸಂಸಾರವಾಗಿ



ಉದ್ಧಾರವಾಗದ ಇತಿಹಾಸವೇ ಇಲ್ಲ ಗಂಡಿನ ಧೋರಣೆಯನ್ನು ಸಹಿಸಿಕೊಂಡರು ನಾವು ಬದುಕಿ ಬಾಳುತ್ತೇವೆ ಎಂಬ ಛಲ ಅವಳನ್ನು ಎತ್ತರಕ್ಕೆ ನಿಲ್ಲಿಸುತ್ತದೆ. ಹತ್ತಾರು ಜೀವಗಳ ರಕ್ಷಣೆಯಾಗುತ್ತದೆ ಕುಟುಂಬದ ಏಳ್ಗೆಯೂ ಸಾಗುತ್ತದೆ ದುಡಿದು ಮೈ ಮನ ಬಗ್ಗಿಸಿ ಮಕ್ಕಳ ಏಳ್ಗೆಯತ್ತಲೂ ದುಡಿಯುವವರು ನಮ್ಮ ನಾರಿಯರು .ಅದುವೆ ನಾರೀ ಶಕ್ತಿ... ಅಬ್ಬಾ! ಹೆಣ್ಣು



ಎನ್ದರೆ ಇಷ್ಟೊಂದು ಶಕ್ತಿ ನಾ ಕೇಳಬಹುದು ಹೌದು ಇದು ಎಲ್ಲರ ಜೀವನದಲ್ಲಿ ಅನುಭವಕ್ಕೆ ಬಂದಿರುತ್ತದೆ.. ಒಮ್ಮೆ ಅಮ್ಮನ ನೆನೆಯೋಣ... ಬದುಕಿನುದ್ದಕ್ಕೂ ಜೊತೆ ಇರುವ ಹೆಂಡತಿಯನ್ನು ನೆನೆಯೋಣ ನಮ್ಮ ಕನ್ನಡತಿಯರ ಹೃದಯವ ಹೊಕ್ಕೋಣ,ತಂಗಿಯ ಪ್ರೀತಿಯನ್ನು ನೋಡೋಣ, ಅಮ್ಮನ ಸ್ಥಾನದಲಿರೋ ಅಕ್ಕನನ್ನು ಸ್ಮರಿಸೋಣ,ಎಲ್ಲಾ ಸ್ವಚ್ಛ ಮನಸುಗಳು ಸದಾ ಒಳಿತನ್ನೇ ಬಯಸುವುದು..

ಯತ್ರ ನಾರ್ಯಾಸ್ತು ಪೂಜ್ಯತೇ ರಮಂತೆ ತತ್ರ ದೇವತಾ.. ಅನ್ನುವ ಹಾಗೆ ಹೆಣ್ಣನ್ನು ಎಲ್ಲಿ ಪೂಜಿಸುವರೋ, ಗೌರವಿಸುವರೋ ಅಲ್ಲಿ ದೇವತೆಗಳು ಇರುವರಂತೆ ಇದು ಕೂಡ ನಮ್ಮ ಶಾಸ್ತ್ರ ಪುರಾಣದಲ್ಲಿ ಅನಾದಿ ಕಾಲದಿಂದಲೂ ಎಲ್ಲರಿಗೂ ತಿಳಿದಿರುತ್ತದೆ.ಪ್ರತಿಯೊಬ್ಬ ಹೆಣ್ಣು ಬಯಸುವುದು ಗೌರವ ಪ್ರೀತಿಯಷ್ಟೇ. ದಿನ ನಿತ್ಯದ ಜೀವನದಲ್ಲಿ ಹೆಣ್ಣು ಗಂಡು ಸರಿ ಸಮವೇ? ಅನ್ನುವ ಯಕ್ಷ ಪ್ರಶ್ನೆ ಏಳದೆ ಇರದು. ಕಾಲ ಬದಲಾಗಿದೆಯೋ? ಮನುಷ್ಯರು ಬದಲಾಗಿದ್ದರೋ ಎನ್ನುವ ಗೊಂದಲದಲ್ಲಿ ಅದೆಷ್ಟೋ ಜನರ ಮನಸ್ಸು ಇರುತ್ತದೆ. ಇತ್ತೀಚಿಗೆ ಹೆಣ್ಣುಮಕ್ಕಳು ಧೈರ್ಯದಿಂದ ಇರುತ್ತಾರೆ.

ಅವರಿಗೆ ಜೀವನ ಸ್ಫೂರ್ತಿಯನ್ನು ಹುಟ್ಟಿನಿಂದಲೇ ನೀಡಬೇಕು ಹೆಣ್ಣು ಗಂಡು ಭೇಧ ವಿಲ್ಲದೆ ಬೆಳೆಸುವ ಕಾಯಕ ಕುಟುಂಬದಿಂದ ಆಗಬೇಕಿದೆ.. ಮನೆಯಿಂದಲೇ ಇವೆಲ್ಲಾ ಕಲಿಸಬೇಕು ನಮ್ಮ ಮಕ್ಕಳು ಸಮಾಜಕ್ಕೆ ಉತ್ತಮ ಪ್ರಜೆಯಾಗಿ ಬಾಳುವುದಕ್ಕೂ ಹೆಣ್ಣು ಮಕ್ಕಳೆ ಸಾಕ್ಷಿ ಎಂದು ಹೇಳುವೆ ಗಂಡು ಮಕ್ಕಳು ಹೆಣ್ಣು ಮಕ್ಕಳನ್ನು ಗೌರವಿಸುವುದನ್ನು ಕಲಿಸಬೇಕು ಅದುವೇ ಸಂಸ್ಕಾರ ಒಟ್ಟಾರೆ ಈ ಸಮಾಜದಲ್ಲಿ ಹೆಣ್ಣಿಗೆ ಗೌರವ, ಸ್ಥಾನಮಾನ, ನೀಡಿದರೆ ಯಶಸ್ಸಿನ ಬದುಕು ಅಸಾಧ್ಯವಲ್ಲ ಅರ್ಥೈಸಿಕೊಂಡು ಪ್ರೀತಿ, ಸಂಯಮ, ಸಹನೆ ತಾಳ್ಮೆ ಹೊಂದಿ . ಜೊತೆಯಾಗಿ ಬಾಳಿದರೆ ಸುಂದರ ಬದುಕಿಗೆ ಸಾಕ್ಷಿ ಹೆಣ್ಣು.. ಗೃಹಿಣಿಯಾಗಿ ಕಾರ್ಯ ನಿರ್ವಹಿಸಿ ಅಬಲೆಯಲ್ಲದೆ ಸಬಲೆಯಾಗಿ ಬಾಳುವವಳು ಹೆಣ್ಣು.

ಹೆಣ್ಣಿಗೆ ನಿತ್ಯ ಗೌರವ ನೀಡುವುದರ ಮೂಲಕ ಸುಖ ಸಂಸಾರ ಉತ್ತಮ ಸಂಭಂದವು ವೃದ್ಧಿಸುತ್ತದೆ. ಹೆಣ್ಣೆಂದರೆ ಶಕ್ತಿ, ಯುಕ್ತಿ, ಈ ಜಗದಲ್ಲಿ ಮರೆಯದಿರಿ ಹೆಣ್ಣನೆಂದು ಜರಿಯದಿರಿ.

## ಹನಿ–ಧ್ವನಿ

ಅಮೃತದಂತಹ ಹಣ್ಣು
ಕೊಡುವ ಗಿಡ–ಮರ
ಹಾದಿಬೀದಿಯ ತುಂಬ
ನಮ್ಮದೆ ಈ ಫಲವೆಂದು
ಡಂಗೂರ ಹೊಡೆಯದ
ನಿಸ್ವಾರ್ಥಿಗಳು.
– ವಿಜಿ




# ಬೆವರ ಬಸಿವವಳ ದಿನಚರಿ

ಶ್ರೀಮತಿ.ವಿವೇಕ ಕೆ.ವಿ.
ಲೇಖಕಿ, ತುಮಕೂರು



ಕನಸಲ್ಲೂ ಕಾಡುವ ಕೆಲಸಗಳು. ಸೂರ್ಯನೊಂದಿಗೆ ನಿರಂತರ ಪೈಪೋಟಿಗೆ ಬಿದ್ದವಳಂತೆ ಏಳುತ್ತಾಳೆ. ಕಸ ಗುಡಿಸುತ್ತಾಳೆ ಪದ ಗುನುಗುತ್ತಾ ರಂಗವಲ್ಲಿ ಇಕ್ಕುತ್ತಾಳೆ. ನಿರಂತರ ನೋವಿನೊಂದಿಗೆ ಜೊತೆಯಾಗುವವಳು ನೀನೊಬ್ಬಳೇ ಎಂದು ರಂಗವಲ್ಲಿಯನ್ನು ಮಾತನಾಡಿಸುತ್ತಾಳೆ. ಇಟ್ಟ ರಂಗವಲ್ಲಿಯ ಅಂದ ನೋಡಿ ನಸುನಗುತ್ತಾಳೆ. ಹಿತ್ತಲ ಗಿಡಗಳನ್ನು ನೋಡುತ್ತಾ ನೀರೆರೆಯುತ್ತಾಳೆ."ಯಾಕೆ ಹೀಗೆ ಸೊರಗಿದ್ದೀಯ ನಮ್ಮವ್ವ" ಎನ್ನುತ್ತಾ ಬುಡ ಕುಕ್ಕಿ, ಸೆತ್ತೆ ಕೀಳುತ್ತಾಳೆ.ಹೂಗಳ ಚಂದಕ್ಕೆ ಮನಸೋಲುತ್ತಾಳೆ. ಮೌನದ ಮಾತಿಗೆ ದನಿಯಾಗುತ್ತಾಳೆ. ಪರಿವೆಯೇ ಇಲ್ಲದೆ ಪರಿಮಳ ಹರಡುವ ಪರಿಗೆ ಬೆರಗಾಗುತ್ತಾಳೆ.ಎಲ್ಲವನ್ನು ಮರೆಸುವ ಜಾದೂಗಾರರು ನೀವು ಎನ್ನುತ್ತಾ ಕೊಟ್ಟಿಗೆಗೆ  ಓಡುತ್ತಾಳೆ. ದನ ಕರುಗಳ ಮೈಸವರಿ, ಸಗಣಿ ಬಳಿದು, ಗಂಜಲ ಬಾಚಿ, ಹಾಲು ಕರೆಯುತ್ತಾಳೆ. ಕರೆದ ಹಾಲ ಕಣ್ಣಿಗೊತ್ತಿ ಸಂತತಿ ನೂರಾಗಲೆಂದು ಹರಸುತ್ತಾಳೆ.ಕರುವನ್ನು ನೋಡಿ ಮರುಕ ಪಡುತ್ತಾಳೆ. "ಬೈಕೋ ಬೇಡ ಮಗ ನಿನ್ ಹಾಲ್ನೆಲ್ಲ ಕಿತ್ಕೊಂಡೆ ಅಂತ". ಎಂದು ಕರವನ್ನು ಮಾತನಾಡಿಸುತ್ತಲೇ ಅಡಿಗೆ ಮನೆಗೆ ಓಡುತ್ತಾಳೆ. ಒಲೆಯ ಮೇಲೆ ಕಾಫಿಗೆ ಇಡುತ್ತಾ...ಮಕ್ಕಳನ್ನು ಏಳಿಸಬೇಕು, ಈ ದಿನ ಶಾಲೆಗೆ ಇವನಿಗೆ ಯಾವ ಬಟ್ಟೆ...? ಅವಳು ಪರೀಕ್ಷೆ ಅಂತಿದ್ಲು. ಇವನಿಗೆ ಹೇಳಬೇಕು ಡ್ಯೆರಿಗೆ ಹಾಲು ಹಾಕಿ, ವಾರದ ಹಣ ಇಸ್ಕೊಂಡ್ ಬರಕ್ಕೆ. ಇವನು ಈ ತಿಂಗಳೇ ಪರೀಕ್ಷೆ ಪೀಸು ಕಟ್ಟಬೇಕು ಅಂತಿದ್ದ. ಅವಳು ಮುಂದಿನ ವರ್ಷ ಕಾಲೇಜು ಸೇರುತ್ತಾಳೆ. ಚೆನ್ನಾಗಿ ಓದಿಸಬೇಕು. ನನ್ನಂತಾಗಬಾರದು. ಅವಳ ಚಪ್ಪಲಿ ಹರಿದಿವೆ. ಇವನಿಗೆ ಎರಡು ಚಡ್ಡಿ ತರಬೇಕು. ಸೋಸಿದ ಕಾಫಿಯನ್ನು ವಯಸ್ಸಾದ ಅತ್ತೆ ಮಾವಂದಿರಿಗೆ ಕೊಡುತ್ತಾಳೆ.ಬೀಡಿ ಸೇದುತ್ತಾ ಕುಳಿತಿದ್ದ ಗಂಡನಿಗೆ ಕೊಡುತ್ತಾಳೆ." ಇವತ್ತಾರ ಕೂಲಿಯಾ ನೆಟ್ಟಗೆ ಮನೆಗೆ ತಕಂಬಾ. ಓದೊ ಮಕ್ಕಳು ಖರ್ಚು ಜಾಸ್ತಿ ನಾನು ಎಷ್ಟಂತ ನಿಭಾಯಿಸನ"... ಎನ್ನುತ್ತಾ ಮಕ್ಕಳನ್ನು ಏಳಿಸುವಳು. ಅವರಿಗೊಂದೊಂದು ಕೆಲಸ ಹಚ್ಚಿ, ಕಾಯಿ ಒಡೆದು ಚಟ್ನಿ ಅರೆಯುವಳು. ಹಿಟ್ಟು ಕಲೆಸಿ ರೊಟ್ಟಿ ಬಡಿಯುವಳು. ಮಕ್ಕಳಿಗೆ ಬೆನ್ನುಜ್ಜಿ ನೀರುಯ್ಯುವಳು. ಮಗಳಿಗೆ ಬೈತಲೆ ತೆಗೆದು ಜಡೆ ಕಟ್ಟುವಳು.ಶಾಲೆಗೆ ತಯಾರಾಗಲು ಹೇಳುತ್ತಲೇ ಪಾತ್ರೆ ತೊಳೆಯುವಳು. ಕಸ ಗುಡಿಸುವಳು. ಗೂಡಿನಲ್ಲಿನ ದೇವರಿಗೊಂದು ದೀಪ ಹಚ್ಚಿ ಹೂ ಮುಡಿಸುವಳು. ಮಂತ್ರಗಳ ಹಂಗು ತೊರೆದು ಸುಮ್ಮನೇ ನಮಿಸುವಳು. ಎಲ್ಲರಿಗೂ ತಿಂಡಿ ಕೊಟ್ಟು ತಾನು ತಿನ್ನುವಳು. ತಿನ್ನುತ್ತಲೇ ಎಲ್ಲರಿಗೂ ದಿನದ ಕೆಲಸ ಹಂಚುವಳು. ಅವರ ಜವಾಬ್ದಾರಿ ನೆನಪಿಸುವಳು. ಶಾಲೆಗೆ ತಯಾರಾಗಿ ನಿಂತ ಮಕ್ಕಳನ್ನು ನೋಡಿ ಕಣ್ತುಂಬಿಕೊಳ್ಳುವಳು. ದೃಷ್ಟಿ ತೆಗೆದು ನೆಟ್ಟಿಗೆ ಮುರಿಯುವಳು.ದನಕರುಗಳೊಟ್ಟಿಗೆ ಹೊಲದ ಕಡೆಗೆ ಓಡುವಳು. ಅವುಗಳ ಮೇವು ನೀರು ನೋಡುವಳು. ಹೊಲವೆಲ್ಲ ಸುತ್ತಿ ನೀರು ಗೊಬ್ಬರದ ನಿಗಾ ಮಾಡುವಳು. "ಕೈ ಬಿಡಬೇಡ ಕಣವ್ವ "ಎನ್ನುತ್ತಾ ಭೂಮಿ ತಾಯಿಗೆ ನಮಿಸುವಳು.ಕಾಳು, ಕಡ್ಡಿ ,ಸೊಪ್ಪು, ಸೌದೆಗಳನ್ನು ಒಟ್ಟು ಮಾಡುವಳು. ಹೊರೆ ಹೊತ್ತು, ಮನೆ ತಲುಪಿ ಸಾರು ಕುದಿಸಿ, ಮುದ್ದೆ ಕಟ್ಟುವಳು. ಗಂಡನಿಗೆ ಬುತ್ತಿ ಹೊತ್ತು ಮರಳಿ ಹೊಲ ಸೇರುವಳು.ನಮ್ಮ ಬವಣೆಗೆ ನಿಮ್ಮನ್ನು ಮಾರಬೇಕು ಎನ್ನುತ್ತಾ ಮೊಗ್ಗು ಬಿಡಿಸುವಳು. ಈ ತಿಂಗಳ ಆದಾಯ ಖರ್ಚುಗಳನ್ನು ಮನದಲ್ಲೇ ಲೆಕ್ಕ ಹಾಕುವಳು. ಆದಾಯಕ್ಕಿಂತ ಖರ್ಚೆ ಹೆಚ್ಚು. ಲೆಕ್ಕ ಹಾಕಿ ಸೋಲುವಳು. ಸಂತೆಗೆ ದುಡ್ಡು ಹೊಂಚಬೇಕು. ಇವನನ್ನು ಕಳಿಸಿದರೆ ಅರ್ಧ ದುಡ್ಡು ಕುಡಿದೇ ಹಾಳು ಮಾಡುತ್ತಾನೆ. ಹುಲ್ಲು ಹೊತ್ತು, ಮೊಗ್ಗಿನ ಚೀಲ ಹಿಡಿದು ದನಕರ ಹೊಡೆದುಕೊಂಡು ಮನೆ ಸೇರುವಳು. ಬೆಳಗಿನ ತಿಂಡಿಗೇನು...? ಸಾರಿಗೇನು...? ಮಂಕರಿ ತುಂಬಿದ ಕೊಳೆ ಬಟ್ಟೆಗಳು ಅಣಕಿಸಿದವು. ಮೊಗ್ಗು ಕಟ್ಟುತ್ತಲೆ ಯೋಚಿಸುವಳು. ಕಟ್ಟಿದ ಮೊಗ್ಗನ್ನು ಆಚೆ ಮನೆಯ ಅಕ್ಕನಿಗೆ ತಲುಪಿಸುವಳು. ಅವಳು ಕೊಟ್ಟ ತಂಬಿಟ್ಟಿನ ಉಂಡೆಗಳನ್ನು ಸೆರೆಗಿನಲಿ ಗಂಟಿಕ್ಕಿ ತಂದು ಮಕ್ಕಳಿಗೆ ನೀಡುವಳು. ಸಾರಿಗೆ ಎಂದು ಬಂದ ಈಚೆ ಮನೆಯ ಅಕ್ಕನಿಗೆ ಸಾರಿನೊಂದಿಗೆ ತಾನೇ ಬೆಳೆದ ಸೊಪ್ಪನ್ನೂ ನೀಡಿ ಹಂಚಿ ಉಣ್ಣುವ ತತ್ವ ಸಾರುವಳು..ಶಾಲೆಯಿಂದ ಬಂದ ಮಕ್ಕಳ ಮಾತಿಗೆ ಕಿವಿಯಾಗುವಳು. ದನಿಯಾಗುವಳು. ತಲೆಗೆ ಎಣ್ಣೆ ತಟ್ಟುತ್ತಾ ತಿಳಿ ಹೇಳುವಳು.ತನಗೆ ತಿಳಿಯದ ಓದನ್ನು ಓದಲು ತಿಳಿಸುವಳು. ಚಂದಮಾಮನನ್ನು ತೋರಿಸಿ, ತುತ್ತ ನಿಕ್ಕಿ ಹಸಿವ ತಣಿಸುವಳು. ಲಾಲಿ ಹಾಡಿ ತಟ್ಟಿ ಮಲಗಿಸಿ ನಿದ್ರಾ ದೇವಿಯ ಮಡಿಲ ಸೇರಿಸುವಳು.ಚಂದ್ರ ನಕ್ಷತ್ರಗಳನ್ನು ನೋಡುತ್ತಾ ಕಾಲದ ಮಿತಿಗೆ ಒಳಪಟ್ಟು, ಕಾಲವನ್ನೂ ದಾಟುವಳು. ಮಗಳಿಗೊಂದು ಒಳ್ಳೆಯ ಹುಡುಗ ಮಗನಿಗೊಂದು ಒಳ್ಳೆಯ ಹುಡುಗಿ...  ಕನಸು ಕಾಣುವಳು. ಮಕ್ಕಳು ಮೊಮ್ಮಕ್ಕಳ ಬೀಜ ಬಿತ್ತುವಳು.ಬಂದಂತೆ ಬದುಕ ಸ್ವೀಕರಿಸುವ ಮರದಂತವಳು. "ಸಂವಿಧಾನ" ಪದವೇ ಕೇಳದೆ ಬದುಕುವ ವಿಧಾನ ತಿಳಿದವಳು. ಇವಳು ಲೋಕವನ್ನು ಬಲ್ಲವಳಲ್ಲ ಆದರೆ ಗಂಡ ಮನೆ ಮಕ್ಕಳಲ್ಲೆ ಲೋಕವನ್ನು ಕಂಡವಳು.ದೇಶ ವಿದೇಶಗಳನ್ನು ಸುತ್ತಿದವಳಲ್ಲ ಹೊಲ ಮನೆಯ ದಾರಿ ಸವೆಸಿದವಳು. ಖಗ್ಗ ದರ್ಶನ ಗಳನ್ನು ಓದಿದವಳಲ್ಲ ಜೀವನ ದರ್ಶನ ಪಡೆದವಳು.ಇವಳು ತರಬೇತಿ ಪಡೆಯದ ಕಲಾವಿದೆ. ಗಣಿತವನ್ನೇ ತಿಳಿಯದ ಅರ್ಥಶಾಸ್ತ್ರಜ್ಞೆ. ಏನನ್ನು ಶೋಧಿಸದ ಗೃಹ ವಿಜ್ಞಾನಿ. ಪಲಾಯನದ ಅರಿವೇ ಇಲ್ಲದ ಕಾಯಕ ಜೀವಿ. ತತ್ವ ಸಿದ್ಧಾಂತ ಮತ ಪಂಥಗಳ ತಿಳಿವು ಮೀರಿದ ತತ್ವಜ್ಞಾನಿ. ಹಿಮಾಲಯದ ಹೆಸರನ್ನೇ ಕೇಳದ ನಿಜ ತಪಸ್ವಿನಿ....!ಬಿಟ್ಟೆನೆಂದರೂ ಬಿಡದ ಈ ಜಗದ ಮಾಯೆ...! ನಮ್ಮೆಲ್ಲರ ಅಮ್ಮ .ನಿನಗಿದೋ ನಮ್ಮ ನಮನ.



"ಸುದ್ದಿಸಂಗಾತಿ ಧ್ವನಿ" ಮಾಸ ಪತ್ರಿಕೆಯಲ್ಲಿ ಪ್ರಕಟಿಸಲು
ಲೇಖನ,ಕಥೆ,ಕವನ,ಲಲಿತ ಪ್ರಬಂಧ, ಹಾಸ್ಯ ಸಿನಿಮಾ, ವಿವಿಧ ಕ್ಷೇತ್ರಗಳ
ಸಾಧಕರ ಪರಿಚಯ, ಆರೋಗ್ಯ,ಫ್ಯಾಷನ್ ಮುಂತಾದ ವಿಷಯಗಳ
ಬಗ್ಗೆ ಬರೆದಿರುವ ಲೇಖನಗಳನ್ನು ನಮ್ಮ ಇ ಮೇಲ್ ವಿಳಾಸಕ್ಕೆ ತಮ್ಮ
ಭಾವಚಿತ್ರ ಮತ್ತು ದೂರವಾಣಿ ಸಂಖ್ಯೆಯೊಂದಿಗೆ ಕಳಿಸಬಹುದು.
- ಸಂಪಾದಕ
suddisangathi@gmail.com

ಕಂಡಿದ್ದು-ಕಾಡಿದ್ದು



ಮಂಜುನಾಥ್ ದಂಡಿನಶಿವರ

# ತಬಲಾ ನಾದದ ಹಿಂದಿನ ಮೌನ ಸಾಧಕ 'ಬಸವರಾಜು'

ಸಂಗೀತ ವೇದಿಕೆಯ ಮೇಲೆ ತಬಲಾದ ಮೃದುವಾದ ನಾದ ಮೊಳಗಿದಾಗ, ನಾವು ಸಾಮಾನ್ಯವಾಗಿ ಕಲಾವಿದನ ಕೈಚಳಕವನ್ನು ಮೆಚ್ಚುತ್ತೇವೆ. ಆದರೆ ಆ ನಾದಕ್ಕೆ ಜೀವ ತುಂಬಿದ ಮೌನ ಶಿಲ್ಪಿಯನ್ನು ನಾವು ಎಷ್ಟು ಬಾರಿ ನೆನಪಿಸುತ್ತೇವೆ? ನಮ್ಮ ನಡುವೆಯೇ ಇದ್ದು, ನಾದವನ್ನು ರೂಪಿಸುವ ಸಾಧಕರಲ್ಲಿ ಒಬ್ಬರು ಬಸವರಾಜು.

ಕರ್ನಾಟಕದ ಸಾಂಪ್ರದಾಯಿಕ ಸಂಗೀತ ಲೋಕದಲ್ಲಿ ತಬಲೆಯ ನಾದವು ಒಂದು ಜೀವಂತ ಶಕ್ತಿಯಂತೆ ಕೇಳಿಸುತ್ತದೆ. ಆ ನಾದದ ಹಿಂದೆ ಕಾಣದ ಕೈಗಳ ಶ್ರಮ, ಕೌಶಲ್ಯ ಮತ್ತು ಧ್ಯಾನ ಇರುತ್ತದೆ. ಅಂತಹ ಮೌನಶಿಲ್ಪಿಗಳಲ್ಲಿ ಒಬ್ಬರು ತಬಲಾ ತಯಾರಕ ಬಸವರಾಜು.

ನಾನು ನನ್ನಣ್ಣ ದಿವಾಕರ್ (ಅವರೂ ತಬಲಾ ಕಲಾವಿದರು) ಅವರ ಜೊತೆ ತಬಲಾ ರಿಪೇರಿಗೆಂದು ಆಗಾಗ ಇವರ ಅಂಗಡಿಗೆ ಭೇಟಿ ನೀಡುತ್ತಿದ್ದೆ, ಮಾತನಾಡುತ್ತಿದ್ದೆ. ಅವರ ಕಸುಬಿನ ಬಗ್ಗೆ ಕೇಳಿ ತಿಳಿದಾಗ ನಿಜಕ್ಕೂ ಸಂತಸವಾಯಿತು. ಹಾಗಾಗಿ ಎಲೆಮರೆ ಕಾಯಿಯಂತೆ ತಮ್ಮ ಕಾಯಕದಲ್ಲಿ ಯಶಸ್ಸು ಸಾಧಿಸಿರುವ ಬಸವರಾಜು ಅವರ ಬಗ್ಗೆ ಈ ಕಿರು ಬರಹ ಬರೆಯುತ್ತಿದ್ದೇನೆ.

ಬಸವರಾಜು ಅವರ ಜೀವನವೇ ತಬಲಾದ ಸುತ್ತ ಹೆಣೆದ ಕಥೆ. ಬಾಲ್ಯದಲ್ಲೇ ತಂದೆಯವರಿಂದ ಕಲಿತ ಈ ವೃತ್ತಿ ಅವರಿಗೆ ಕೇವಲ ಉದ್ಯೋಗವಲ್ಲ, ಒಂದು ಆಧ್ಯಾತ್ಮಿಕ ಸಾಧನೆ. ಮರದ ತುಂಡು, ಚರ್ಮದ ತುತ್ತು, ಕಪ್ಪು ಶಾಯಿಯ ಮಿಶ್ರಣ–ಇವುಗಳೆಲ್ಲ ಅವರ ಕೈಯಲ್ಲಿ ನಾದಮಯವಾಗುತ್ತವೆ.

ಮೂಲತಃ ವಿಜಯಪುರ ತಾಲ್ಲೂಕಿನ ಕಲ್ಲೂರಿನಿಂದ ಬೆಂಗಳೂರಿಗೆ ಬಂದು ನೆಲೆಸಿರುವ ಬಸವರಾಜು ಅವರು ನಗರದ ಬಸವೇಶ್ವರನಗರದ ಸಮೀಪದ ಶಿವನಹಳ್ಳಿಯಲ್ಲಿ ಪುಟ್ಟ ಅಂಗಡಿಯನ್ನು ಇಟ್ಟುಕೊಂಡು ಚರ್ಮ ವಾದ್ಯಗಳಿಗೆ ಜೀವ ನೀಡುವ ಕಾಯಕದಲ್ಲಿ ತೊಡಗಿದ್ದಾರೆ. ಅವರ ಅಕ್ಷರ ಮ್ಯೂಸಿಕ್ ಅಂಗಡಿಗೆ ಭೇಟಿ ನೀಡಿದರೆ ನಿಜಕ್ಕೂ ಸಂತಸವಾಗುತ್ತದೆ.



ಏಕೆಂದರೆ ಅದು ಚರ್ಮ ವಾದ್ಯಗಳು ತಯಾರಾಗುವ ಸ್ಥಳವಾಗಿದೆ. ಅಂಗಡಿ ತುಂಬೆಲ್ಲಾ ತಬಲಾ, ಮೃದಂಗ, ವೀಣೆ, ಮುಂತಾದ ವಾದ್ಯಗಳ ಸಂಗ್ರಹವೇ ಆಗಿದೆ. ಜೊತೆಗೆ ಅಲ್ಲಿ ಗಾನಯೋಗಿ ಪಂಚಾಕ್ಷರಿ ಗವಾಯಿಯವರ ಭಾವಚಿತ್ರವನ್ನೂ ಬಸವರಾಜು ಇಟ್ಟು ಪೂಜಿಸುತ್ತಿದ್ದಾರೆ.

ಇವರು ಕೇವಲ ತಬಲಾ ತಯಾರಕರು ಅಲ್ಲ; ಪರಂಪರೆಯ ನಾದವನ್ನು ಹೊತ್ತೊಯ್ಯುವ ಸಂಸ್ಕೃತಿ ಸಂರಕ್ಷಕರು. ಮರದ ತುಂಡನ್ನು ನಾದಮಯವಾದ ವಾದ್ಯವಾಗಿ ರೂಪಿಸುವುದು ಕೇವಲ ಯಾಂತ್ರಿಕ ಕೌಶಲ್ಯವಲ್ಲ, ಅದು ಶ್ರದ್ಧೆ, ಸಹನೆ ಮತ್ತು ಆಧ್ಯಾತ್ಮಿಕ ಮನೋಭಾವದ ಸಂಯೋಜನೆ.

ಅಲೆಮಾರಿ ಕುಟುಂಬದಿಂದ ಬಂದಿರುವ ಇವರಿಗೆ ತಮ್ಮ ವಂಶಪಾರಂಪರ್ಯವಾಗಿ ಈ ಕಲೆ ಕರಗತವಾಗಿ ಬಂದಿದೆ. ಬಸವರಾಜು ಅವರ ಉಳಿದ ಆರು ಜನ ಸಹೋದರರೂ ಸಹ ಇದೇ ವೃತ್ತಿಯನ್ನು ಮುಂದುರೆಸಿಕೊಂಡು ಬರುತ್ತಿದ್ದಾರೆ. ಇವರ ಅಣ್ಣ ಮಂಜುನಾಥ್ ಪ್ರಸಿದ್ಧ ತಬಲಾ ವಾದಕ ಜಾಕೀರ್ ಹುಸೇನ್ ಅವರಿಗೆ ತಬಲಾ ತಯಾರು ಮಾಡಿಕೊಡುತ್ತಿದ್ದದ್ದು ವಿಶೇಷ ಸಂಗತಿ.

ಇನ್ನು ಬಸವರಾಜು ಸಹ ಈ ಕೆಲಸದಲ್ಲಿ ಬಹಳ ನಿಪುಣತೆ ಹೊಂದಿದ್ದು, ಹಲವಾರು ಪ್ರಸಿದ್ಧ ತಬಲಾವಾದಕರಿಗೆ ತಬಲಾ



ತಯಾರು ಮಾಡಿಕೊಟ್ಟಿದ್ದಾರೆ. ಖ್ಯಾತ ತಬಲಾವಾದಕರಾದ ಅನಿಂದ ಚಟರ್ಜಿ, ಡಿ.ಚಂದ್ರಜಿತ್ ಮುಂತಾದರಿಗೆ ಇವರೇ ತಬಲಾ ತಯಾರು ಮಾಡಿಕೊಡೋದು.

ಮತ್ತೊಂದು ಕುತೂಹಲ ಸಂಗತಿಯೆಂದರೆ ಬಸವರಾಜು ಅವರಿಗೆ ಒಂದು ಕಣ್ಣು ಕಾಣುವುದಿಲ್ಲ. ಅದು ಚಿಕ್ಕ ವಯಸ್ಸಿನಲ್ಲಿಯೇ ಹೋಗಿದೆಯಂತೆ. ಒಂದು ಕಣ್ಣಿಲ್ಲದಿದ್ದರೇನು ? ಅವರಿಗೆ ವಾದ್ಯಗಳ ಬಗ್ಗೆ ಇರುವ ಒಳಗಣ್ಣು ನಿಜಕ್ಕೂ ಅದ್ಭುತವೇ ಸರಿ.

ವಿಕಲಚೇತನತೆಯನ್ನು ಮೆಟ್ಟಿ ನಿಂತು, ಸರ್ಕಾರದ ಪಿಂಚಣಿಯನ್ನು ಕಾಯದೇ, ತನ್ನ ಕಾಯಕದಲ್ಲಿ ಗಟ್ಟಿಯಾಗಿ ತೊಡಗಿರುವ ಇವರ ಕಾಯಕ್ಷಮತೆಗೆ ಒಂದು ಸಲಾಮ್ ಹೇಳಲೇಬೇಕು. ಬಸವರಾಜು ಅವರಿಗೆ ಈ ಕೆಲಸದಲ್ಲಿ ಇವರ ಪತ್ನಿಯೂ ಸಹ ಸಾಥ್ ನೀಡುತ್ತಾ ಬಂದಿದ್ದಾರೆ.

ಚರ್ಮ ವಾದ್ಯಗಳ ತಯಾರಿಕೆ ಎಂದರೆ ಪ್ರಕೃತಿಯೊಂದಿಗೆ ಸಂವಾದ. ಗಟ್ಟಿಯಾದ ಮರದ ಆಯ್ಕೆ, ಸರಿಯಾದ ಚರ್ಮದ ಸಿದ್ಧತೆ, ಮಧ್ಯಭಾಗದ ಕಪ್ಪು ಶಾಯಿಯ ನಿಖರ ಮಿಶ್ರಣ–ಇವೆಲ್ಲವೂ ನಾದದ ಗುಣಮಟ್ಟವನ್ನು ನಿರ್ಧರಿಸುತ್ತವೆ. ಒಂದು ಸಣ್ಣ ತಪ್ಪು ಕೂಡ ಸ್ವರದ ಸೌಂದರ್ಯವನ್ನು ಹಾಳು ಮಾಡಬಹುದು. ಆದ್ದರಿಂದ ಪ್ರತಿಯೊಂದು ಹಂತವೂ

ನಿಮ್ಮ ಲೇಖನ ಮತ್ತು ಬರಹಗಳನ್ನು ನಮಗೆ ಕಳುಹಿಸಿ... suddisangathi@gmail.com



ಧ್ಯಾನದಂತೆ ನಡೆಸಬೇಕಾಗುತ್ತದೆ. ತಬಲೆಯ ಮರದ ಬೊಕ್ಕಸವನ್ನು ತಿಂಗಳುಗಳ ಕಾಲ ಒಣಗಿಸಿ, ಒಳಹೊತ್ತನ್ನು ಸಮತಟ್ಟಾಗಿ ತೆಗೆಯುವುದು–ಇದು ಸಹನೆಯ ಪರೀಕ್ಷೆ. ಚರ್ಮವನ್ನು ನಿಖರವಾಗಿ ಕಟ್ಟಿ, ಸ್ವರಕ್ಕೆ ಹೊಂದಿಸುವ ಪ್ರಕ್ರಿಯೆ–ಇದು ಕಲೆ ಮತ್ತು ವಿಜ್ಞಾನದ ಸಂಗಮ. ತಯಾರಕನ ಕಿವಿ ಸೂಕ್ಷ್ಮವಾಗಿರಬೇಕು; ನಾದದ ಏರುಪೇರುಗಳನ್ನು ಅರಿಯಬಲ್ಲದಾಗಿರಬೇಕು.

ಇಂದಿನ ಯುಗದಲ್ಲಿ ಕಾರ್ಖಾನೆ ಉತ್ಪನ್ನಗಳ ವೇಗ ಹೆಚ್ಚಾಗಿದೆ. ಆದರೆ ಕೈಕಲೆಯ ಸ್ಪರ್ಶದಿಂದ ಮೂಡುವ ನಾದಕ್ಕೆ ಪರ್ಯಾಯವೇ ಇಲ್ಲ. ಕಡಿಮೆ ಬೆಲೆಯ ಯಂತ್ರ ನಿರ್ಮಿತ ವಾದ್ಯಗಳು ಮಾರುಕಟ್ಟೆಯನ್ನು ಆವರಿಸುತ್ತಿರುವಾಗ, ಬಸವರಾಜು ಅವರಂತಹ ಶಿಲ್ಪಿಗಳು ತಮ್ಮ ನಿಷ್ಠೆಯನ್ನು ಕಾಪಾಡಿಕೊಂಡಿದ್ದಾರೆ. ಆದಾಯ ಕಡಿಮೆ ಇದ್ದರೂ, ಗುಣಮಟ್ಟದ ಮೇಲೆ ತಗ್ಗುವ ಪ್ರಶ್ನೆಯೇ ಇಲ್ಲವೆಂದು ಅವರು ದೃಢವಾಗಿ ಹೇಳುತ್ತಾರೆ.

ಸಂಗೀತವನ್ನು ಮೆಚ್ಚುವ ಸಮಾಜವಾಗಿ, ನಾವು ವಾದಕರನ್ನು ಮಾತ್ರವಲ್ಲ, ವಾದ್ಯಗಳನ್ನು ರೂಪಿಸುವ ಕೈಗಳನ್ನೂ ಗೌರವಿಸಬೇಕು. ಚರ್ಮ ವಾದ್ಯಗಳ ತಯಾರಿಕೆ ಕೇವಲ ವೃತ್ತಿಯಲ್ಲ; ಅದು ಪರಂಪರೆಯ ರಕ್ಷಣೆ. ಈ ಕಲೆ ಉಳಿಯಬೇಕಾದರೆ, ಶಿಲ್ಪಿಗಳಿಗೆ ಪ್ರೋತ್ಸಾಹ, ತರಬೇತಿ ಕೇಂದ್ರಗಳು ಮತ್ತು ಸಮರ್ಪಕ ಮಾರುಕಟ್ಟೆ ಸೌಲಭ್ಯಗಳು ಅಗತ್ಯವಾಗಿವೆ. ಅಲ್ಲವೇ?

ತಬಲಾ ನಾದ ಕೇಳಿದಾಗ, ಆ ಧ್ವನಿಯ ಹಿಂದೆ ಇರುವ ಮೌನ ಸಾಧಕನನ್ನು ನೆನಪಿಸಿಕೊಳ್ಳುವ ಸಂಸ್ಕೃತಿ ನಮ್ಮದಾಗಲಿ. ನಾದವನ್ನು ರೂಪಿಸುವ ಕೈಗಳನ್ನು ಗೌರವಿಸುವುದು, ನಮ್ಮ ಸಂಗೀತ ಪರಂಪರೆಯನ್ನು ಗೌರವಿಸುವುದೇ ಆಗುತ್ತದೆ.

ಬಸವರಾಜು ಹೇಳುವಂತೆ, ಈ ವೃತ್ತಿ ಶ್ರಮಪೂರ್ಣ. ದಿನವಿಡೀ ಚರ್ಮದ ಕೆಲಸ, ಮರದ ಧೂಳು, ನಾದದ ಸರಿಹೊಂದಿಸುವಿಕೆ–ಇವುಗಳೆಲ್ಲ ದೇಹವನ್ನು ಸುಸ್ತು ಮಾಡುತ್ತವೆ. ಆದರೆ ಒಂದು ಕಲಾವಿದ ತಬಲವನ್ನು ತಟ್ಟಿದಾಗ ಮೂಡುವ ಮಧುರನಾದವೇ ಅವರಿಗೆ ಬಹುಮಾನವಿದ್ದಂತೆ. ಅಲ್ಲವೇ? ಎನ್ನುತ್ತಾರೆ.

ಇಂದಿನ ಯಾಂತ್ರಿಕ ಯುಗದಲ್ಲಿ ಕೈಕಲೆ ಹಿಂಜರಿಯುತ್ತಿರುವ ಸಂದರ್ಭದಲ್ಲಿ, ಬಸವರಾಜು ಅವರಂತಹ ಶಿಲ್ಪಿಗಳು ನಮ್ಮ ಪರಂಪರೆಯ ಜೀವನಾಡಿ. ಅವರ ಕೈಗಳಲ್ಲಿ ತಬಲೆಯ ನಾದ ಮಾತ್ರವಲ್ಲ, ಸಂಸ್ಕೃತಿಯ ಧ್ವನಿಯೂ ಜೀವಂತವಾಗಿರುತ್ತದೆ. ಈ ನುಡಿಚಿತ್ರ ಕೇವಲ ಒಬ್ಬ ತಯಾರಕನ ಕಥೆಯಲ್ಲ; ಅದು ನಾದವನ್ನು ರೂಪಿಸುವ ಮೌನ ಸಾಧಕರಿಗೆ ಸಲ್ಲುವ ಗೌರವ.

**ಚರ್ಮ ವಾದ್ಯಗಳ ತಯಾರಿಕೆ ಹೇಗೆ?**

ಚರ್ಮ ವಾದ್ಯಗಳು ತಬಲಾ, ಮೃದಂಗ, ಡೊಳ್ಳು ಮುಂತಾದವು ಕೆಲವು ವಸ್ತುಗಳಿಂದ ನಿರ್ಮಾಣವಾಗುತ್ತವೆ. ಅವುಗಳ ತಯಾರಿಕೆಯಲ್ಲಿ ಹಲವಾರು ಹಂತಗಳಿವೆ:



1.ತಬಲಾಗೆ ಸಾಮಾನ್ಯವಾಗಿ ಜಾಕ್‌ಫ್ರೂಟ್ ಅಥವಾ ಶೀಷಮ್ ಮರ ಬಳಸಲಾಗುತ್ತದೆ. ಮರ ಗಟ್ಟಿಯಾಗಿರಬೇಕು, ಒಳಗಿನಿಂದ ಬಿರುಕು ಇಲ್ಲದಿರಬೇಕು. ಮರವನ್ನು ತಿಂಗಳುಗಳ ಕಾಲ ಒಣಗಿಸಿ ನಂತರವೇ ಆಕಾರ ಕೊಡಲಾಗುತ್ತದೆ.

2.ಮೇಕೆ ಅಥವಾ ಹಸುವಿನ ಚರ್ಮವನ್ನು ಆಯ್ದು, ಅದನ್ನು ಚೆನ್ನಾಗಿ ಶುದ್ಧಗೊಳಿಸಿ, ಸೂರ್ಯನ ಬೆಳಕಿನಲ್ಲಿ ಒಣಗಿಸಲಾಗುತ್ತದೆ. ಸರಿಯಾದ ದಪ್ಪ, ಲವಚಿಕತೆ–ಇವು ನಾದದ ಗುಣಮಟ್ಟವನ್ನು ನಿರ್ಧರಿಸುತ್ತವೆ.


3. ತಬಲಾದ ಮಧ್ಯದಲ್ಲಿರುವ ಕಪ್ಪು ವೃತ್ತವೇ ಅದರ ಆತ್ಮ. ಅಕ್ಕಿ ಹಿಟ್ಟು, ಲೋಹದ ಪುಡಿ ಮತ್ತು ಕೆಲವು ಗುಪ್ತ ಮಿಶ್ರಣಗಳಿಂದ ತಯಾರಾಗುವ ಈ ಭಾಗವು ನಾದದ ಸ್ಪಷ್ಟತೆ ಮತ್ತು ಗಂಭೀರತೆಯನ್ನು ನೀಡುತ್ತದೆ.

4. ಚರ್ಮವನ್ನು ಮರದ ಭಾಗಕ್ಕೆ ನಿಖರವಾಗಿ ಕಟ್ಟಿ, ಹಗ್ಗಗಳ ಮೂಲಕ ಬಿಗಿಗೊಳಿಸಲಾಗುತ್ತದೆ. ನಂತರ ಕೈಯಿಂದ ಹೊಡೆದು ನಾದವನ್ನು ಪರೀಕ್ಷಿಸಿ, ಸರಿಯಾದ ಸ್ವರಕ್ಕೆ ಹೊಂದಿಸಲಾಗುತ್ತದೆ.

ಬಸವರಾಜು ಅವರ ಇಂತಹ ಸರಸ್ವತಿ ಈ ಕಾಯಕ್ಕೆ ನಿಮ್ಮದೊಂದು ಶುಭ ಹಾರೈಕೆ ಇರಲಿ.

ಅವರ ಸಂಪರ್ಕದ **ಮೊಬೈಲ್ ನಂ. 9980110514**

## ಬೇಡವಾದ ಎಷ್ಟೊಂದು ವಸ್ತುಗಳಿವೆ...!



ಒಂದು ದಿನ, ಸಾಕ್ರೇಟೀಸನಿಗೆ, ಆಕಸ್ಮಿಕವಾಗಿ ಒಂದು ದೊಡ್ಡ ವ್ಯಾಪಾರ ಮಳಿಗೆಯನ್ನು ನೋಡುವ ಅವಕಾಶ ಒದಗಿತು. ಬಹಳ ಕುತೂಹಲದಿಂದ ಒಳಗೆ ಪ್ರವೇಶಿಸಿದ. ಅಲ್ಲಿದ್ದ ಪ್ರತಿ ಅಂಗಡಿಗೆ ಬೆಟ್ಟಿಯಿತ್ತು ವ್ಯಾಪಾರಕ್ಕಿಟ್ಟಿದ್ದ ಎಲ್ಲ ವಸ್ತುಗಳ ವಿವರ ಹಾಗೂ ಬೆಲೆಯನ್ನು ವಿಚಾರಿಸುತ್ತ ನಡೆದ. ಸಾಕ್ರೆಟೀಸ ಇದುವರೆಗೆ ಒಂದೂ ವಸ್ತುವನ್ನು ಕೊಳ್ಳಲಿಲ್ಲ ಎಂಬುದನ್ನು ಗಮನಿಸಿದ ಎಲ್ಲ ಅಂಗಡಿಕಾರರು ಅವನನ್ನು ಸುತ್ತುವರೆದು ಕೇಳಿದರು, “ಗುರುಗಳೇ, ನಮ್ಮ ಅಂಗಡಿಗಳಿಗೆ ಬೆಟ್ಟಿಕೊಟ್ಟಿದ್ದಕ್ಕಾಗಿ ನಾವು ನಿಜಕ್ಕೂ ತಮಗೆ? ಋಣಿಯಾಗಿದ್ದೇವೆ. ನಮ್ಮ ದೊಡ್ಡ ಗುರುಗಳಾದ ತಾವು, ತಮಗೆ ಏನೇನು ಇಷ್ಟವೋ ಅದನ್ನು ತೆಗೆದುಕೊಂಡರೆ, ಅದನ್ನು ಉಚಿತವಾಗಿ ನೀಡಲು ನಮಗೆ ಸಂತೋಷವಾಗುತ್ತದೆ. ತಮ್ಮ ಆಯ್ಕೆಯನ್ನು ತಿಳಿಯಲು ಕೌತುಕರಾಗಿದ್ದೇವೆ.

ಸಾಕ್ರೆಟೀಸ ಉತ್ತರಿಸಿದ, “ತುಂಬಾ ಧನ್ಯವಾದಗಳು, ಆದರೆ ನನಗೇನೂ ಬೇಕಾಗಿಲ್ಲ” ಆ ಗುಂಪು ಕೇಳಿತು, “ಇಲ್ಲಿಗೆ ಭೇಟಿ ಕೊಡಲು ಕಾರಣ?”

ಸಾಕ್ರೆಟೀಸ ಅವರಿಗೆ ಹೇಳಿದ, “ನನಗೆ ನಿಜಕ್ಕೂ ಬೇಡವಾದ ಎಷ್ಟೊಂದು ವಸ್ತುಗಳು ಇಲ್ಲಿವೆ ಎಂಬುದನ್ನು ತಿಳಿದುಕೊಳ್ಳಬೇಕಿತ್ತು!” ಸಾಕ್ರೆಟೀಸನ ಬದಲು, ಒಂದು ವೇಳೆ, ನಾವು ಅಲ್ಲಿದ್ದರೆ ಏನಾಗಬಹುದಿತ್ತು?

(ಶ್ರೀ ಸಿದ್ಧೇಶ್ವರ ಸ್ವಾಮೀಜಿ ಅವರ ಪ್ರವಚನ ಮಾಲಿಕೆಯಿಂದ.)

# ಸಮಾನತೆಯತ್ತ ಹೆಜ್ಜೆ :

## ಅಂತರರಾಷ್ಟ್ರೀಯ ಮಹಿಳಾ ದಿನದ ಆಶಯ ಮತ್ತು ಅನಿವಾರ್ಯತೆ

ಒಬ್ಬ ವ್ಯಕ್ತಿಯ ಜೀವನದಲ್ಲಿ ಮಹಿಳೆಯ ಪಾತ್ರ ತುಂಬಾ ದೊಡ್ಡದಿರುತ್ತದೆ. ಆಕೆ ತಾಯಿಯಾಗಿ, ಸೋದರಿಯಾಗಿ, ಪತ್ನಿಯಾಗಿ ಬಾಳಿಗೆ ಬೆಳಕಾಗುತ್ತಾಳೆ. ವೈಯಕ್ತಿಕವಾಗಿ ಮನೆಯ ಅರ್ಧ ಜವಾಬ್ದಾರಿಯನ್ನು ಹೊರುವ ಜೊತೆಗೆ ಒಬ್ಬ ಶಿಕ್ಷಕಿಯಾಗಿ, ಇಂಜಿನಿಯರ್ ಆಗಿ, ಪೈಲೆಟ್ ಆಗಿ ಕೂಡ ತನ್ನ ಕೆಲಸ ಕಾರ್ಯಗಳನ್ನು ಅಚ್ಚುಕಟ್ಟಾಗಿ ನಿಭಾಯಿಸುತ್ತಾಳೆ. ಸಮಾಜದ ಕಟ್ಟುಪಾಡುಗಳ ಹೊರತಾಗಿಯೂ ಕೂಡ ಈಗಿನ ಆಧುನಿಕ ದಿನಗಳಲ್ಲಿ ಆಕೆ ಸಾಧನೆಯ ಶಿಖರವನ್ನು ಮುಟ್ಟುತ್ತಿದ್ದಾಳೆ. ಹಾಗಾಗಿ ವಿಶ್ವದಾದ್ಯಂತ ಮಹಿಳೆಯರಿಗಾಗಿ ಗೌರವಾನ್ವಿತವಾಗಿ ಈ ಒಂದು ದಿನವನ್ನು "ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ" ಯನ್ನಾಗಿ ಆಚರಿಸುವ ಮೂಲಕ ಮೀಸಲಿಡಲಾಗಿದೆ.

ಸಮಾನತೆಯ ಜೊತೆಗೆ ಒಗ್ಗಟ್ಟಿನಲ್ಲಿ ಸಹ ಮಹಿಳೆಯರು ಸದಾ ಮುಂದಿರುವುದು ದೇಶದ ಆರ್ಥಿಕ ಅಭಿವೃದ್ಧಿಗೆ ಸಾಕಷ್ಟು ಅನುಕೂಲವಾಗಲಿದೆ. ಪ್ರತಿ ವರ್ಷ ಮಾರ್ಚ್ 8ರಂದು ಅಂತರರಾಷ್ಟ್ರೀಯ ಮಹಿಳೆಯರ ದಿನವನ್ನಾಗಿ ಆಚರಣೆ ಮಾಡಲಾಗುತ್ತದೆ.



ಮಹಿಳೆಯರ ಸಾಧನೆಗೆ ಮನಃಪೂರ್ವಕ ಗೌರವ ಸೂಚಿಸುವ ದಿನ ಇದಾಗಿದೆ. ಪ್ರಸ್ತುತ 2024ರ ಅಂತರರಾಷ್ಟ್ರೀಯ ಮಹಿಳೆಯರ ದಿನದ ಥೀಮ್ " Inspire Inclusion" ಎನ್ನುವುದಾಗಿದೆ. ಬೇರೆಯವರನ್ನು ಇದನ್ನು ಅರ್ಥ ಮಾಡಿಕೊಳ್ಳಲು ಪ್ರೇರೇಪಣೆ ನೀಡಿ ಮಹಿಳೆಯರಿಗೆ ಎಲ್ಲಾ ಕ್ಷೇತ್ರದಲ್ಲಿಯೂ ಅವಕಾಶ ಕೊಡುವುದು ಮುಂದಿನ ಮಹತ್ತರ ಬೆಳವಣಿಗೆಗೆ ದಾರಿದೀಪವಾಗಲಿದೆ ಎಂಬುದು ಇದರ ಅರ್ಥ. ಪ್ರತಿ ವರ್ಷದ ಮಾರ್ಚ್ 8 ಕೇವಲ ಕ್ಯಾಲೆಂಡರ್ನ ಒಂದು ದಿನವಲ್ಲ; ಅದು ಜಗತ್ತಿನ ಅರ್ಧದಷ್ಟು ಜನಸಂಖ್ಯೆಯಾದ ಮಹಿಳೆಯರ ಹೋರಾಟ, ಸಾಧನೆ ಮತ್ತು ಹಕ್ಕುಗಳ ದನಿಯಾಗುವ ದಿನ. 1900ರ ದಶಕದ ಆರಂಭದಲ್ಲಿ ನ್ಯೂಯಾರ್ಕ್ನ ಬೀದಿಗಳಲ್ಲಿ ಕಾರ್ಮಿಕ ಮಹಿಳೆಯರು ನಡೆಸಿದ ಪ್ರತಿಭಟನೆಯ ಕಿಚ್ಚು, ಇಂದು ಜಾಗತಿಕ ಮಟ್ಟದ ಅಭಿಯಾನವಾಗಿ ರೂಪಾಂತರಗೊಂಡಿದೆ.

ಕಡಿಮೆ ಕೆಲಸದ ಅವಧಿ, ಉತ್ತಮ ವೇತನ ಮತ್ತು ಮತದಾನದ ಹಕ್ಕಿಗಾಗಿ ಸಾವಿರಾರು ಮಹಿಳೆಯರು ಅಂದು ನಡೆಸಿದ ಹೋರಾಟವೇ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಗೆ ಭದ್ರ ಬುನಾದಿ ಹಾಕಿತು.



1910ರಲ್ಲಿ ಕ್ಲಾರಾ ಜೆಟ್ಕಿನ್ ಎಂಬುವವರು ಮಂಡಿಸಿದ ಪ್ರಸ್ತಾವನೆಯ ಫಲವಾಗಿ, ವಿಶ್ವಸಂಸ್ಥೆಯು 1975ರಲ್ಲಿ ಈ ದಿನಕ್ಕೆ ಅಧಿಕೃತ ಮಾನ್ಯತೆ ನೀಡಿತು. ಅಂದಿನಿಂದ ಇಂದಿನವರೆಗೆ ಮಹಿಳೆಯರ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಸ್ಥಾನಮಾನಗಳಲ್ಲಿ ಗಣನೀಯ ಸುಧಾರಣೆ ಕಂಡುಬಂದಿದ್ದರೂ, ಗುರಿ ಇನ್ನೂ ದೂರವಿದೆ.

ಇಂದು ಮಹಿಳೆಯರ ಸಾಧನೆ ಎಲ್ಲಾ ಕ್ಷೇತ್ರಗಳಲ್ಲಿಯೂ ಇದೆ. ಪ್ರಮುಖವಾಗಿ ತಾಂತ್ರಿಕ, ಸಂಶೋಧನಾ ಹಾಗೂ ಉತ್ಪಾದನಾ ಕ್ಷೇತ್ರಗಳಲ್ಲಿ ಮಹಿಳೆಯರು ದೇಶಕ್ಕೆ ತಮ್ಮದೇ ಆದ ಕೊಡುಗೆಗಳನ್ನು ನೀಡಿದ್ದಾರೆ. ತಮ್ಮ ಬುದ್ಧಿಶಕ್ತಿಯಿಂದ ಅದೆಷ್ಟೋ ಸಮಸ್ಯೆಗಳಿಗೆ ಪರಿಹಾರಗಳನ್ನು ತಂದು ಕೊಟ್ಟಿದ್ದಾರೆ.

ಅಂತರರಾಷ್ಟ್ರೀಯ ಮಹಿಳೆಯರ ದಿನದ ಆಚರಣೆ ಇಂದು ನೆನ್ನೆಯದಲ್ಲ. 1900 ನೇ ಇಸವಿಯಿಂದ ಆಚರಿಸಿಕೊಂಡು ಬರಲಾಗುತ್ತಿದೆ. ಆಗಿನ ಸಂದರ್ಭದಲ್ಲಿ ಉದ್ಯಮಗಳ ಅಭಿವೃದ್ಧಿ ದಾಪುಗಾಲಿನಲ್ಲಿ ಸಾಗುತ್ತಿತ್ತು. ಜೊತೆಗೆ ಜನಸಂಖ್ಯೆ ಕೂಡ ಹೆಚ್ಚಾಗುತ್ತಿದ್ದ ದಿನಗಳು ಅವಾಗಿದ್ದವು.

**ಮಹಿಳೆಯರ ದಿನದ ಇತಿಹಾಸ:**

ಮಹಿಳೆಯರ ದಿನದ ಪ್ರಾಮುಖ್ಯತೆಗೆ ಸಂಬಂಧಪಟ್ಟಂತೆ ಈ ಹಿಂದಿನ ಇತಿಹಾಸವನ್ನು ಕೆದಕುತ್ತಾ ಹೋದರೆ 1908 ರ ಸಂದರ್ಭದಲ್ಲಿ ಮಹಿಳೆಯರಿಗೆ ಆಗುತ್ತಿದ್ದ ದೌರ್ಜನ್ಯಗಳು ಮತ್ತು ಅಸಮಾನತೆಯ ವಿರುದ್ಧ ಚರ್ಚೆಗಳು ಶುರುವಾದವು. ಬರೋಬ್ಬರಿ 15000 ಮಹಿಳೆಯರು ಅಂದು ನ್ಯೂಯಾರ್ಕ್ ಸಿಟಿ ಪ್ರವೇಶಿಸಿ ತಮ್ಮ ಕೆಲಸದ ಅವಧಿಗಳನ್ನು ಕಡಿತಗೊಳಿಸಬೇಕು ಮತ್ತು ಸಂಬಳ ಹೆಚ್ಚಿಸಬೇಕು ಜೊತೆಗೆ ನಮಗೆ ವೋಟ್ ಹಾಕುವ ಅಧಿಕಾರ ಕೊಡಬೇಕು ಎಂಬುದಾಗಿ ಹಲವಾರು ಬೇಡಿಕೆಗಳನ್ನು ತಮ್ಮ ಪ್ರತಿಭಟನೆಯ ಮೂಲಕ ಸರ್ಕಾರದ ಮುಂದಿಟ್ಟರು.

ಇದರ ತರುವಾಯ 1909 ಇಸವಿಯಲ್ಲಿ ಮೊದಲ ಮಹಿಳೆಯರ ದಿನವನ್ನು ಅಮೆರಿಕಾದಲ್ಲಿ ಆಚರಣೆಗೆ ತರಲಾಯಿತು. ಇದರ ಮುಂದಿನ ವರ್ಷ ಅಂದರೆ 1910 ರ ಇಸವಿಯಲ್ಲಿ ಕಾಪನ್ಹಾಗನ್ ನಲ್ಲಿ




ವೃತ್ತಿಪರ ಮಹಿಳೆಯರ ಅಂತರಾಷ್ಟ್ರೀಯ ಕಾನ್ಫರೆನ್ಸ್ ಏರ್ಪಡಿಸಲಾಯಿತು. ಅಲ್ಲಿ ಜರ್ಮನಿಯ ಸೋಷಲ್ ಡೆಮಾಕ್ರೆಟಿಕ್ ಪಾರ್ಟಿಯ ಮಹಿಳಾ ಕಚೇರಿಯ ಅಧ್ಯಕ್ಷರಾದ ಕ್ಲಾರಾ ಜಟ್ಕಿನ್ ಎನ್ನುವವರು ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಬಗ್ಗೆ ತಮ್ಮ ಒಲವನ್ನು ವ್ಯಕ್ತಪಡಿಸಿದರು. ಹೀಗಾಗಿ ಪ್ರಪ್ರಥಮ ಬಾರಿಗೆ 1911ರಲ್ಲಿ ಆಸ್ಟ್ರಿಯಾ, ಡೆನ್ಮಾರ್ಕ್, ಜರ್ಮನಿ ಮತ್ತು ಸ್ವಿಜಲ್ಯಾರ್ಂಡ್ ನಲ್ಲಿ ಮಾರ್ಚ್ 19 ರಂದು ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಆಚರಣೆ ಮಾಡಲಾಯಿತು.

ಇದರ ನಂತರದಲ್ಲಿ 1913 ಮತ್ತು 1914ರ ನಡುವೆ ರಷ್ಯಾದಲ್ಲೂ ಮೊದಲ ಬಾರಿಗೆ ಮಹಿಳೆಯರ ದಿನವನ್ನು ಫೆಬ್ರವರಿ 23ರಂದು ಆಚರಿಸಲಾಯಿತು. ಆನಂತರ ಪ್ರತಿ ವರ್ಷ ಮಾರ್ಚ್ 8ಕ್ಕೆ ಮಹಿಳೆಯರ ದಿನಾಚರಣೆಯನ್ನು ವಿಶ್ವದಾದ್ಯಂತ ಆಚರಣೆ ಮಾಡುವ ಒಪ್ಪಂದಕ್ಕೆ ಸಹಿ ಹಾಕಲಾಯಿತು. ಯುನೈಟೆಡ್ ನೇಶನ್ಸ್ ಕೂಡ 1975ರಲ್ಲಿ ಮೊದಲ ಬಾರಿಗೆ ಅಂತರರಾಷ್ಟ್ರೀಯ ಮಹಿಳಾ ದಿನವನ್ನು ಆಚರಣೆ ಮಾಡಿತು.

**ಸಮಾನತೆಯ ಸವಾಲುಗಳು**

ಇಂದಿನ ಆಧುನಿಕ ಯುಗದಲ್ಲಿ ಮಹಿಳೆಯರು ಬಾಹ್ಯಾಕಾಶದಿಂದ ಹಿಡಿದು ರಕ್ಷಣಾ ಪಡೆಯವರೆಗೆ ಎಲ್ಲಾ ಕ್ಷೇತ್ರಗಳಲ್ಲೂ ಮುಂಚೂಣಿಯಲ್ಲಿದ್ದಾರೆ. ಆದರೆ, ಇಂದಿಗೂ ಸಮಾಜದಲ್ಲಿ ಕೆಲವು ಸವಾಲುಗಳು ಹಾಗೆಯೇ ಉಳಿದಿವೆ:

**ವೇತನ ತಾರತಮ್ಯ:** ಒಂದೇ ಕೆಲಸಕ್ಕೆ ಪುರುಷರಿಗಿಂತ ಮಹಿಳೆಯರಿಗೆ ಕಡಿಮೆ ವೇತನ ನೀಡುವ ಪದ್ಧತಿ ಕೆಲವು ವಲಯಗಳಲ್ಲಿ ಇನ್ನೂ ಅಸ್ತಿತ್ವದಲ್ಲಿದೆ.

**ಸುರಕ್ಷತೆ:** ಸಾರ್ವಜನಿಕ ಮತ್ತು ಖಾಸಗಿ ವಲಯಗಳಲ್ಲಿ ಮಹಿಳೆಯರ ಸುರಕ್ಷತೆ ಇಂದಿಗೂ ಗಂಭೀರ ಚರ್ಚೆಯ ವಿಷಯ.

ನಿರ್ಧಾರ ತೆಗೆದುಕೊಳ್ಳುವಿಕೆ: ರಾಜಕೀಯ ಮತ್ತು ಕಾರ್ಪೊರೇಟ್ ಮಂಡಳಿಗಳಲ್ಲಿ ಮಹಿಳೆಯರ ಪ್ರಾತಿನಿಧ್ಯ ಇನ್ನೂ ಆಶಾದಾಯಕ ಮಟ್ಟ ತಲುಪಿಲ್ಲ.



**2026ರ ಆಶಯ: 'ಪಡೆದುಕೊಳ್ಳಲು ನೀಡಿ' (Give To Gain)**

ಈ ವರ್ಷದ ಘೋಷ ವಾಕ್ಯವು ಬಹಳ ಅರ್ಥಪೂರ್ಣವಾಗಿದೆ. ಮಹಿಳೆಯರಿಗೆ ಶಿಕ್ಷಣ, ಸಮಾನ ಅವಕಾಶ ಮತ್ತು ಗೌರವವನ್ನು 'ನೀಡುವುದರಿಂದ' ಸಮಾಜವು ಸಮೃದ್ಧಿ ಮತ್ತು ಅಭಿವೃದ್ಧಿಯನ್ನು 'ಪಡೆದುಕೊಳ್ಳುತ್ತದೆ' ಎಂಬುದೇ ಇದರ ಮೂಲ ಮಂತ್ರ. ಮಹಿಳೆಯೊಬ್ಬಳು ಸಬಲೆಯಾದರೆ ಒಂದು ಕುಟುಂಬವೇ ಪ್ರಗತಿ ಹೊಂದುತ್ತದೆ ಎಂಬುದು ಇತಿಹಾಸ ಸಾಬೀತುಪಡಿಸಿದ ಸತ್ಯ. ಮಹಿಳಾ ದಿನಾಚರಣೆ ಎಂದರೆ ಕೇವಲ ಶುಭಾಶಯ ಕೋರುವುದು ಅಥವಾ ಉಡುಗೊರೆ ನೀಡುವುದಕ್ಕೆ ಸೀಮಿತವಾಗಬಾರದು. ಮನೆಯೊಳಗಿನ ಕೆಲಸದ ಹಂಚಿಕೆಯಿಂದ ಹಿಡಿದು ಕಚೇರಿಯ ಉನ್ನತ ಹುದ್ದೆಯವರೆಗೆ ಲಿಂಗ ತಾರತಮ್ಯವಿಲ್ಲದ ವಾತಾವರಣ ನಿರ್ಮಿಸುವುದೇ ಈ ದಿನದ ನಿಜವಾದ ಯಶಸ್ಸು.

"ಹೆಣ್ಣು ಒಂದು ಶಕ್ತಿ; ಆಕೆಗೆ ಬೇಕಿರುವುದು ಕೇವಲ ಅನುಕಂಪವಲ್ಲ, ಸಮಾನ ಅವಕಾಶದ ಹಕ್ಕು."

ಈ ದಿನಾಚರಣೆ ಕೇವಲ ಒಂದು ಸಂಭ್ರಮವಲ್ಲ, ಇದು ಒಂದು ಶತಮಾನದ ಹೋರಾಟದ ಫಲ. 1908ರಲ್ಲಿ ನ್ಯೂಯಾರ್ಕ್ನ ಬೀದಿಗಳಲ್ಲಿ ಸಾವಿರಾರು ಮಹಿಳೆಯರು ತಮ್ಮ ಕೆಲಸದ ಅವಧಿ ಕಡಿಮೆ ಮಾಡಬೇಕು, ಸಮಾನ ವೇತನ ನೀಡಬೇಕು ಮತ್ತು ನಮಗೂ ಮತದಾನದ ಹಕ್ಕು ಇರಬೇಕು ಎಂದು ಧ್ವನಿ ಎತ್ತಿದರು. ಆ ಕಿಚ್ಚು ಇಂದು ಜಗತ್ತಿನಾದ್ಯಂತ ಮಹಿಳಾ ಸಬಲೀಕರಣದ ಸಂಕೇತವಾಗಿ ಮಾರ್ಪಟ್ಟಿದೆ.

**ಮಹಿಳೆಯರ ಪಾತ್ರ ಮತ್ತು ಸಾಧನೆ:**

"ಹೆಣ್ಣು ಸಂಸಾರದ ಕಣ್ಣು" ಎಂಬ ಮಾತಿದೆ. ಆದರೆ ಇಂದು ಹೆಣ್ಣು ಕೇವಲ ಮನೆಯ ಕಣ್ಣಾಗಿ ಉಳಿದಿಲ್ಲ; ಆಕೆ ದೇಶದ ಪ್ರಗತಿಯ ಬೆನ್ನೆಲುಬಾಗಿದ್ದಾಳೆ. ಕೃಷಿ ಭೂಮಿಯಿಂದ ಹಿಡಿದು ಬಾಹ್ಯಾಕಾಶ ಸಂಶೋಧನೆಯವರೆಗೆ, ಕ್ರೀಡಾ ಮೈದಾನದಿಂದ ಹಿಡಿದು ರಕ್ಷಣಾ ಪಡೆಯವರೆಗೆ ಮಹಿಳೆ ತನ್ನ ಛಾಪನ್ನು ಮೂಡಿಸಿದ್ದಾಳೆ. ಒನಕೆ ಓಬವ್ವ, ರಾಣಿ ಅಬ್ಬಕ್ಕರ ಶೌರ್ಯದಿಂದ ಹಿಡಿದು ಇಂದಿನ ಸುಧಾ ಮೂರ್ತಿ ಅಥವಾ ಕಲ್ಪನಾ ಚಾವ್ಲಾರ ಸಾಧನೆಯವರೆಗೆ ಮಹಿಳೆಯರ ಕೊಡುಗೆ ಅಪಾರ.

"ಪಡೆದುಕೊಳ್ಳಲು ನೀಡಿ" (Give To Gain) ಈ ವರ್ಷದ ಆಶಯದಂತೆ, ನಾವು ಮಹಿಳೆಯರಿಗೆ ಸರಿಯಾದ ಶಿಕ್ಷಣ, ಸಮಾನ ಗೌರವ ಮತ್ತು ಮುಕ್ತವಾಗಿ ಬೆಳೆಯುವ ಅವಕಾಶಗಳನ್ನು 'ನೀಡಿದರೆ', ಸಮಾಜವು ಬದಲಿಗೆ ಅಭಿವೃದ್ಧಿ ಮತ್ತು ನೆಮ್ಮದಿಯನ್ನು 'ಪಡೆದುಕೊಳ್ಳುತ್ತದೆ'. ಹೆಣ್ಣು ಮಗುವನ್ನು ವಿದ್ಯಾವಂತೆಯನ್ನಾಗಿ ಮಾಡುವುದು ಅಂದರೆ ಒಂದು ಇಡೀ ತಲೆಮಾರನ್ನು ಸುಧಾರಿಸಿದಂತೆ. ನಮ್ಮ ಜವಾಬ್ದಾರಿ: ಮಹಿಳಾ ದಿನಾಚರಣೆ ಎಂದರೆ ಕೇವಲ ಒಂದು ದಿನದ ಕಾರ್ಯಕ್ರಮವಲ್ಲ. ನಮ್ಮ ಮನೆಯಲ್ಲಿರುವ ತಾಯಿ, ತಂಗಿ, ಪತ್ನಿ ಮತ್ತು ಸಮಾಜದ ಪ್ರತಿಯೊಬ್ಬ ಮಹಿಳೆಯನ್ನು ದಿನವೂ ಗೌರವಿಸುವುದು ನಮ್ಮ ಆದ್ಯತೆಯಾಗಬೇಕು. ಲಿಂಗ ತಾರತಮ್ಯವಿಲ್ಲದ, ಹೆಣ್ಣು ಮಕ್ಕಳು ನಿರ್ಭಯವಾಗಿ ಓಡಾಡಬಲ್ಲ ವಾತಾವರಣ ನಿರ್ಮಿಸುವುದೇ ಈ ದಿನಕ್ಕೆ ನಾವು ನೀಡುವ ನಿಜವಾದ ಅರ್ಥ. ಮಹಿಳೆ ಎಂದರೆ ಕೇವಲ ಸೌಂದರ್ಯವಲ್ಲ, ಅವಳು ಸಹನೆ, ಶಕ್ತಿ ಮತ್ತು ಪ್ರೀತಿಯ ಸಂಗಮ. ಆಕೆಗೆ ಅನುಕಂಪ ಬೇಡ, ಸಮಾನ ಅವಕಾಶದ ಹಕ್ಕು ಸಿಗಲಿ ಎಂದು ಆಶಿಸುತ್ತಾ

**ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ಬಣ್ಣಗಳು:**

ಕೇವಲ ಧ್ವಜಗಳಿಗೆ ಬಣ್ಣ ಇರುವುದು ಮಾತ್ರವಲ್ಲ. ಈ ರೀತಿಯ ವಿಶೇಷ ದಿನಗಳಿಗೂ ಕೂಡ ಇರುತ್ತದೆ ಎಂಬುದು ನಿಮಗೆ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯಂದು ತಿಳಿದು ಬರುತ್ತದೆ. ಸಾಮಾನ್ಯವಾಗಿ ಈ ದಿನದಲ್ಲಿ ನೇರಳೆ ಹಸಿರು ಮತ್ತು ಬಿಳಿ ಬಣ್ಣವನ್ನು ಉಪಯೋಗಿಸಲಾಗುತ್ತದೆ. ಇಲ್ಲಿ ನೇರಳೆ ಬಣ್ಣ ನ್ಯಾಯ ಮತ್ತು ಗೌರವವನ್ನು ಸೂಚಿಸುತ್ತದೆ. ಹಸಿರು ಭರವಸೆಯನ್ನು ಸಂಕೇತಿಸುತ್ತದೆ ಮತ್ತು ಶುದ್ಧತೆಯನ್ನು ಸೂಚಿಸುತ್ತದೆ. ಈ ಬಣ್ಣಗಳು ಯುನೈಟೆಡ್ ಕಿಂಗ್ಡಂನಿಂದ ಮೊದಲ ಬಾರಿಗೆ ಪರಿಚಯವಾದವು ಎಂದು ಹೇಳಲಾಗುತ್ತದೆ.

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಯಾವುದೇ ಒಂದು ದೇಶಕ್ಕೆ ಅಥವಾ ಗುಂಪಿಗೆ ಅಥವಾ ಸಂಘಕ್ಕೆ ಸೀಮಿತವಾಗಿಲ್ಲ. ಇಡೀ ವಿಶ್ವದಾದ್ಯಂತ ಇದನ್ನು ಆಚರಿಸುವುದರಿಂದ ಈ ದಿನಕ್ಕೆ ವಿಶೇಷವಾದ ಮಹತ್ವವಿದೆ ಮತ್ತು ಲಿಂಗ ತಾರತಮ್ಯ ಇರುವುದಿಲ್ಲ.

**–ಸುದ್ದಿಸಂಗಾತಿ ಡೆಸ್ಕ್**



# ಮನಸಿನ ಪುಟದಲಿ ನಿನ್ನದೇ ಹೆಸರು...

ಸುಮಾ ಬೆಳಗೆರೆ

ಗೊತ್ತಿಲ್ಲ ಹೀಗೆ, ಯಾಕೆ ಪ್ರೀತಿ ಆಯ್ತು ಅಂತ ನಿನ್ನ ಮೇಲೆ. ಆದರೆ ನನಗೆ ಗೊತ್ತಿಲ್ಲದೆ ನಿನ್ನ ಮೇಲೆ ತುಂಬಾ ಪ್ರೀತಿ ಹುಟ್ಟಿದೆ. ನನ್ನ ಜೀವನದಲ್ಲೂ ಒಬ್ಬರ ಮೇಲೆ ಪ್ರೀತಿ ಹುಟ್ಟುತ್ತೆ, ನನಗೂ ಪ್ರೀತಿಯ ಭಾವನೆಗಳು ಹುಟ್ಟುತ್ತೆ ಎಂದು ನಿನ್ನ ನೋಡಿದ ಮೇಲೆಯೇ ಗೊತ್ತಾದದ್ದು. ತುಂಬಾ ಕಡಿಮೆ ಸಮಯದಲ್ಲಿ ತುಂಬಾ ಜಾಸ್ತಿ ಪ್ರೀತಿ ಹುಟ್ಟಿದೆ. ಹೆಚ್ಚು ಪರಿಚಯವಿಲ್ಲದೆ ಹೆಚ್ಚು ಪ್ರೀತಿ ಮೂಡಿದರೆ ಅದು ಹಿಂದಿನಜನ್ಮಾಂತರದಸಂಬಂಧವಂತೆನಿನ್ನ ಮೇಲೆ ಯಾವುದೇ ಸ್ವಾರ್ಥಗಳಿಲ್ಲದೆ ನಿಷ್ಕಲ್ಮಶವಾದ ಪ್ರೀತಿ ನನ್ನದು. ನಿನ್ನ ಭಾವನೆಗಳಿಗೆ ಬೆಲೆಕೊಟ್ಟು ನಿನ್ನ ಕಷ್ಟ ಸುಖಗಳಿಗೆ ಹೊಂದಿಕೊಂಡು ಸದಾ ನಿನ್ನ ಜೊತೆಯಲ್ಲಿಯೇ ಇರುವ ಬಯಕೆ ನನ್ನದು. ಈ ಜನ್ಮದಲ್ಲಿ ಪ್ರತಿಕ್ಷಣದಲ್ಲೂ ನಿನ್ನ ಪ್ರೀತಿಯನ್ನೇ ಬಯಸುವೆ.

ನನ್ನ ನಿನ್ನ ಮೊದಲ ಭೇಟಿಯಾದದ್ದು ನನಗಿನ್ನೂ ಚೆನ್ನಾಗಿ ನೆನಪಿದೆ ನಾವಿಬ್ಬರು ಮೊದಲ ಬಾರಿ ಭೇಟಿಯಾಗಿದ್ದು ಮಡಿಕೇರಿಯ ಟೂರ್ ನಲ್ಲಿ ರಾಜ ಸೀಟ್ ನ ಹತ್ತಿರ

ಆಕಸ್ಮಿಕ ಪರಿಚಯ ನೀನು ನಮ್ಮ ಊರಿನವನು ಎಂದು ತಿಳಿಯಿತು ನಾವಿಬ್ಬರೂ ಒಂದೇ ಊರಿನವರು ಎಂದು ತಿಳಿದುನಿನಗೂ ತುಂಬಾ ಸಂತೋಷವಾಯಿತು ನೀನು ಗಾಯಕ ಆರ್ಕೆಸ್ಟ್ರಾದಲ್ಲಿ ಹಾಡುತ್ತೀಯ ಎಂದು ಹೇಳಿದೆ. ನನಗೆ ತುಂಬಾ ಸಂತೋಷವಾಯಿತು ನನಗೆ ಹಾಡು ಸಂಗೀತ ಅಂದ್ರೆ ಇಷ್ಟ ಅಂತ ಹೇಳಿದೆ ಫೋನ್ ನಂಬರ್ ವಿನಿಮಯ ಮಾಡಿಕೊಂಡೆವು ನಂತರ ಪರಿಚಯದ ಗುರುತಿಗಾಗಿ ಒಂದು ಫೋಟೋ ಸೆಲ್ಫಿ ತೆಗೆದುಕೊಂಡೆವು



ಮತ್ತೆ ನನ್ನ ಪ್ರೊಗ್ರಾಮ್ ಇದ್ದಾಗ ಕಾಲ್ ಮಾಡುತ್ತೇನೆ ಬನ್ನಿ ಅಂತ ಹೇಳಿದೆ ನೀನು

ಟೂರ್ ಮುಗಿಸಿ ಬಂದಮೇಲೆ

ಮತ್ತೆ ಮರೆಯಲಾಗದೆ ಆ ನಂಬರ್ ಗೆ ಒಂದೆರಡು ಮೆಸೇಜು ಗುಡ್ ಮಾರ್ನಿಂಗ್ ,ಗುಡ್ ನೈಟ್

ಅದೊಂದು ದಿನ ನಿನ್ನ ಕಾಲ್ ಬಂತು ರಿಸೀವ್ ಮಾಡಿದಾಗ "ನಯನ ಸಭಾಂಗಣದಲ್ಲಿಆರ್ಕೆಸ್ಟ್ರಾ ಪ್ರೋಗ್ರಾಮ್ ಇದೆ ನಾನು ಹಾಡುತ್ತಿದ್ದೇನೆ ಬನ್ನಿ" ಎಂದು ಹೇಳಿದೆ

ನೀನು ಹೇಗೆ ಹಾಡುತ್ತೀಯ ನಿನ್ನ ಧ್ವನಿ ಹೇಗಿದೆ ನಿನ್ನ ಹಾಡು ಕೇಳಬೇಕು ಎಂಬ ಕುತೂಹಲ ಮೂಡಿತು, ನಾನು ಬಂದೆ ನೀನು ನನ್ನನ್ನು ಮಾತನಾಡಿಸಿ ಮುಂದಿನ ಸೀಟಿನಲ್ಲಿ ಕುಳಿತುಕೊಳ್ಳಲು ಹೇಳಿದೆ ಆ ದಿನ ನೀನು ಹತ್ತು ಹಾಡುಗಳನ್ನು ಹಾಡಿದೆ ಎಲ್ಲಾ ಹಾಡುಗಳು ತುಂಬಾ ಚೆನ್ನಾಗಿದ್ದವು ತುಂಬಾ ಚೆನ್ನಾಗಿ ಹಾಡಿದೆ ನನ್ನ ಹೃದಯ ಮುಟ್ಟಿದ ಹಾಡು

"ಬಾ ನನ್ನ ಸಂಗೀತ ನಿನಗಾಗಿ ನನ್ನ ಸಂಗೀತ ಸಂಗಾತಿ ನಿನಗಿಂದು ಶುಭಾಶಯ...."

ಆ ಹಾಡು ನನಗಾಗಿಯೇ ಹಾಡುತ್ತಿರುವೆ ಎನಿಸಿತು ಕಾರ್ಯಕ್ರಮ ಮುಗಿಯಿತು ತುಂಬಾ ಚೆನ್ನಾಗಿ ಹಾಡಿದ್ರಿ ಕಂಗ್ರಾಟ್ಸ್ ಎಂದು ನಾನು ಹೇಳಿದೆ ನೀವು ಥ್ಯಾಂಕ್ಸ್ ಎಂದು ಹೇಳಿದ್ರಿ ನಂತರ ಮನೆಗೆ ಬಂದೆಆ ರಾತ್ರಿ

ನೀವು ಹಾಡಿದ ಹಾಡು ನನ್ನ ಮನಸ್ಸಿನಲ್ಲಿ ಉಳಿದಿತ್ತು ರೆಪ್ಪೆ ಮುಚ್ಚಿ ಬಿಡುವುದರೊಳಗೆ ಅದೊಂದು ಭಾವ ಹಾದು ಹೋಗಿತ್ತು ರೆಪ್ಪೆ ಮುಚ್ಚಿದ ಕಣ್ಣಿನ ಒಳಗಡೆ ನಿನ್ನ ರೂಪ ಪದೇ ಪದೇ ಕಾಣಿಸುತ್ತಿತ್ತು ನಾನು ನಿನ್ನನ್ನು ಪ್ರೀತಿಸುತ್ತಿದ್ದೇನೆಯೇ...? ಎನಿಸಿತು.

ಮೊಬೈಲ್ ತೆಗೆದುಕೊಂಡು

ನಿಮ್ಮ ಗಾಯನ ತುಂಬಾ ಚೆನ್ನಾಗಿತ್ತು ನಿಮ್ಮ ಕಂಠ ಸುಮಧುರವಾಗಿದೆ ಎಂದು ಮೆಸೇಜ್ ಹಾಕಿದೆ ನಿಮ್ಮ ವಿಶ್ವಾಸ ಅಭಿಮಾನ ಪ್ರೀತಿಗೆ ಥ್ಯಾಂಕ್ಸ್ " ಮೆಸೇಜ್ ಬಂತು.

'ನಾನು ನಿಮ್ಮ ಫ್ಯಾನ್ ಆಗಿಬಿಟ್ಟೆ' ಎಂದು ಮೆಸೇಜ್ ಹಾಕಿದೆ

'ನಾನು ಹಾಡಿದ ಯಾವ ಹಾಡು 'ನಿಮಗೆ ತುಂಬಾ ಇಷ್ಟವಾಯಿತು ?'

'ಬಾ ನನ್ನ ಸಂಗೀತ ಹಾಡು ತುಂಬಾ ಇಷ್ಟ ಆಯ್ತು ಆ ಹಾಡು ನನಗಾಗಿ ಹಾಡಿದ್ದು ಎನಿಸಿತು '

'ನಿಮಗಾಗಿಯೇ ಆ ಹಾಡು ಹಾಡಿದ್ದು' ಎಂದು ರಿಪ್ಲೈ ಬಂತು ನನಗೆ ತುಂಬಾ ಸಂತೋಷವಾಯಿತು ನಾನು ನಿಮ್ಮ ಹಾಡುಗಳನ್ನು ಇಷ್ಟಪಡುತ್ತಿದ್ದೇನೆಯೋ ಅಥವಾ ನಿಮ್ಮನ್ನು ಇಷ್ಟಪಡುತ್ತಿದ್ದೇಯೋ ಎನಿಸಿ ಮನಸಿನೊಳಗಡೆ ಹೋರಾಟ ನಡೆದಿತ್ತು ನೀನು ನನ್ನ ಅನುಮತಿ ಪಡೆಯದೆ ನಿನ್ನ ಹೃದಯದಂಗಳದಲ್ಲಿ ನನಗೊಂದಿಷ್ಟು ಜಾಗ ಮಾಡಿಕೊಂಡಿದ್ದೆ ಸತ್ಯ ತಾನೇ? ಒಲವಿನ ಗಾಳಿ ಇಬ್ಬರ ಹೃದಯವನ್ನು ಸ್ಪರ್ಶಿಸಿತ್ತು ಪ್ರೀತಿಯ ಮಳೆ ಮನಸ್ಸಿನ ತುಂಬಾ ಸುರಿದಿತ್ತು ಪ್ರೀತಿಯಲ್ಲಿ ಬಂಧಿತರಾದ ನಾವಿಬ್ಬರು ಒಲವಿನ ಚಿತ್ತಾರವನ್ನು ಬರೆದುಕೊಂಡಿದ್ದೆವು ನಂತರ ಮತ್ತೆ ನೀವು ಒಂದು ಆರ್ಕೆಸ್ಟ್ರಾದಲ್ಲಿ ಹಾಡಿದ್ರಿ, ಆ ನೀರವತೆಯ ರಾತ್ರಿಯಲ್ಲಿ ಸುಮಧುರ ಹಾಡುಗಳು ಅಲೆಯಲೆಯಾಗಿ ತೇಲಿ ಬಂದವು ಒಂದರ ನಂತರ ಮತ್ತೊಂದು ಹಾಡು ಹಾಡು ಗಳ, ಚಪ್ಪಾಳೆಗಳ ಸುರಿಮಳೆ 'ಎಲ್ಲಾ ಹಾಡು ನಿನಗಾಗಿ ಹಾಡಿದ್ದು' ಎಂದು ನೀನು ನನ್ನನ್ನು ಭೇಟಿಯಾಗಿ ಪಿಸುಮಾತಿನಲ್ಲಿ ಹೇಳಿದೆ ಆ ಪಿಸು ಮಾತು ಮೈಮನಗಳಲ್ಲಿ ರೋಮಾಂಚನ ಹುಟ್ಟಿಸಿತ್ತು ಸಿನಿಮಾದಲ್ಲಿ ನಾಯಕ ನಾಯಕಿ ಗೋಸ್ಕರ ಹಾಡುವುದನ್ನು ನೋಡಿದ್ದೆ ಆದರೆ ನನ್ನನಿಜ ಜೀವನದಲ್ಲಿ ನಾಯಕ ನಾಯಕಿ ಗೋಸ್ಕರವಾಗಿ ಅಂದರೆ ನೀನು ನನಗಾಗಿ ಹಾಡಿದ್ದು ತುಂಬಾ ಖುಷಿಯಾಯಿತು

ನಮ್ಮಿರದು ಗಂಡ ಹೆಂಡತಿ ಪ್ರೀತಿಯಲ್ಲ ಅದನ್ನು ಮೀರಿದ ಒಂದು ಅನುಭೂತಿ ನಾನು ನಿನ್ನ ಹೆಂಡತಿಯಾಗಲು ಸಾಧ್ಯವಿಲ್ಲ ನೀನು ನನ್ನ ಗಂಡನಾಗಲು ಸಾಧ್ಯವಿಲ್ಲ ರಾಧಾಕೃಷ್ಣರ ಪ್ರೀತಿಯಂತೆ ನಮ್ಮ ಪ್ರೀತಿ ಅಮರ ಮತ್ತು ಪವಿತ್ರಈಗ ಸಮಯ ರಾತ್ರಿಒಂದು ಘಂಟೆ ಆಗಿದೆ ನನ್ನ ಜೀವನದ ಕೊನೆಯ ದಿನಗಳಲ್ಲಿ ನೀನು ಪರಿಚಯವಾದೆ ಜೀವನವೆಂಬ ನಾಟಕದಲ್ಲಿ ನನ್ನ ಪಾತ್ರ

ಮುಗಿಯುತ್ತಿದೆ ಬಾಳುವಂಥಹ ಪುಷ್ಪ ಬಾಡುತ್ತಿದೆ ಪ್ರೀತಿ
ಹೇಗಿರುತ್ತದೆ ಅಂತ ತಿಳಿಸಿಕೊಟ್ಟೆ ನಾಳೆ ಹತ್ತು ಗಂಟೆಗೆ ನನ್ನ
ಆಪರೇಷನ್ ಇದೆ ನಾನು ಬದುಕಿ ಬರುತ್ತೇನೆ ಎಂಬ ಭರವಸೆ
ಇಲ್ಲ ಬೋನ್ ಮ್ಯಾರೋ ಕ್ಯಾನ್ಸ್ ರ್ ಎಂಬ ಮಹಾಮಾರಿ ನನ್ನ
ಬಲಿ ತೆಗೆದುಕೊಳ್ಳುತ್ತಿದೆ ನಾನು ನಿನ್ನನ್ನು ನೀನು ನನ್ನನ್ನು
ಗಾಢವಾಗಿಪ್ರೀತಿಸಿದ ಕೆಲವೇ ದಿನಗಳಲ್ಲಿ ನನಗೆ ಬೋನ್
ಮ್ಯಾರೋ ಕ್ಯಾನ್ಸ್ ರ್ ಫೈನಲ್ ಸ್ಟೇಜಿನಲ್ಲಿ ಇರುವುದು ತಿಳಿಯಿತು
ನನ್ನ ಎಲ್ಲಾ ವಿಷಯ ನಿನಗೂ ಗೊತ್ತುನಾಳೆ ಒಂದು ಮದುವೆ
ಮನೆಯಲ್ಲಿ ನಿನ್ನ ಆರ್ಕೆಸ್ಟ್ರಾ ಪ್ರೋಗ್ರಾಮ್ ಇದೆ ನೀನು ನನಗಾಗಿ
ಬಾ ನನ್ನ ಸಂಗೀತ ಹಾಡನ್ನು
ಹಾಡು.. ನೀನು ಇಲ್ಲಿ ಬರುವುದು ಬೇಡ ಅಲ್ಲಿ ಹಾಡು
ಮುಂದಿನ ಜನ್ಮ ಇರುವುದಾದರೆ ಆ ಬ್ರಹ್ಮನ ಹತ್ತಿರ ನಿನ್ನ
ಹೆಂಡತಿಯಾಗಿ ನಿನ್ನ ಜೊತೆನಾನು ಬಾಳಬೇಕೆಂದುಕೇಳಿ ನನ್ನ
ಹಣೆಯಲ್ಲಿ ಬರೆಸಿಕೊಂಡು
ಬರುತ್ತೇನೆ. ನಾವಿಬ್ಬರೂ ಮೊದಲ ಬಾರಿ ಭೇಟಿಯಾಗಿ
ಪರಿಚಯದ ಗುರುತಿಗಾಗಿ ಮಡಿಕೇರಿಯ ರಾಜ ಸೀಟ್ ನ ಹತ್ತಿರ
ಮೊಬೈಲ್ ನಲ್ಲಿ ತೆಗೆದುಕೊಂಡ ಸೆಲ್ಫಿ ಫೋಟೋ ಈಗ ನೋಡಿದೆ
ತುಂಬಾ ಖುಷಿ ಎನಿಸಿತು ನನ್ನ ಕಣ್ಣ ತುಂಬಾ ನಿನ್ನದೇ ಬಿಂಬ
ಇದೆಮತ್ತೇನು ಹೇಳಲಿ ನಾಳೆ ಹೇಳುವ ಭರವಸೆ ಇಲ್ಲ ನನ್ನ
ಪ್ರೀತಿಯ ಹೃದಯಕ್ಕೆ ಪ್ರೀತಿಯ ಶುಭೋದಯ
ನಿನ್ನ ಪ್ರೀತಿಯ ಪುಷ್ಪ
ಆ ನೀರವತಿಯ ರಾತ್ರಿಯಲ್ಲಿ ಮೆಸೇಜ್ ಬಂದ
ಸೂಚನೆಯಾಯಿತು
ಸಮಯ ಒಂದುವರೆ ಆಗಿತ್ತು ಮೂರ್ತಿ ಮೊಬೈಲ್
ತೆಗೆದುಕೊಂಡು ಓಪನ್ ಮಾಡಿ ಮೆಸೇಜ್ ನೋಡಿದ ಅವನ ಕಣ್ಣ
ತುಂಬಾ ಕಣ್ಣೀರು ತುಂಬಿ ಕಣ್ಣಂಚು ಒದ್ದೆಯಾಯಿತು
,'ನಿನಗೇನು ಆಗೋದಿಲ್ಲ ನಮ್ಮ ಪ್ರೀತಿ ಗೆಲ್ಲುತ್ತದೆ ನಿನಗಾಗಿ ಈ
ದಿನ ಮದುವೆ ಮನೆಯ ಆರ್ಕೆಸ್ಟ್ರಾದಲ್ಲಿ ನಿನಗಿಷ್ಟವಾದ ಹಾಡು
ಹಾಡುತ್ತೇನೆ ನಂತರ ತಕ್ಷಣ ನಾನು ಹಾಸ್ಪೆಟಲ್ ಗೆ ಬರುತ್ತೇನೆ
ನಿನ್ನ ಪ್ರೀತಿಯ ಮೂರ್ತಿ ಎಂದು ಮೆಸೇಜ್ ಹಾಕಿದ.
ಮಧ್ಯಾಹ್ನ ಎರಡು ಗಂಟೆಯ ಸಮಯ ಮೂರ್ತಿ
ಹಾಡುವುದನ್ನು ಮುಗಿಸಿ ಮೊಬೈಲ್ ಓಪನ್ ಮಾಡಿ ನೋಡಿದ
"ಆಪರೇಷನ್ ಆಗಬೇಕಾದರೆ ಬಿಪಿ ಹೆಚ್ಚಾಗಿಉಸಿರಾಟದ
ವ್ಯತ್ಯಾಸದಿಂದ ಪುಷ್ಪ ತೀರಿಕೊಂಡಳು' ಎಂಬ ಮೆಸೇಜ್
ಅವನಿಗಾಗಿ ಕಾದಿತ್ತು ಪುಷ್ಪಳ ತಂದೆ ಆ ಮೆಸೇಜ್ ಮಾಡಿದ್ದರು
ಮೂರ್ತಿಗೆನಿಂತ ನೆಲವೇ ಕುಸಿದಂತಾಯಿತು ಪುಷ್ಪ ನೀನು
ಆಪರೇಷನ್ ಸಕ್ಸಸ್ ಆಗಿ ಹುಷಾರಾಗಿ ಬರುತ್ತೀಯ ಅಂತ
ಭರವಸೆ ಇತ್ತು ನಿನ್ನ ಬಗ್ಗೆ ನಾನು ನೂರಾರು ಕನಸುಗಳನ್ನು
ಕಟ್ಟಿಕೊಂಡಿದ್ದೆ ನಾವಿಬ್ಬರು ಮದುವೆಯಾಗಬೇಕು ನಮ್ಮ ಸುಂದರ
ದಾಂಪತ್ಯ ಜೀವನದಲ್ಲಿ ಮಗು ಆಗಬೇಕು ಆ ಮಗುವಿಗೆ
ಪೋಲಿಯೋ ಡ್ರಾಪ್ಸ್ , ಬಿಸಿಜಿ ಹಾಕಿಸಬೇಕು ಯೂನಿಫಾರಂ
ಹಾಕಿ ಕಾನ್ವೆಂಟಿಗೆ ಬಿಡಬೇಕು ಅ ಆ ಇ ಈ ಎಬಿಸಿಡಿ
ಹೇಳಿಕೊಡಬೇಕು ಆ ಮಗು ನನ್ನ ಡ್ಯಾಡಿ ನಿನ್ನ ಮಮ್ಮಿ ಅಂತ
ಕರೆಯಬೇಕು ಎಂದುಕೊಂಡಿದ್ದೆ ನನ್ನ ಕನಸುಗಳೆಲ್ಲ ಚಿದ್ರ
ಚಿದ್ರವಾದವು
ಕನಸುಗಳು ಬರೀ ಕನಸಾಯಿತು ಒಂದೂ ನನಸಾಗಲಿಲ್ಲ... ದುಃಖ
ಉಕ್ಕಿಬಂದು ಕಣ್ಣ ತುಂಬಾ ಕಣ್ಣೀರು ತುಂಬಿ ಕೆನ್ನೆಯ ಮೇಲೆ
ಉರುಳಿತು ಬಿಕ್ಕಿಬಿಕ್ಕಿ ಅತ್ತನು.
ನನ್ನ ಮನಸ್ಸಿನಲ್ಲಿ ನಿನಗೆ ಕೊಟ್ಟ ಸ್ಥಾನವನ್ನು ಬೇರೆ ಯಾರಿಗೂ
ಕೊಡಲಾರೆ ಏಕೆಂದರೆ ನೀನು ನನ್ನ ಜೀವನದ ಒಂದು ಭಾಗ ನಿನ್ನ
ಹುಣ್ಣಿಮೆಯಂತಹ ನಗು ನನ್ನೆದೆಯಲ್ಲಿ ಕನಸುಗಳ ಬಿತ್ತಿದೆ ಪುಷ್ಪ.
ನನ್ನ ಮನಸ್ಸಿನ ಪುಟದಲಿ ನಿನ್ನದೇ ಹೆಸರು... ವಂದನೆಗಳು. ■

# ಅದ್ದೂರಿಯಾಗಿ ನಡೆದ ದೊಡ್ಡಚಿಕ್ಕನಹಳ್ಳಿ ವೆಂಕಟರಮಣಸ್ವಾಮಿ ಜಾತ್ರೆ

ಮಂಡ್ಯ ಜಿಲ್ಲೆ ನಾಗಮಂಗಲ ತಾಲ್ಲೂಕು ದೊಡ್ಡಚಿಕ್ಕನಹಳ್ಳಿ ಗ್ರಾಮದ ಶ್ರೀ ವೆಂಕಟರಮಣಸ್ವಾಮಿ ಜಾತ್ರಾ ಮಹೋತ್ಸವವು ಕಳೆದ ಫೆಬ್ರವರಿ 17 ರಿಂದ 26 ರ ವರೆವಿಗೆ ಅದ್ದೂರಿಯಾಗಿ ಜರುಗಿತು. ಜಾತ್ರೆಯ ಅಂಗವಾಗಿ ಫೆಬ್ರವರಿ 25 ರಂದು ನಡೆದ ಶ್ರೀ ವೆಂಕಟರಮಣಸ್ವಾಮಿಯ "ಬ್ರಹ್ಮ ರಥೋತ್ಸವ " ಕ್ಕೆ ರಾಜ್ಯದ ವಿವಿಧ ಕಡೆಗಳಿಂದ ಸಾವಿರಾರು ಭಕ್ತಾಧಿಗಳು ಆಗಮಿಸಿ ಸ್ವಾಮಿಯ ರಥಕ್ಕೆ ಬಾಳೆಹಣ್ಣು ಜವನ ಧವನಗಳನ್ನು ತೂರಿ ಭಕ್ತಿ ಭಾವ ಮೆರೆದರು. ಗ್ರಾಮದ ಪ್ರಮುಖ ಬೀದಿಯಲ್ಲಿ ತೇರು ಎಳೆದು ಸಂತಸಪಟ್ಟರು. ರಥೋತ್ಸವದ ವೇಳೆ ಭಜನೆ, ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು.

ಇನ್ನೂ ಜಾತ್ರಾ ದಿನಗಳಲ್ಲಿ ಶ್ರೀ ವೆಂಕಟರಮಣಸ್ವಾಮಿಗೆ ಅಂಕುರಾರ್ಪಣೆ, ಕಲ್ಯಾಣೋತ್ಸವ, ದ್ವಜಾರೋಹಣ, ಶೇಷವಾಹನ, ಸಿಂಹವಾಹನ, ಹಂಸವಾಹನ, ಕಲ್ಪವೃಕ್ಷವಾಹನ, ಮುತ್ತಿನಚಪ್ಪರವಾಹನ, ಸರ್ಪಭೂಪಾಲ ವಾಹನ, ವೈಕುಂಟಮುಡಿ ಕಿರೀಟಧಾರಣ ಮಹೋತ್ಸವ, ಮೋಹಿನಿ ಅವತಾರ ಉತ್ಸವ, ಗರುಡ ಸೇವೆ, ಹನುಮಂತವಾಹನ, ವಸಂತೋತ್ಸವ ಗಜವಾಹನ, ಸೂರ್ಯಪ್ರಭ ವಾಹನ, ಚಂದ್ರಪ್ರಭಾ ವಾಹನ, ಗಜೇಂದ್ರ ಮೋಕ್ಷ, ಪುಷ್ಪಯಾಗ, ಡೋಲೋತ್ಸವ, ಅಶ್ವವಾಹನ, ತೀರ್ಥಸ್ನಾನ, ಮಹಾಭಿಷೇಕ, ಧ್ವಜಾಅವರೋಹಣ ಮುಂತಾದ ವಿಧಿ ವಿಧಾನಗಳನ್ನು ವೈಭವದಿಂದ ಹಮ್ಮಿಕೊಳ್ಳಲಾಗಿತ್ತು.

ಜಾತ್ರೆಗ ಬಂದ ಭಕ್ತಾಧಿಗಳಿಗೆ ಈ ಸಂದರ್ಭದಲ್ಲಿ ಅನ್ನಸಂತರ್ಪಣೆ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ವೆಂಕಟರಮಣಸ್ವಾಮಿಯ ಜಾತ್ರೆಯನ್ನು ದೊಡ್ಡಚಿಕ್ಕನಹಳ್ಳಿಯು ಸೇರಿದಂತೆ ಅಕ್ಕಪಕ್ಕದ ಹತ್ತಾರು ಹಳ್ಳಿಗಳ ಜನರು ಈ ಜಾತ್ರಾ ಮಹೋತ್ಸವದಲ್ಲಿ ಪಾಲ್ಗೊಂಡಿದ್ದು ಇಲ್ಲಿನ ವಿಶೇಷ ಸಂಗತಿಯಾಗಿತ್ತು.

ವರದಿ: ಜನಮನ ಗೋವಿಂದರಾಜು



# ಮೇಲುಕೋಟೆ ವೈರಮುಡಿ ವಿಶೇಷತೆ

– ಜನಮನ ಗೋವಿಂದರಾಜು
ದೊಡ್ಡಚಿಕ್ಕನಹಳ್ಳಿ

ಮೇಲುಕೋಟೆ ವೈರಮುಡಿ ಎಂಬುದು ಮಂಡ್ಯ ಜಿಲ್ಲೆಯ ಮೇಲುಕೋಟೆಯಲ್ಲಿ ಶ್ರಿ ಚೆಲುವನಾರಾಯಣಸ್ವಾಮಿ ದೇವಸ್ಥಾನದಲ್ಲಿ ಪ್ರತಿ ವರ್ಷ ನಡೆಯುವ ವಿಶ್ವ ಪ್ರಸಿದ್ಧ ಬ್ರಹೋತ್ಸವ. ಇದರ ಮುಖ್ಯ ಆಕರ್ಷಣೆ ದೇವರಿಗೆ ವಜ್ರಗಳಿಂದ ಹೊದಿಸಿದ ವೈರಮುಡಿ ಕಿರೀಟವನ್ನು ಅಲಂಕರಿಸುವುದು. ಶ್ರೀಮಾನ್ ನಾರಾಯಣನ ವಜ್ರದ ವೈರಮುಡಿ ಕಿರೀಟವು ಗರುಡನಿಂದ ತರಲ್ಪಟ್ಟಿದೆ ಎಂಬ ನಂಬಿಕೆಯಿದ್ದು ಸೂರ್ಯನ ಬೆಳಕು ತಗಲಬಾರದೆಂಬ ಕಾರಣಕ್ಕೆ ರಾತ್ರಿ ವೇಳೆಯಲ್ಲಿ ಮೆರವಣಿಗೆ ನಡೆಯುತ್ತದೆ. ಈ ವೈರಮುಡಿ ಕಿರೀಟವನ್ನು ದೇವಸ್ಥಾನದ ಪ್ರಧಾನ ಅರ್ಚಕರು ರೇಷ್ಮೆ ಬಟ್ಟೆಯಿಂದ ತಮ್ಮ ಕಣ್ಣುಗಳನ್ನು ಮುಚ್ಚಿಕೊಂಡು ದೇವರಿಗೆ ಧರಿಸುತ್ತಾರೆ. ಏಕೆಂದರೆ ಅದನ್ನು ನೇರವಾಗಿ ನೋಡುವುದು ನಿಷಿದ್ಧ. ದ್ವಾರಕೆಯಲ್ಲಿ ವಿಷ್ಣುವಿಗೆ ಸೇರಿದ ಈ ಕಿರೀಟವನ್ನು ಒಮ್ಮೆ ವಿರೋಚನ ಎಂಬ ರಾಕ್ಷಸನು ಕದ್ದಿದ್ದನು. ಆಗ ಗರುಡನು ರಾಕ್ಷಸನನ್ನು ಹೆದರಿಸಿ ಓಡಿಸಿ ಕಿರೀಟವನ್ನು ತಂದು ಶ್ರೀ ಕೃಷ್ಣನಿಗೆ ನೀಡಿತ್ತೆಂದು ನಂತರ ಶ್ರೀಕೃಷ್ಣನು ಅದನ್ನು ಚೆಲುವನಾರಾಯಣಸ್ವಾಮಿಗೆ ಅರ್ಪಿಸಿದರೆಂದು ಅಂದಿನಿಂದ ಇದು ಚೆಲುವನಾರಾಯಣಸ್ವಾಮಿ ಕಿರೀಟವಾಗಿ ಅರ್ಪಿತವಾಗಿದೆ ಎಂದು ತಿಳಿದು ಬಂದಿದೆ.




ಅಂದು ಗರುಡ ಚೆಲುವನಾರಾಯಣ ಸ್ವಾಮಿಯನ್ನು ಹೆಗಲ ಮೇಲೇರಿಸಿಕೊಂಡು ಉತ್ಸವ ಮಾಡಿದ ಕಾರಣ ಇಂದಿಗೂ ಮೇಲುಕೋಟೆಯಲ್ಲಿ ವೈರಮುಡಿ ಉತ್ಸವ ಗರುಡ ವಾಹನದ ಮೇಲೆಯೇ ಜರುಗುತ್ತದೆ. ಇದೇ ಬ್ರಹ್ಮೋತ್ಸವ ಸಮೃದ್ಧಿ ಸಂಪತ್ತು ಹಾಗೂ ಸಂಭ್ರಮದ ಸಂಕೇತವಾದ ನವದಾನ್ಯಗಳ ಅಂಕುರಾರ್ಪಣೆಯೊಂದಿಗೆ ಪಾಲ್ಗುಣ ಪುಷ್ಯ ನಕ್ಷತ್ರದಲ್ಲಿ ವೈರಮುಡಿ ಪ್ರಾರಂಭವಾಗುತ್ತದೆ. ಆಚಾರ್ಯ ರಾಮಾನುಜರು ಮೇಲುಕೋಟೆಯಲ್ಲಿ ದೇವಸ್ಥಾನವನ್ನು ಪುನಶ್ಚೇತನಗೊಳಿಸಿದ ನಂತರ ಈ ಐತಿಹಾಸಿಕ ವೈರಮುಡಿ ಬ್ರಹ್ಮೋತ್ಸವವನ್ನು ಆರಂಭಿಸಿದರು ಎನ್ನಲಾಗಿದೆ.

**ಈ ವೈರಮುಡಿ ಬ್ರಹ್ಮೋತ್ಸವವು ಪ್ರತಿ ವರ್ಷ ಮಾರ್ಚ್ ಅಥವಾ ಏಪ್ರಿಲ್ (ಪಾಲ್ಗುಣ ಮಾಸ) ತಿಂಗಳಲ್ಲಿ 10 ದಿನಗಳ ಕಾಲ ಬಹಳ ವಿಜೃಂಭಣೆಯಿಂದ ನಡೆಯುತ್ತದೆ. ಈ ಬಾರಿ ಮಾರ್ಚ್ 28 ರಂದು ನಡೆಯಲಿದೆ.**

ಮೊದಲಿಗೆ ಗರುಡನಿಗೆ ಪೂಜೆ ಸಲ್ಲಿಸಿ ಮೇಲುಕೋಟೆ ಗ್ರಾಮದ ಸುತ್ತಲೂ ಮೆರವಣಿಗೆ ಮಾಡಲಾಗುತ್ತದೆ. ಮೂರನೆ ದಿನ ಕಲ್ಯಾಣೋತ್ಸವ, ನಾಲ್ಕನೇ ದಿನ ವಸಂತೋಧ್ಯಾನ ಮಂಟಪಗಳಿಗೆ ಚೆಲುವನಾರಾಯಣಸ್ವಾಮಿಯ ಮೆರವಣಿಗೆ ಹೋಗುತ್ತದೆ. ಬ್ರಹ್ಮೋತ್ಸದ ಬಹುಮುಖ್ಯ ದಿನವೇ ವೈರಮುಡಿ ಉತ್ಸವ, ರಾಜ ಒಡೆಯರು ಕೊಟ್ಟಿರುವ ರಾಜಮುಡಿ. ಮುಮ್ಮಡಿ ಕೃಷ್ಣರಾಜ ಒಡೆಯರು ನೀಡಿರುವ ಕೃಷ್ಣಮುಡಿ. ಮತ್ತು ರಾಜ ಪರಂಪರೆಯಿಂದ ಬಂದಿರುವ ನವರತ್ನ ಖಚಿತಪದಪೀಠ, ಅರಳೆಲೆ ಪದಕ, ಮುತ್ತು ರತ್ನಗಳ ಕರ್ಣಕುಂಡಲಗಳು, ಮುತ್ತಿನ ಮಣಿಕಟ್ಟು, ಗಂಡಭೇರುಂಡದ ವಜ್ರಾಹಾರ, ಮುತ್ತು ಮತ್ತು ಪಚ್ಚೆ ಕಲ್ಲಿನ ಕೂರುಂಬ, ಶಂಖ, ಚಕ್ರ, ಗದೆ ಸೇರಿದಂತೆ ಬೆಲೆ ಕಟ್ಟಲಾಗದ ಅತ್ಯಮೂಲ್ಯ ಇಪ್ಪತ್ತನಾಲ್ಕು ಆಭರಣಗಳನ್ನು ಸ್ವಾಮಿಗೆ ಧರಿಸಲಾಗುತ್ತದೆ.

ಇದು ಕರ್ನಾಟಕದ ಅತ್ಯಂತ ಭವ್ಯ ಧಾರ್ಮಿಕ ಆಚರಣೆಯಲ್ಲೊಂದು. ಒಡವೆ ವೈಡೂರ್ಯಗಳಿಂದ ಆರಂಭವಾಗುವ ವಿಶೇಷ ಪೂಜಾ ಪದ್ಧತಿಗಳು ಮತ್ತು ಕಣ್ಮನ ಸೆಳೆವ ಅತ್ಯದ್ಭುತ ಆಭರಣಗಳು ವೈರಮುಡಿ ಉತ್ಸವದ ಆಕರ್ಷಣೆ ಬಹು ವೈಭವೋಪೇತವಾಗಿರುತ್ತದೆ. ಹಾಗಾಗಿ ಈ ಮೇಲುಕೋಟೆ ವೈರಮುಡಿ ಉತ್ಸವ ಜಗತ್ಪ್ರಸಿದ್ಧವಾಗಿದೆ. ವೈರಮುಡಿ ಎಂಬುದು ಹೆಸರೇ ಹೇಳುವಂತೆ ವಜ್ರಾಭರಣದ ಒಂದು ಕಿರೀಟ, ವೈರಮುಡಿ ಕಿರೀಟವನ್ನು ದೇವರಿಗೆ ಅರ್ಪಿಸಿ ರಾತ್ರಿಯಿಡಿ ಅಂದರೆ ರಾತ್ರಿ 9 ಗಂಟೆಯಿಂದ ಬೆಳಿಗ್ಗೆ 3 ಗಂಟೆಯವರೆಗೆ ಮೆರವಣಿಗೆ ನಡೆಯುತ್ತದೆ. ಕರ್ನಾಟಕದ ಅತ್ಯಂತ ಭವ್ಯ ಮತ್ತು ವಿಶಿಷ್ಟ ಧಾರ್ಮಿಕ ಆಚರಣೆಗಳಲ್ಲಿ ಇದೂ ಸಹ ಒಂದಾಗಿದೆ. ದೇಶದ ಮೂಲೆ ಮೂಲೆಗಳಿಂದ ಲಕ್ಷಾಂತರ ಭಕ್ತರು ಈ ವೈರಮುಡಿ ಉತ್ಸವಕ್ಕೆ ಪಾಲ್ಗೊಂಡು ಸಂಭ್ರಮಿಸುತ್ತಾರೆ.

ಜನಮನ ಸೇವಾ ಚಾರಿಟೇಬಲ್ ಟ್ರಸ್ಟ್ (ರಿ).
ಮತ್ತು ಸ್ಥಳೀಯ ನಾಗರೀಕರಿಂದ
**ಶ್ರೀರಾಮ ನವಮಿ**
ಆಚರಿಸಲಾಗುವುದು
ದಿನಾಂಕ:29/03/2025 ಭಾನುವಾರ, ಮಧ್ಯಾನ 12 ಗಂಟೆಗೆ
ಸ್ಥಳ; ಜನಮನ ಸೇವಾ ಚಾರಿಟೇಬಲ್ ಟ್ರಸ್ಟ್ (ರಿ) ಕಛೇರಿ, ಕಾಮಾಕ್ಷಿಪಾಳ್ಯ, ಬೆಂಗಳೂರು–79
ಎಲ್ಲರಿಗೂ ಸುಸ್ವಾಗತ
ಜನಮನ ಗೋವಿಂದರಾಜು
ಅಧ್ಯಕ್ಷರು

# ನೋಡ ಬನ್ನಿ... ನುಗ್ಗೇಹಳ್ಳಿಯ ಶಿಲ್ಪಕಲಾ ಸೊಬಗಾ...!





- ಮಲಿಯಪ್ಪ (ರಾಜು)

ಸುಮಾರು ಎಂಟು ನೂರು ವರ್ಷಗಳ ಪುರಾತನವಾದ ಈ ದೇವಾಲಯವನ್ನು 12ನೇ ಶತಮಾನದಲ್ಲಿ ಹೊಯ್ಸರ ರಾಜ ವೀರ ಸೋಮೇಶ್ವರನ ಕಾಲದಲ್ಲಿ ಅವನ ದಂಡನಾಯಕ ಬೊಮ್ಮಣ್ಣ ನಿರ್ಮಿಸಿದನೆಂಬ ಇತಿಹಾಸವಿದೆ.
ಈ ಊರನ್ನು ಹಿಂದಿನ ಕಾಲದಲ್ಲಿ ವಿಜಯ ಸೋಮನಾಥಪುರ ಎಂದು ಕರೆಯಲಾಗುತ್ತಿತ್ತಂತೆ. ವಿಜಯನಗರದ ಅರಸರ ಕಾಲದಲ್ಲಿ ಇದನ್ನು 'ನುಗ್ಗೇಹಳ್ಳಿ' ಎಂದು ಕರೆಯಲಾಯಿತು ಎಂಬ ಪ್ರತೀತಿ ಇದೆ. ಈ ನರಸಿಂಹನ ದೇವಾಲಯದ ಹತ್ತಿರದಲ್ಲಿ ಆರ್ಸಬ ಎಂಬ ಋಷಿಗಳು ತಪಸ್ಸು ಮಾಡಿದ್ದರಂತೆ. ಇವರ ತಪಸ್ಸಿಗೆ ಮೆಚ್ಚಿ ಸಾಕ್ಷಾತ್ ನರಸಿಂಹಸ್ವಾಮಿಯು ಇಲ್ಲಿ ದರ್ಶನ ನೀಡಿದರೆಂಬ ದಂತಕಥೆ ಇಲ್ಲಿದೆ.

ನಮ್ಮ ನಾಡು ಶಿಲ್ಪಕಲಾ ಸೊಬಗಿನ ಬೀಡು. ಇಲ್ಲಿರುವ ಅಪೂರ್ವ ಶಿಲ್ಪಕಲಾ ಸೌಂದರ್ಯದ ದೇವಾಲಯಗಳು ಪ್ರವಾಸಿಗರನ್ನು ಆಕರ್ಷಿಸುವುದರ ಜೊತೆಗೆ ನಾಡಿನ ಹಲವು ರಾಜರ ಆಳ್ವಿಕೆಯನ್ನು ಸಹ ಜನರಿಗೆ ಪರಿಚಯ ಮಾಡಿಸುತ್ತವೆ ಎಂದು ಹೇಳಬಹುದು. ಶಿಲ್ಪಕಲೆ ಎಂದ ತಕ್ಷಣ ನಮ್ಮ ಕಣ್ಣ ಮುಂದೆ ಬರುವುದು ಬೇಲೂರು ಮತ್ತು ಹಳೇಬೀಡು. ಅವುಗಳಂತೆಯೇ ರಾಜ್ಯದಲ್ಲಿ ನೂರಾರು ದೇವಾಲಯಗಳಿದ್ದರೂ, ಸಹ ಪ್ರಚಾರದ ಕೊರತೆಯಿಂದ ಪ್ರವಾಸಿಗರಿಂದ ದೂರವೇ ಉಳಿದಿವೆ. ಇಂತಹ ದೇವಾಲಯಗಳ ಪೈಕಿ ನುಗ್ಗೇಹಳ್ಳಿಯೂ ಸಹ ಒಂದು. ಇದು ಇರುವುದೂ ಸಹ ಹಾಸನ ಬಳಿಯಲ್ಲಿಯೇ..
ಶಿಲ್ಪಕಲೆಯಿಂದ ಇಡೀ ದೇಶದಲ್ಲಿಯೇ ಪ್ರಸಿದ್ಧಿ ಪಡೆದಿರುವ ಹಾಸನ ಜಿಲ್ಲೆಯ ಚನ್ನರಾಯಪಟ್ಟಣ ತಾಲ್ಲೂಕಿನಲ್ಲಿರುವ ನುಗ್ಗೇಹಳ್ಳಿಯಲ್ಲಿರುವ್ವ ಎರೆಡು ದೇವಾಲಯಗಳು ಹೊಯ್ಸಳರ ಕಾಲದ ಕಲಾ ಶ್ರೀಮಂತಿಕೆಯನ್ನು ಸಾರಿ ಹೇಳುವಂತಿವೆ.
ಈ ಗ್ರಾಮದಲ್ಲಿ ಸುಂದರವಾದ ಲಕ್ಷ್ಮೀನರಸಿಂಹ ಮತ್ತು ಸೋಮೇಶ್ವರ ದೇವಾಲಯಗಳಿವೆ. ಇವುಗಳಲ್ಲಿ ಮುಖ್ಯವಾದದ್ದು ಲಕ್ಷ್ಮೀನರಸಿಂಹ ದೇವಾಲಯ. ಇದು ತನ್ನ ಶಿಲ್ಪಕಲಾ ಸೌಂದರ್ಯದಿಂದ ಪ್ರವಾಸಿಗರನ್ನು ಸೆಳೆಯುವಲ್ಲಿ ಯಶಸ್ವಿಯಾಗಿದೆ.



ಈ ದೇವಾಲಯಗಳು ತನ್ನ ಶಿಲ್ಪಕಲೆಯಿಂದ ಪ್ರವಾಸಿಗರನ್ನು ಆಕರ್ಷಿಸುವುದರ ಜೊತೆಗೆ ಆಸ್ತಿಕರ ಪ್ರಮುಖ ಧಾರ್ಮಿಕ ತಾಣವಾಗಿಯೂ ಸಹ ರೂಪುಗೊಂಡಿದೆ. ಸಾಮಾನ್ಯವಾಗಿ ಹೊಯ್ಸಳರು ಎರೆಡು ದೇವಾಲಯಗಳನ್ನು ಒಂದು ಗ್ರಾಮದಲ್ಲಿ ನಿರ್ಮಿಸಿರುವುದನ್ನು ನಾವು ರಾಜ್ಯದ ಹಲವೆಡೆ ನೋಡಬಹುದು. ಅದರಲ್ಲಿ ಒಂದು ವಿಷ್ಣುವಿಗೆ ಸೇರಿದ್ದಾಗಿದ್ದರೆ, ಮತ್ತೊಂದು ಶಿವನಿಗೆ ಸೇರಿದ್ದಾಗಿರುತ್ತದೆ. ಅದೇ ರೀತಿ ನುಗ್ಗೇಹಳ್ಳಿಯಲ್ಲಿಯೂ ಸಹ ಎರಡು ದೇವಾಲಯಗಳನ್ನು ಕಾಣಬಹುದು.

**ಕಥೆಗಳನ್ನು ಹೇಳುವ ಕಲ್ಲುಗಳು...!**

ದೂರದಿಂದ ತುಂಬಾ ಸುಂದರವಾಗಿ ಕಾಣುವ ನರಸಿಂಹ ದೇವಾಲಯವನ್ನು ಪ್ರವೇಶಿಸಿದಾಗ ನಮಗೆ ಸಾಧಾರಣ ಶೈಲಿಯ ಚೌಕಾಕಾರದ ಕಂಬಗಳ ಮುಖಮಂಟಪ ಕಂಡು ಬರುತ್ತದೆ. ಮುಂದೆ ಹೋದರೆ ಮೂರು ಗರ್ಭಗುಡಿಗಳನ್ನು ಒಳಗೊಂಡ ನವರಂಗವಿದೆ. ಇಲ್ಲಿರುವ ಕಲ್ಲಿನ ಕಂಬಗಳು ಬಹಳ ನುಣುಪಾಗಿದ್ದು, ಹೊಳೆಯುವಂತಿವೆ. ಮೇಲ್ಛಾವಣಿಯಲ್ಲಿ ಸುಂದರವಾದ ಕೆತ್ತನೆಯನ್ನು ವೀಕ್ಷಿಸಬಹುದು.
ದೇವಾಲಯದ ಗೋಡೆಗಳು ಮಹಾಭಾರತ ಮತ್ತು ರಾಮಾಯಣದ ಕಥೆಗಳನ್ನು ಹೇಳುತ್ತವೆ. ಪುರಾಣದ ಕಥೆಗಳನ್ನು ಶಿಲ್ಪಗಳ ಮೂಲಕ ಇಲ್ಲಿ ಬಹಳ ಸುಂದರವಾಗಿ ಚಿತ್ರಿಸಲಾಗಿದ್ದು, ಪ್ರವಾಸಿಗರನ್ನು ಆಕರ್ಷಿಸುವಂತೆ ಕಲ್ಲಿನಲ್ಲಿ ಕೆತ್ತಲಾಗಿದೆ. ಇಲ್ಲಿರುವ ಬಹುತೇಕ ಶಿಲ್ಪಗಳು ವೈಷ್ಣವ ಪಂಥವನ್ನು ಪ್ರತಿನಿಧಿಸುತ್ತವೆ.
ನಕ್ಷತ್ರಾಕಾರದ ನಾಲ್ಕು ಅಡಿ ಎತ್ತರದ ಜಗಲಿ ಮೇಲೆ ಈ ದೇವಾಲಯವನ್ನು ಕಟ್ಟಲಾಗಿದೆ. ಗರ್ಭಗುಡಿಗಳಲ್ಲಿ ಸ್ವಾಮಿ ನಮ್ಮಾಳ್ವಾರ್, ರಾಮಾನುಜಚಾರ್ಯರು, ಸೋಮಯಾಜಿ ಆಂಡವನ್ ವಿಗ್ರಹಗಳಿವೆ. ಮತ್ತೊಂದು ಭಾಗದಲ್ಲಿ ಕೈಯಲ್ಲಿ ಕೊಳು ಹಿಡಿದು ನಿಂತಿರುವ ವೇಣುಗೋಪಾಲಸ್ವಾಮಿಯ ಸುಂದರ ಮೂರ್ತಿ ಇದೆ. ಮುಖ್ಯವಾದ ಗರ್ಭಗುಡಿಯಲ್ಲಿ ಲಕ್ಷ್ಮೀನರಸಿಂಹನು ವಿರಾಜಮಾನರಾಗಿ ಕುಳಿತಿದ್ದಾರೆ. ಮೂರ್ತಿಯ ಎಡ ತೊಡೆಯ ಮೇಲೆ ಲಕ್ಷ್ಮೀದೇವಿ ಕುಳಿತಿದ್ದಾರೆ. ನರಸಿಂಹನ ಕೈಗಳಲ್ಲಿ ಶಂಕ ಮತ್ತು ಚಕ್ರಗಳನ್ನು ಕಾಣಬಹುದು.



**ಹೋಗೋದು ಹೇಗೆ?**

ಬೆಂಗಳೂರಿನಿಂದ ಸುಮಾರು 134 ಕಿಲೋ ಮೀಟರ್ ದೂರದಲ್ಲಿದೆ. ಹಾಸನದಿಂದ 50 ಕಿಲೋ ಮೀಟರ್ ಮತ್ತು ಚನ್ನರಾಯಪಟ್ಟಣದಿಂದ ಸುಮಾರು 20 ಕಿಲೋ ಮೀಟರ್ ದೂರವಿದೆ. ಶ್ರವಣಬೆಳಗೊಳದಿಂದ ಕೇವಲ 30 ಕಿಲೋ ಮೀಟರ್ ದೂರದಲ್ಲಿದೆ. ಚನ್ನರಾಯಪಟ್ಟಣದಿಂದ ಬಸ್ಸಗಳ ಸೌಲಭ್ಯ ಉತ್ತಮವಾಗಿದೆ.



**ನವ ಜೀವನಕ್ಕೆ ಕಾಲಿಟ್ಟ ರಶ್ಮಿಕಾ ಮಂದಣ್ಣ, ವಿಜಯ್ ದೇವರಕೊಂಡ**

# ಕುತೂಹಲ ಕೆರಳಿಸಿದ ಥ್ರಿಲ್ಲರ್ 'ಸೈಕಿಕ್' ಸಿನಿಮಾ ಏ.3ಕ್ಕೆ ಬಿಡುಗಡೆ

ಕನ್ನಡ ಚಿತ್ರರಂಗದಲ್ಲಿ ವಿಭಿನ್ನ ಕಥೆಗಳೊಂದಿಗೆ ಸಿನಿಮಾ ಮಾಡುವ ನಿರ್ಮಾಪಕರಲ್ಲಿ ಸಿಲ್ಕ್ ಮಂಜು ಪ್ರಮುಖರು. ಗಾಂಧಿನಗರದ ರೂಢಿಯಲ್ಲಿರುವ ಗೆಲುವಿನ ಸೂತ್ರಗಳನ್ನು ಅನುಸರಿಸದೇ, ಹೊಸ ಆಲೋಚನೆಗಳನ್ನು ಪ್ರಯೋಗಿಸುವ ಧೈರ್ಯ ಅವರ ಸಿನಿಮಾಗಳಲ್ಲಿ ಕಾಣಿಸುತ್ತದೆ. ಅವರ ನಿರ್ಮಾಣದ ಸಿನಿಮಾಗಳ ಪಟ್ಟಿ ದೊಡ್ಡದಾಗಿರದಿದ್ದರೂ, ಪ್ರತಿಯೊಂದು ಚಿತ್ರವೂ ವಿಭಿನ್ನ ಕಥಾವಸ್ತು ಹೊಂದಿರುವುದು ವಿಶೇಷ. ಅವರ ಮೊದಲ ನಿರ್ಮಾಣವಾದ 'ಎ' ಕನ್ನಡ ಚಿತ್ರರಂಗದಲ್ಲಿ ಹೊಸ ಶೈಲಿಯ ಕಥೆಯನ್ನು ಪರಿಚಯಿಸಿದ ಸಿನಿಮಾ ಎಂದು ಇಂದಿಗೂ ನೆನಪಾಗುತ್ತದೆ. ಅದಾದ ಬಳಿಕ ಅವರು ನಿರ್ಮಿಸಿದ ಪ್ರತ್ಯರ್ಥ, ಸೂರ್ಯಕಾಂತಿ, ರಿಂಗ್ ಮಾಸ್ಟರ್ ಮುಂತಾದ ಸಿನಿಮಾಗಳು ವಿಭಿನ್ನ ಆಲೋಚನೆಗಳಿಂದ ಗಮನಸೆಳೆದವು. ಇಂತಹ ಪ್ರಯತ್ನಗಳ ಮೂಲಕ ಕನ್ನಡ ಚಿತ್ರರಂಗಕ್ಕೆ ಹಲವಾರು ಉತ್ತಮ ತಂತ್ರಜ್ಞರು ಪರಿಚಯವಾದರು ಎನ್ನುವುದು ಸಿನಿ ವಲಯದ ಮಾತು.

ಈಗ ಅದೇ ವಿಭಿನ್ನ ಧೋರಣೆಯೊಂದಿಗೆ ಅವರು ಹೊಸ ಸಿನಿಮಾ ನಿರ್ಮಿಸಿದ್ದಾರೆ. ವಿಚಿತ್ರ ಶೀರ್ಷಿಕೆ ಮತ್ತು ವಿಭಿನ್ನ ಕಥಾವಸ್ತು ಹೊಂದಿರುವ 'ಸೈಕಿಕ್' ಸಿನಿಮಾ ಗಾಂಧಿನಗರದಲ್ಲಿ ಕುತೂಹಲ ಹುಟ್ಟಿಸಿದೆ. ಅಂದಿನ 'ಎ' ಸಿನಿಮಾದಂತೆಯೇ, ಈ ಚಿತ್ರವೂ ಶೀರ್ಷಿಕೆ ಮತ್ತು ಕಥೆಯ ಕಾರಣದಿಂದಲೇ ಚರ್ಚೆಗೆ ಕಾರಣವಾಗಿದೆ.




ಚಿತ್ರದ ಕಥೆ ಕುರಿತು ಸಂಭಾಷಣೆಗಾರರಾದ ಮತ್ತು ಲೇಖಕ ಚೌತಿ ಪ್ರಸನ್ನ ಶೆಟ್ಟಿ ಅವರು ಹೇಳುವಂತೆ, ಇದು ಮೇಲ್ನೋಟಕ್ಕೆ ಅಪರಾಧ ಮತ್ತು ಹಿಂಸೆಯನ್ನು ಒಳಗೊಂಡಿರುವಂತೆ ಕಾಣಬಹುದು. ಆದರೆ ಕಥೆಯೊಳಗೆ ಹೋಗುತ್ತಿದ್ದಂತೆ ಪ್ರೇಕ್ಷಕರಿಗೆ ಹೊಸ ಆಯಾಮ ತೆರೆದಿಡುತ್ತದೆ. ಸಮಾಜದಲ್ಲಿ ಅಪರಾಧಗಳು ಕೇವಲ ಸ್ಲಂ ಪ್ರದೇಶಗಳಲ್ಲಿ ಮಾತ್ರ ಹುಟ್ಟುತ್ತವೆ ಎಂಬ ಕಲ್ಪನೆ ತಪ್ಪು ಎಂಬ ಸಂದೇಶವನ್ನು ಚಿತ್ರ ನೀಡುತ್ತದೆ. ವಿದ್ಯಾವಂತ ಹಾಗೂ ಸಿರಿವಂತ ಕುಟುಂಬಗಳಲ್ಲಿ ನಡೆಯುವ ಬೆಳವಣಿಗೆಗಳು ಹೇಗೆ ಕ್ರೌರ್ಯಕ್ಕೆ ಎಡೆಮಾಡಿಕೊಡುತ್ತವೆ ಎಂಬುದನ್ನು ಕಥೆಯಲ್ಲಿ ಹೇಳಹೊರಟಿದ್ದಾರೆ ನಿರ್ದೇಶಕರಾದ ಪುಷ್ಕರ್ ಗಿರಿಗೌಡ' ಎಂದು ಅವರು ತಿಳಿಸಿದ್ದಾರೆ.

ನಿರ್ದೇಶಕ ಪುಷ್ಕರ್ ಗಿರಿಗೌಡ ಅವರಿಗೂ ಇದು ವಿಶೇಷ ಸಿನಿಮಾ. ಈಗಾಗಲೇ ಹಲವು ಸಿನಿಮಾಗಳಿಗೆ ಸಂಕಲನಕಾರರಾಗಿ ಕೆಲಸ ಮಾಡಿದ ಅವರು, ಈ ಚಿತ್ರದ ಮೂಲಕ ಸ್ವತಂತ್ರ ನಿರ್ದೇಶಕರಾಗಿ ಹೊರಹೊಮ್ಮುತ್ತಿದ್ದಾರೆ. ನಿರ್ಮಾಪಕರ ಬೆಂಬಲದಿಂದ ಚಿತ್ರಕ್ಕೆ ಅಗತ್ಯವಿರುವ ಎಲ್ಲಾ ತಾಂತ್ರಿಕ ಸೌಲಭ್ಯಗಳನ್ನು ಒದಗಿಸಲಾಗಿದ್ದು, ಕಲಾವಿದರು ಹಾಗೂ ತಂತ್ರಜ್ಞರ ಸಹಕಾರದಿಂದ ಸಿನಿಮಾ ಅಚ್ಚುಕಟ್ಟಾಗಿ ಮೂಡಿ ಬಂದಿದೆ ಎಂದು ಅವರು ಹೇಳಿದ್ದಾರೆ.

ಕ್ರೈಂ, ಥ್ರಿಲ್ಲರ್ ಹಾಗೂ ತನಿಖೆ ಅಂಶಗಳನ್ನು ಒಳಗೊಂಡ ಈ ಚಿತ್ರದಲ್ಲಿ ಸಾಮಾನ್ಯವಾಗಿ ಕಾಣುವ ರಕ್ತಸಿಕ್ತ ದೃಶ್ಯಗಳನ್ನು ಹೆಚ್ಚಾಗಿ ತೋರಿಸದೆ, ಕ್ರೌರ್ಯವನ್ನು ಪರೋಕ್ಷವಾಗಿ ಮನದಟ್ಟು ಮಾಡುವ ರೀತಿಯಲ್ಲಿ ದೃಶ್ಯ ಸಂಯೋಜನೆ ಮಾಡಲಾಗಿದೆ. ಅದಕ್ಕೆ ಪೂರಕವಾಗಿ ಛಾಯಾಗ್ರಹಣ, ಹಿನ್ನೆಲೆ ಸಂಗೀತ ಹಾಗೂ ಡಿ.ಟಿ.ಎಸ್ ತಂತ್ರಜ್ಞಾನಕ್ಕೂ ವಿಶೇಷ ಗಮನ ನೀಡಲಾಗಿದೆ. ಇನ್ನೂ ಕೆಲವು ಪ್ರಮುಖ ಅಂಶಗಳನ್ನು ಟ್ರೈಲರ್‌ನಲ್ಲಿ ಬಿಟ್ಟುಕೊಟ್ಟಿಲ್ಲ ಎಂದು ಚಿತ್ರತಂಡ ಹೇಳುತ್ತಿದೆ. ಚಿತ್ರದಲ್ಲಿ ಸರ್ದಾರ್ ಸತ್ಯ ವಿಶೇಷ ಪಾತ್ರದಲ್ಲಿ ಕಾಣಿಸಿಕೊಂಡಿದ್ದು, ಹಿಂದೆಂದೂ ನೋಡಸಿಗದ ಸರ್ದಾರ್ ಸತ್ಯ 'ಸೈಕಿಕ್' ಪಾತ್ರದಲ್ಲಿ ಸಿಗುತ್ತಾರೆ. ಟೀಸರ್ ಮೂಲಕ ಅದರ ಝಲಕ್ ಅನಾವರಣಗೊಂಡಿದೆ. ಕೈಲಾಸ್ ದೇವ್, ನಿಖಿತಾ ದೋರ್ತೋಡಿ, ರೇಷ್ಮಾ ಲಿಂಗರಾಜಪ್ಪ, ರೋಹಿತ್ ನಾಗೇಶ್, ಕೇಶವ್ ಗುತ್ತಳಿಕೆ ಸೇರಿದಂತೆ ಹಲವರು ಅಭಿನಯಿಸಿದ್ದಾರೆ. ಸಿಲ್ಕ್ ಸಿನಿಮಾ ಅರ್ಪಿಸುವ ಈ ಚಿತ್ರಕ್ಕೆ ಚೇತನ್ ಮಂಜುನಾಥ್ ನಿರ್ಮಾಪಕರು. ವೈ.ಎಸ್. ಶ್ರೀಧರ್ ಸಂಕಲನ, ಚೌತಿ ಪ್ರಸನ್ನ ಶೆಟ್ಟಿ ಸಂಭಾಷಣೆ, ಗೋಪಿ ಜಾ ಸಾಹಸ ಸಂಯೋಜನೆ ಹಾಗೂ ಸಿನಿಟೆಕ್ ಸೂರಿ ಅವರ ಛಾಯಾಗ್ರಹಣ ಚಿತ್ರಕ್ಕಿದೆ.

ಸಮಾಜದಲ್ಲಿ ಕಾಣಿಸದ ಕೆಲವು ಸತ್ಯಗಳನ್ನು ಅನಾವರಣಗೊಳಿಸುವ ಪ್ರಯತ್ನವೇ ಈ 'ಸೈಕಿಕ್' ಸಿನಿಮಾ ಎಂಬುದು ಚಿತ್ರತಂಡದ ಮಾತು. "ಕೆಲವು ರಹಸ್ಯಗಳು ಮಣ್ಣಿನಡಿಯಲ್ಲಿ ಉಳಿಯುವುದಿಲ್ಲ, ಕೆಲವು ದೃಶ್ಯಗಳು ಸುಳ್ಳಾಗುವುದಿಲ್ಲ" ಎಂಬ ಟ್ಯಾಗ್‌ಲೈನ್‌ನೊಂದಿಗೆ ಬರುತ್ತಿರುವ ಈ ಸಿನಿಮಾ ಪ್ರೇಕ್ಷಕರಿಗೆ ಹೊಸ ಅನುಭವ ನೀಡುವ ನಿರೀಕ್ಷೆಯಿದೆ. ರೋಮಾಂಚಕ ಥ್ರಿಲ್ಲರ್ ಆಗಿರುವ ಈ ಸಿನಿಮಾ ಇದೇ ಏಪ್ರಿಲ್ 3 ರಿಂದ ಚಿತ್ರಮಂದಿರಗಳಲ್ಲಿ ಬಿಡುಗಡೆಯಾಗಲಿದೆ. ಕನ್ನಡ ಪ್ರೇಕ್ಷಕರು ಈ ಹೊಸ ಪ್ರಯತ್ನವನ್ನು ಹೇಗೆ ಸ್ವೀಕರಿಸುತ್ತಾರೆ ಎಂಬ ಕುತೂಹಲ ಸಿನಿ ವಲಯದಲ್ಲಿದೆ.

– ರಾಯಲ್ ರವಿ

# ಕಂಚಿ-ಕೋ
# ಸ್ನೇಹ ಸಿಲ್ಕ್ಸ್

+919845579667

+919980759778

Scan for Location

ಗ್ರೌಂಡ್ ಫ್ಲೋರ್ ,ಕೆ.ಎಸ್.ಮಾರ್ಕೆಟ್, ನಂ.761,
ಚಿಕ್ಕಪೇಟೆ ರೋಡ್, ರಂಗ ಕಾಂಪ್ಲೆಟ್ಸ್ ಹತ್ತಿರ,
**ಚಿಕ್ಕಪೇಟೆ, ಬೆಂಗಳೂರು – 560053.**







**ಕಾಂಚೀಪುರಂ ಮತ್ತು ಎಲ್ಲಾ ವಿಧದ ರೇಷ್ಮೆ ಸೀರೆಗಳ**

**ತಯಾರಕರು ಹಾಗೂ ಫ್ಯಾನ್ಸಿ ಸೀರೆಗಳ**

**ಹೋಲ್ ಸೇಲ್ ಮಾರಾಟಗಾರರು**

**ವಿಶೇಷವಾದ ಮದುವೆ ಸೀರೆಗಳ ಸಂಗ್ರಹಗಾರರು**




# SNEHA SILKS

**Ground Floor, K.S.Market, 761, Chickpet Road,**

**Near Ranga Complex, Ragipet, Huriopet,**

**Chickpet, Bangalore - 560053.**

"

**Kancheepur and Manufacturer of all types of Silk Sarees**

**And wholesale sellers of fancy sarees**

**EXCLUSIVE IN WEDDING SAREES COLLECTION**




Printed, Edited, Published and Owned by D.N.MANJUNATH # 22, 6 th Main Road, Kempegowda School Road,Sannakkibayalu, Kamakshipalya, Bangalore-560079, Printed at Manasa Graphics, No.43/3, Agrahara Dasarahalli,Magadi Main Road, Bengaluru-560079 . e-mail : suddisangathi@gmail.com Mobile:9060474300